ಕಲ್ಯಾಣ ಕಿರಣ

ಬೆಲೆ : 4 ರೂ.

ಶ್ರೀ

ಸೆಪ್ಟೆಂಬರ್, 1994



ಕಲ್ಯಾಣ ಕಿರಣ

ಮಾಸ ಪತ್ರಿಕೆ, ಸೆಪ್ಟಂಬರ್-1994, ಬಿಡಿ ಸಂಚಿಕೆ 4-00 ರೂ.

ಸಂಪುಟ : 24 ಸಂಚಿಕೆ : 3 ಬಸವ ಶಕೆ : 889.
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಲೇಖನಗಳು ಕಿರಣಗನ್ನಡಿ

ಮುಖಪುಟ : ವಿಶ್ವಗುರು ಬಸವಣ್ಣನವರು.

ಹೊದ್ದಿಕೆಯ 4ನೇ ಪುಟ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು.

ಬೆಂಗಳೂರು ವಿಳಾಸ : **ಕಲ್ಯಾಣ ಕಿರಣ** ಮಾಸ ಪತ್ರಿಕೆ, ಬಸವ ಮಂಟಪ, 2035, 2 ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 3325335

KALYANA KIRANA - Monthly Magazine Printed and Published by B. Shambhulingaiah, at Prabhudeva Printing-Press, Basava Gangotri, Kumbalgod, Bangalore-560074. Phone : 8437234

ಸಂಪುಟ : 24 ಸಂಚಿಕೆ : 3 ಬಸವ ಶಕೆ : 889 ಸೆಪ್ಟಂಬರ್ : 1994

ಸೃಷ್ಟಿಕರ್ತನಿಗೆ ಶರಣು

ಹೇ ಪರಮಾತ್ಮ ಲೋಕದ ಮಿತ್ರ
ನೀನೇ ಸರ್ವಕು ಕಾರಣ ಕರ್ತ ॥ಪ॥

ವಿಘ್ನನಿವಾರಕ ಶಕ್ತಿಯು ನೀನು
ಬುದ್ಧಿ ಪ್ರದಾಯಕ ದೇವನು ನೀನು
ವಿದ್ಯಾ ಸಂಪದ ಶಾಂತಿ ಸೌಖ್ಯಗಳ
ಮಹಾದಾತನು ನೀನು ॥೧॥

ಜಗವನು ರಚಿಸಿದ ತಂದೆಯು ನೀನು
ಸೊಗದಿಂ ಪಾಲಿಪ ತಾಯಿಯು ನೀನು
ದುರಿತ ಸಂಕುಲ ಮುಸುಕುತ ಬರಲು
ಪಾರುಮಾಡುವ ಕರುಣೆಯು ನೀನು ॥೨॥

ಮರೆವಿನ ತಿಮಿರದಿ ಮನವು ಮುಲಗುತ
ಮುಂದಡಿ ಇಡದೆಯೆ ಬಳಲುತಿರೆ
ಅರಿವಿನ ಬೆಳಕನು ಪಥದಲ್ಲಿ ಚೆಲ್ಲುತ
ಮುಂದಡಿ ಇಡಿಸುವ ಗುರು ನೀನು ॥೩॥

ಅಂದಿನ ಅನ್ನವ ನೀಡುವ ನೀನು
ಬಂಧನ ಹರಿಸುವ ಭವಹರ ಭಾನು
ಬಾಳಲಿ ನಡೆಯಲು ಆತ್ಮ ಬಲವ
ನೀಡುವ ಮಂಗಲ ಶಕ್ತಿಯು ನೀನು ॥೪॥

ನಿನ್ನನ್ನಲ್ಲದೆ ಯಾರನು ಬೇಡೆನು
ಬನ್ನವ ಕಳೆಯುವ ಚಿನ್ಮಯನೆ
ಎನ್ನಯ ಜೀವನ ಸರ್ವಸಂಪದದಿ
ಬೆಳಗಲು ಕರುಣಿಸು ಸಚ್ಚಿದಾನಂದ ॥೫॥

—ಮಾತಾಜಿ

[ಈ ಪದವು ಸೃಷ್ಟಿಕರ್ತನನ್ನು ಸ್ತುತಿಸುವ ಅತ್ಯಂತ ಅರ್ಥ ಗರ್ಭಿತಪದ, ನಿತ್ಯ ಪ್ರಾರ್ಥನೆಯಲ್ಲಿ ಹಾಡಿ, ಮನನ ಮಾಡಲು ಬಹಳ ಸೂಕ್ತವಾಗಿದೆ.]

ಏಕದೇವೋಪಾಸನೆ

—ಮಾತಾಜಿ

[ಓದುಗರೇ, ಇಂದು ನಮ್ಮನ್ನು ನಾವು ಮೇಲಕ್ಕೆತ್ತಿಕೊಳ್ಳಲು ಶಿಸ್ತು ಸಹಿತವಾದ ಹಿಂದೂ ರಾಷ್ಟ್ರ ಕಟ್ಟಲು ಏಕೇಶ್ವರವಾದ ಮತ್ತು ಏಕದೇವೋಪಾಸನೆ ಅತ್ಯಗತ್ಯ ಎಂದು ನನ್ನಂತರಾತ್ಮ ಒತ್ತಿ ಒತ್ತಿ ಹೇಳುತ್ತಿದೆ. ನಾನು ಬರೆಯುವ ಲೇಖನಗಳು ನನ್ನ ವೈಯಕ್ತಿಕ ಆಲೋಚನೆಗಳು. ಮೂಢನಂಬಿಕೆಯನ್ನೇ ಮೈಗೂಡಿಸಿಕೊಂಡು ಬೆಳೆಯುವ ಹಿಂದುಗಳಿಗೆ ಮತ್ತು ಸ್ವಧರ್ಮದ ಜ್ಞಾನವಿಲ್ಲದ ಲಿಂಗವಂತರು ಕೆಲವರಿಗೆ ನನ್ನ ಸ್ಪಷ್ಟ ವಿಚಾರಧಾರೆ ತುಸು ನೋವನ್ನುಂಟು ಮಾಡಬಹುದು. ನನ್ನ ಅಭಿಪ್ರಾಯಗಳಿಗೆ ನಾನೇ ಹೊಣೆ. ಆದ್ದರಿಂದ ಏನೇ ಚರ್ಚಿಸುವುದಿದ್ದರೂ ನನಗೇ ನೇರವಾಗಿ ಪತ್ರ ಬರೆಯಿರಿ. ಕಲ್ಯಾಣ ಕಿರಣದ ಮೂಲಕ ಚರ್ಚಿಸೋಣ. ನನ್ನ ಅಭಿಪ್ರಾಯದ ಲೇಖನಗಳಿಗಾಗಿ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಾಗಲೀ, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರಾಗಲೀ, ಪೂಜ್ಯ ಶ್ರೀ ಸದ್ಗುರು ಬಸವಾನಂದ ಸ್ವಾಮೀಜಿಯವರಾಗಲೀ ಹೊಣೆಗಾರರಲ್ಲ. ಈ ಮಾತನ್ನು ಏಕೆ ಬರೆಯುತ್ತೇನೆಂದರೆ ಅವರುಗಳು ಪ್ರವಚನ ಮಾಡುತ್ತ ದಿನನಿತ್ಯ ಜನರೊಡನೆ ವ್ಯವಹರಿಸಬೇಕಾಗುತ್ತದೆ. ನನ್ನ ವಿಚಾರ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡಿ, ಹೀಗೆ ಬರೆಯಬೇಡಿರಿ—ಎಂದು ಹೇಳುವ ಸಂಕುಚಿತ ಮನಸ್ಸಿನವರಲ್ಲ ಪೂಜ್ಯ ಗುರುಗಳು. ನನ್ನ ವಿಚಾರಧಾರೆಯನ್ನು ಪೂಜ್ಯ ಗುರುಗಳು ಒಪ್ಪಬಹುದು, ಬಿಡಬಹುದು. ಆದ್ದರಿಂದ ಓದುಗರು ನನಗೇ ನೇರವಾಗಿ ಪತ್ರ ಬರೆದು ಅಭಿಪ್ರಾಯ ತಿಳಿಸಬೇಕು ಎಂದು ಕೋರುತ್ತೇನೆ. —ಮಾತಾಜಿ]

ಈ ಜಗತ್ತು ಒಂದು ಕಾರ್ಯ; ಇದರ ಕಾರಣ ಸೃಷ್ಟಿಕರ್ತನಾದ ಪರಮಾತ್ಮ; ಇದು ಒಂದು ಕೃತಿ, ಇದರ ಕರ್ತ ದೇವರು. ಇದು ಒಂದು ಶಿಲ್ಪ; ಇದರ ಶಿಲ್ಪಿ ದೇವರು. ಹೀಗೆ ನೂರಾರು ಉದಾಹರಣೆಗಳ ಮೂಲಕ ವರ್ಣಿಸಬಹುದು: ಸೃಷ್ಟಿಯಾಗಿರುವ ಬ್ರಹ್ಮಾಂಡ ಒಂದು: ಇದರಲ್ಲಿ ಅನಂತ ಗೋಲಗಳು, ಗ್ರಹಗಳು, ತಾರಾಮಂಡಲ ಎಲ್ಲ ಇವೆ. ಬ್ರಹ್ಮಾಂಡದ ಒಡೆಯ ಒಬ್ಬನೇ ಒಬ್ಬ, ಅವನು ಸತ್-ಚಿತ್-ಆನಂದ-ನಿತ್ಯಪರಿಪೂರ್ಣ ಸ್ವರೂಪನು.

ಇದನ್ನು ಭಾರತೀಯ ತತ್ತ್ವವೇತ್ತರು ಎಂದೋ ಹೇಳಿದ್ದಾರೆ. ವೇದಪೂರ್ವದಲ್ಲೇ ಈ ಏಕೇಶ್ವರವಾದವನ್ನೇ ಪ್ರತಿಪಾದಿಸಿದವೆಂದು ಶ್ರೀಗುರು ಬಸವಣ್ಣನವರು ಹೇಳಿದ್ದಾರೆ.

ಇಬ್ಬರು ಮೂವರು ದೇವರೆಂದು
ಉಬ್ಬಿ ಮಾತನಾಡಬೇಡ
ದೇವನೊಬ್ಬನೇ ಕಾಣಿರೋ
ಇಬ್ಬರೆಂಬುದು ಹುಸಿನೋಡಾ
ಕೂಡಲ ಸಂಗಮದೇವನಲ್ಲದೆ
ಇಲ್ಲವೆಂದಿತ್ತು ವೇದ.

ಶ್ರೀ ದಯಾನಂದ ಸರಸ್ವತಿಯವರೂ ಇದನ್ನೇ ಪ್ರತಿಪಾದಿಸಿ, ವೇದಗಳು ಒಬ್ಬನೇ ಸೃಷ್ಟಿಕರ್ತನನ್ನು ಒಪ್ಪಿದವೆಂದು ಹೇಳಿದರು. ಏಕೇಶ್ವರವಾದವನ್ನು ಧರ್ಮಗುರು ಬಸವಣ್ಣನವರು ಎತ್ತಿಹಿಡಿದುದು ಮಾತ್ರವಲ್ಲ, ಕರ್ತನನ್ನು ಒಂದೇ ರೂಪದಲ್ಲಿ ಪೂಜಿಸಬೇಕೆಂದು ವಿಶ್ವದಾಕಾರದಲ್ಲಿ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಕೊಟ್ಟರು. ಒಬ್ಬ ದೇವ, ಅವನ ಧಾರಣೆ, ಅವನ ಪೂಜೆಯ ಮೂಲಕ ಸಮಸ್ತ ಮಾನವ ಜನಾಂಗ, ಕಡೆಯ ಪಕ್ಷ, ಜಂಬೂದ್ವೀಪ (ಹಿಂದುದೇಶ)ದಲ್ಲಿರುವ ಜನರಾದರೂ ಒಂದಾಗಲೀ, ಸಮಾಜ ಅಖಂಡವಾಗಲೀ ಎಂದು ಬಯಸಿದರು. ಅವರ ಕಳಕಳಿಯನ್ನು ಬಹುಜನರು ಅರ್ಥ ಮಾಡಿಕೊಳ್ಳಲಿಲ್ಲ; ಈಗಿನವರೂ ಅರ್ಥ ಮಾಡಿಕೊಳ್ಳುತ್ತಿಲ್ಲ.

ಈಗಾದರೂ ನೀವು ಕಣ್ತೆರೆಯಿರಿ; ಹೃನ್ಮನ ಬುದ್ಧಿಗಳ ಕಿಟಕಿ ತೆರೆದು ವಚನ ವಾಙ್ಮಯದ ಸ್ವಚ್ಛಗಾಳಿ ಬಿಟ್ಟುಕೊಳ್ಳಿರಿ. ಎಂಥಾ ಕ್ರಾಂತಿಕಾರಿ ವಿಚಾರದ, ಪ್ರಗತಿಪರ ಧೋರಣೆಯ, ಮಾನವ ಸಮಾಜವನ್ನು ತುಂಬು ಹೃದಯದಿಂದ ಪ್ರೀತಿಸುವ ಬಸವ ಗುರುವಿನಂತಹವರನ್ನು ಅರ್ಥ ಮಾಡಿಕೊಳ್ಳದೆ ಕಣ್ಣಿದ್ದೂ ಕುರುಡರು, ಕಿವಿಯಿದ್ದೂ ಕಿವುಡರೂ ಆಗಬೇಡಿರಿ.

ಏಕದೇವೋಪಾಸನೆ—ಪಾತಿವ್ರತ್ಯ

ಏಕೇಶ್ವರವಾದ—ಏಕದೇವೋಪಾಸನೆಯನ್ನು ಪರಿಶುದ್ಧ ನೀತಿವಂತಿಕೆಗೆ ಹೋಲಿಸಬಹುದು. ಭಾರತೀಯ ಸಂಸ್ಕೃತಿಯಲ್ಲಿ ಏಕಪತಿ ನಿಷ್ಠೆಯನ್ನು ಸ್ತ್ರೀಗೆ, ಏಕಪತ್ನಿ ವ್ರತವನ್ನು ಪುರುಷನಿಗೆ ಬೋಧಿಸಲಾಗುತ್ತದೆ. ಬೇರೆ ದೇಶಗಳಿಗಿಂತಲೂ ಇಲ್ಲಿ ಆ ನೀತಿವಂತಿಕೆಗೆ—ಇಂದಿನ ದುರ್ದಿನಗಳಲ್ಲಿಯೂ, ಬೆಲೆ ಇದೆ. ಒಬ್ಬ ಗಂಡ – ಒಬ್ಬ ಹೆಂಡತಿ, ಆ ತಾಯಿತಂದೆಯನ್ನು ಪ್ರೀತಿಸುವ ಮಕ್ಕಳು—ಮುದ್ದಾದ ಕುಟುಂಬ ಈ ಹಿಂದೂ ಕೌಟುಂಬಿಕ ಪರಿಕಲ್ಪನೆಯು ಜಾಗತಿಕವಾಗಿ ಸಮಾಜ ವಿಜ್ಞಾನಿಗಳ ಗಮನ ಸೆಳೆದಿದೆ. ಪಾಶ್ಚಿಮಾತ್ಯ ಸಂಸ್ಕೃತಿಯು ತದ್ವಿರುದ್ಧವಾಗಿದೆ.

ಇಲ್ಲಿ ನಾನೊಂದು ಮಾತನ್ನು ಪ್ರಾಮಾಣಿಕವಾಗಿ ಹೇಳಬೇಕು. ಮೊದಲು ಈ ವಿವಾಹ ವಿಚ್ಛೇದನ, ಹಲವು ಮದುವೆ ಆಗುವುದು, ಸುಲಭವಾಗಿ ಪತಿ—ಪತ್ನಿಯರು

ತೊರೆಯುವುದು ಮುಂತಾದ್ದು ಕ್ರೈಸ್ತ ಧರ್ಮದ ಸೈದ್ಧಾಂತಿಕ ಪ್ರಭಾವ ಎಂದುಕೊಂಡಿದ್ದೆ. ಬೈಬಲನ್ನು ಸಮಗ್ರವಾಗಿ ಓದಿದ ಮೇಲೆ, ಇದು ಬೈಬಲ್ ಸಿದ್ಧಾಂತವಲ್ಲ. ಪಾಶ್ಚಿಮಾತ್ಯ ಸಂಸ್ಕೃತಿ ; ಕ್ರೈಸ್ತ ಧರ್ಮ ಅಲ್ಲಿ ಅಧಿಕವಾಗಿ ಹಬ್ಬಿದ್ದರಿಂದ ಆ ಸಮಾಜದಲ್ಲಿ ಸೇರಿದೆ ಎಂಬ ಅರಿವು ಮೂಡಿತು. ಉದಾಹರಣೆಗೆ ಲಿಂಗವಂತ ಸಮಾಜವು ಒಂದು ಕಡೆಯಿಂದ ವೈದಿಕ–ಶೈವ ಆಚರಣೆಗಳನ್ನು, ಇನ್ನೊಂದು ಕಡೆಯಿಂದ ಬಣಧರ್ಮ (tribal religions) ಗಳ ಕ್ಷುದ್ರಾಚರಣೆಗಳನ್ನು ತುಂಬಿಕೊಂಡು ಬೆಳೆಯುತ್ತಿದೆ. ಆದರೆ ಅದರ ಮೂಲ ಸಿದ್ಧಾಂತದ ಆಕರವಾದ ವಚನ ಸಾಹಿತ್ಯ ಪ್ರತಿಪಾದಿಸುವುದು ಬೇರೆಯೆ ಎನ್ನಿಸಿದಾಗ ಸೋಜಿಗವೆನಿಸುವುದಲ್ಲವೇ ಹಾಗೆ !

ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಪಾತಿವ್ರತ್ಯ-ಸತಿ ನಿಷ್ಠೆಯ ಕಲ್ಪನೆ ಇಲ್ಲದಿದ್ದಾಗ್ಯೂ ಅವರು ಧಾರ್ಮಿಕ ನಂಬಿಕೆಯಲ್ಲಿ ಪಾತಿವ್ರತ್ಯ ಕಾಯ್ದುಕೊಂಡು ಏಕೇಶ್ವರವಾದಿಗಳಾಗಿದ್ದಾರೆ. ಹಿಂದುಗಳು ನೀತಿಶಾಸ್ತ್ರದ ದೃಷ್ಟಿಯಿಂದ ಪಾತಿವ್ರತ್ಯ–ಸತಿ ನಿಷ್ಠೆಯ ಕಲ್ಪನೆ ಹೊಂದಿಯೂ ತಮ್ಮ ನಂಬಿಕೆ–ಆಚರಣೆಯಲ್ಲಿ ಬಹುದೇವತೋಪಾಸಕರಾಗಿದ್ದಾರೆ. ಇದು ಬಹಳ ವಿಚಿತ್ರ ಎನ್ನಿಸತೊಡಗಿದೆ. ಹಿಂದುಗಳು ಬಹಳ ದೈವ ಭಕ್ತರು, ದೈವಭೀರುಗಳು (ಅಂದರೆ ದೇವರಿಗೆ ಹೆದರುವವರು) ಎಂದು ಖ್ಯಾತಿವೆತ್ತಿದ್ದಾರೆ. ಆದರೆ ಇದು ನಿಜವೆ ? ಸುಮ್ಮನೆ ಕುಳಿತು ಆಲೋಚಿಸಿದರೆ ಅಪ್ಪಟ ಸುಳ್ಳು. ಏಕೆಂದರೆ ಗಂಡನನ್ನು ಮೂಲೆಯಲ್ಲಿ ತಳ್ಳಿ ಅಲ್ಲದಾಟವನಾಡುವ ಸ್ತ್ರೀಯಂತೆ ಇವರ ಭಕ್ತಿ ಏನೋ ಎನ್ನಿಸತೊಡಗಿದೆ. ಇಂಥ ಬಹುದೇವತೋಪಾಸಕರನ್ನು ಧರ್ಮಪಿತರು "ಮಾನಿಸಗಳ್ಳೆ"ಯಂತೆ ಎನ್ನುವರು.

ಕಂಗಳಲ್ಲೊಬ್ಬನ ಕರೆವಳು, ಮನದಲೊಬ್ಬನ ನೆರೆವಳು
ಕೂಡಲ ಸಂಗಮ ದೇವ ಕೇಳಯ್ಯಾ
ಮಾನಿಸಗಳ್ಳೆಯ ನಂಬದಿರಯ್ಯಾ (ಬ.ಷ.ವ. 110)

ಒಂದು ಕ್ಷಣ ಉಳಿದೆಲ್ಲ ಹಿಂದುಗಳನ್ನು ಕೈಬಿಡುತ್ತೇನೆ. ಏಕೆಂದರೆ ಅವರು ಇನ್ನೂ ವಿವಾಹಿತರಾಗದ ಕನ್ಯೆಯರಂತೆ ! ಹೋಗಲಿ ಪಾಪ ! ಗುರುಕೊಟ್ಟ ಧರ್ಮದ ಲಾಂಛನವಾದ ಇಷ್ಟಲಿಂಗ ಧರಿಸಿಯೂ ಕಂಡಕಂಡದ್ದು ಪೂಜಿಸುವ, ಕಂಡಕಂಡಲ್ಲಿ ಹರಿದಾಡುವ ಲಿಂಗವಂತರನ್ನು ನೋಡಿರಿ ; ಅಂಗದ ಮೇಲೆ ಲಿಂಗಪತಿಯನ್ನು ಧರಿಸಿಯೂ ಇವರು ಮಾಡುವ ವ್ಯವಹಾರ ನೋಡಿ, ಧರ್ಮಗುರು ಬಸವಣ್ಣ ಎಷ್ಟು ನೋಯುತ್ತಿರಬಹುದು ? ಅತ್ಯಂತ ಸುಂದರನೂ, ಶ್ರೀಮಂತನೂ, ವಿದ್ಯಾವಂತನೂ ಆದ ಅಳಿಯನನ್ನೂ ಹುಡುಕಿ ಮದುವೆ ಮಾಡಿಕೊಟ್ಟರೆ ಅವನೊಡನೆ ಬಾಳ್ವೆ ಮಾಡುವುದು ಬಿಟ್ಟು ಮಗಳು ಯಾವನೋ ಭಿಕಾರಿಯ ಸ್ನೇಹ ಮಾಡಿದರೆ ಆ ತಂದೆಗೆ ಎಷ್ಟು ನೋವಾಗಬೇಡ ?

ಊಡುವ ಉಡಿಸುವ ಗಂಡನಿದ್ದಂತೆ
ಜೋಡೆ ಮಿಂಡಂಗೆ ಕಣ್ಣು ಚೆಲ್ಲುವಳ
ಕೇಡಿಂಗೆ ಬೆರಗಾದೆ ನಾನು !
ಕೂಡಲ ಸಂಗಮ ದೇವನು
ಸಿಂಗಾರದ ಮೂಗ ಬಣ್ಣಿಸಿ ಹಲುದೋರಿ ಕೊಯ್ವ ! (617)

ಆದ್ದರಿಂದ ಸೃಷ್ಟಿಕರ್ತನನ್ನು ಸರಿಯಾಗಿ ಅರಿಯಿರಿ ; ಪೂರ್ಣಶ್ರದ್ಧೆಯಿಂದ ನಂಬಿರಿ, ಪೂರ್ಣ ಹೃದಯದಿಂದ ಶರಣಾಗಿರಿ, ಪೂರ್ಣ ನಿಷ್ಠೆಯಿಂದ ಆರಾಧಿಸಿರಿ.

ಬಹುದೇವತೋಪಾಸನೆ

ಬಹುದೇವತಾ ಕಲ್ಪನೆ–ಉಪಾಸನೆ ಬಹು ಕೀಳು ಮಟ್ಟದ್ದು. ಆದಿ ಮಾನವನು ಪೂರ್ಣ ಅಜ್ಞಾನದಲ್ಲಿ ಇದ್ದಾಗ ಭಯಭೀತನಾಗಿ ಏನನ್ನೋ ನಂಬಿದ, ಏನನ್ನೋ ಪೂಜಿಸಿದ. ನಂತರ ಅತ್ಯಂತ ಸುಧಾರಿಸಿದ ಸೈದ್ಧಾಂತಿಕ ಕಲ್ಪನೆ ದಾರ್ಶನಿಕರಿಗೆ ಹೊಳೆದವು. ಆದರೆ ಈ ದೇಶದಲ್ಲಿ ಅಂಥ ಸುಂದರ-ಪರಿಪೂರ್ಣ ದೇವರ ಕಲ್ಪನೆ, ಆರಾಧನೆಯ ಅವಕಾಶವನ್ನು ಎಲ್ಲರಿಗೂ ಕೊಡದೆ ಬಹುಸಂಖ್ಯಾತರನ್ನು ಅವರವರು ಮಾಡುತ್ತಿದ್ದ ಮೂಢ ಆರಾಧನೆಗಳಲ್ಲೇ ಇಡಲಾಯಿತು. ಕುರಿ–ಕೋಳಿ–ಕೋಣಗಳ ಬಲಿಯ ಬಲೆಯಲ್ಲಿ, ಕ್ಷುದ್ರ ದೈವಾರಾಧನೆಯ ಮತ್ತಿನಲ್ಲಿದ್ದವರನ್ನು, ಅಜ್ಞಾನದ ಕತ್ತಲೆಯಲ್ಲಿದ್ದವರನ್ನು ಬಸವಣ್ಣನವರು ಎಚ್ಚರಿಸಿ, ಹೊರಗೆಳೆದು ವೈಚಾರಿಕ ದೇವರ ಕಲ್ಪನೆಯ ಅಮೃತಪಾನ ಮಾಡಿಸಿ, ವಿಶ್ವಧರ್ಮದ ಬೆಳಕಿಗೆ ಕರೆತಂದು ಬಿಟ್ಟರು. ಇದನ್ನೇಕೆ ನೀವು ಅರ್ಥ ಮಾಡಿಕೊಳ್ಳಲಾರಿರಿ ? ಅಜ್ಞಾನದಲ್ಲಿ ಮುಳುಗಿ, ನಿಜದೇವರನ್ನು ಮರೆತ ನಿಮ್ಮ ಬಗ್ಗೆ ನಮಗೆ ದ್ವೇಷವಿಲ್ಲ, ಮರುಕವಿದೆ ; ಪ್ರೀತಿಯಿದೆ. ಬಸವ ತತ್ತ್ವದ ಹಗ್ಗದ ನೆರವಿನಿಂದ ಅಜ್ಞಾನದ ಬಹುದೇವತೋಪಾಸನೆಯ ಕೂಪದಿಂದ (ಮೊದಲು ಅದರಲ್ಲೇ ಬಿದ್ದಿದ್ದ ನಾವು) ಹೊರಬಂದು ಜ್ಞಾನದ ಗಾಳಿಯನ್ನು ಉಸಿರಾಡಿಸಿ ಹರ್ಷಭರಿತರಾದ ನಮಗೆ, ನಿಮ್ಮನ್ನೂ ಆರೋಗ್ಯಕರವಾದ ಪ್ರಗತಿಪರ ಧರ್ಮದ ಸ್ವಚ್ಛ ಹವೆಯಲ್ಲಿ ಓಡಾಡಿಸಬೇಕೆಂಬ ಹಂಬಲವಿದೆ.

ಗಣಪತಿ

ಸಮಸ್ತ ಹಿಂದುಗಳೇ, ಇಷ್ಟು ಪೀಠಿಕೆ ಏಕೆನ್ನುವಿರಾ ? 'ಬಸವ–ಕಿರಣ' ಪತ್ರಿಕೆಯಲ್ಲಿ 'ಗಣಪತಿ' ಕುರಿತು 2–3 ಸಾಲು ನಾನು ಬರೆದುದನ್ನು ಓದಿ ಓರ್ವ ಶೂದ್ರ ನೇತಾರರು ಸಿಟ್ಟಿಗೆದ್ದು, ನಮ್ಮ ಶಿಷ್ಯರಾದ ನಿಜಗುಣಾನಂದರನ್ನು ಪ್ರಶ್ನಿಸಿದರಂತೆ, "ಏನು ಗಣಪತಿಯನ್ನೇ ಖಂಡಿಸಿದ್ದೀರಿ. ಅವನ ಪೂಜೆ ಮಾಡದಿದ್ದರೆ ವಿಘ್ನ ಬರುತ್ತವೆ. ಹಿಂದು ಸಮಾಜ ಸಂಘಟನೆಗೆ ಗಣಪತಿ ಪೂಜೆ ಅತ್ಯಗತ್ಯ" ಎಂದು ಕೂಗಾಡಿದರಂತೆ.

ಡಾ॥ ಬಿ. ಆರ್. ಅಂಬೇಡ್ಕರರಂಥ ಕೆಲವರಿಗೆ ಮಾತ್ರ ಎಲ್ಲವನ್ನೂ ಸಮಗ್ರವಾಗಿ ಚಿಂತಿಸುವ ಸಾಮರ್ಥ್ಯವಿದೆ. ಇಂಥ ಮೂಢ ನೇತಾರರಿಗೆ ಅಂಥ ಸಮಗ್ರ ಚಿಂತನೆ ಎಲ್ಲಿಂದ ಬರಲು ಸಾಧ್ಯ ?

1. ಗಣಪತಿ ಏನು ? ದೇವರೇ ಅಂದರೇ ಸೃಷ್ಟಿಕರ್ತನೆ ? ಅಲ್ಲ ; ಅವನಿಗೂ ಮೊದಲೇ ಸೃಷ್ಟಿ ಇತ್ತು ; ಇದರ ಕರ್ತನೂ ಇದ್ದ ದೇವರಿಗೆ ಆಕಾರವಿರದು, ಆಕಾರವಿರುವುದು ದೇವರೇ ಅಲ್ಲ.

2. ಗಣಪತಿ ಮಹಾತ್ಮನೆ ? ಮಹಾತ್ಮರಲ್ಲಿ ಇರಬೇಕಾದ ಯಾವ ಸದ್ಗುಣಗಳು ಆತನಲ್ಲಿವೆ. ? ರಾವಣನು ಶುದ್ಧ ಶಿವಭಕ್ತ. ಸಹಸ್ರಾರು ಮೈಲು ಪ್ರಯಾಣ ಮಾಡಿ ಹಿಮಾಚಲಕ್ಕೆ ಹೋಗಿ, ಶಿವನ ರಾಜಧಾನಿ ಕೈಲಾಸಕ್ಕೆ ಸಾಗಿ, ಅಲ್ಲಿರುವ ಪೀಠಾಧೀಶನಿಂದ ಪೂಜೆಗಾಗಿ ಒಂದು ಲಿಂಗವನ್ನು ಪಡೆದುಕೊಂಡ. ಈ ಕ್ರಿಯೆಯ ಹಿಂದೆ ಎಂಥಾ ಶ್ರದ್ಧೆಯಿದೆ, ಪರಿಶ್ರಮವಿದೆ, ಭಕ್ತಿ–ನಿಷ್ಠೆಗಳಿವೆ ? ಆದರೆ ದ್ರಾವಿಡರಾಜನೂ ಶೂದ್ರನೂ ಆದ ರಾವಣೇಶ್ವರನು ಪೂಜೆಯಿಂದ ಇನ್ನಷ್ಟು ತಪೋಶಕ್ತಿಯುಕ್ತನಾಗುವನೆಂದು ಹಂಚಿಕೆ ಹಾಕಿ, ಅವನ ಬೆನ್ನು ಹತ್ತಿ, ಉಪಾಯದಿಂದ ಆ ಲಿಂಗವನ್ನು ಪಡೆದು, ಮರಳಿನಲ್ಲಿ ಕಳೆದುಹೋಗುವಂತೆ ಮಾಡಿದ ಗಣಪತಿಯ ಸದ್ಗುಣದ ಆಳವನ್ನು ಅರ್ಥ ಮಾಡಿಕೊಳ್ಳುವಿರಾ ? ಮಹಾತ್ಮರಲ್ಲಿ ಎಂಥಾ ಕಳಕಳಿ ಇರುವುದೆಂದರೆ ಹೆಚ್ಚು ಜನರು ಪೂಜೆ ಮಾಡಬೇಕು ; ಜಪ ಮಾಡಬೇಕು ಎಂದು ಅವರು ಹಂಬಲಿಸುತ್ತಾರೆ. ನಮ್ಮಂತಹವರೇ ನಿಮಗೆಲ್ಲ ಒತ್ತಿ ಒತ್ತಿ ಹೇಳಿ ಪೂಜೆ ಮಾಡಿ, ಜಪ ಮಾಡಿ ಎನ್ನುತ್ತೇವೆ. ಅಂದಾಗ ಪೂಜೆಗೆಂದು ಒಯ್ಯುತ್ತಿರುವ ಲಿಂಗವನ್ನು ಕಳೆದು ಹೋಗುವಂತೆ ಮಾಡಿದ ಗಣಪತಿಯಲ್ಲಿ ಆ ಕಳಕಳಿ ಎಲ್ಲಿದೆ ? ರಾವಣ ದ್ರಾವಿಡ (ಅಸುರ, ಅನಾರ್ಯ)ನಾದ ಕಾರಣ ಅವನು ಪೂಜೆ ಮಾಡಬಾರದು ಎಂಬ ದುರುದ್ದೇಶವಿದ್ದರೆ ಗಣಪತಿ ಆರ್ಯ ಪಕ್ಷಪಾತಿ, ಜನಾಂಗದ್ವೇಷಿ, ಜಾತಿವಾದಿ ಎನ್ನಿಸದೆ ?

3. ದೇವರಿಗಂತೂ ಆಕಾರವಿಲ್ಲ ; ಮಹಾತ್ಮರಂತೂ ಅಷ್ಟು ಅಸಹ್ಯ ವಿಕಾರ ರೂಪ ಹೊಂದಿರರು. ಇನ್ನು ಗಣಪತಿ ಏನು ? ಕುಬ್ಜದೇಹ, ದೊಡ್ಡಹೊಟ್ಟೆ, ವಿಚಿತ್ರ ಕಿವಿ, ಆನೆಯ ಸೊಂಡಿಲು ; ಎಂಥಾ ವಿಚಿತ್ರ ಜೀವಿ ; ಮಾನವನೂ ಅಲ್ಲ–ಪ್ರಾಣಿಯೂ ಅಲ್ಲ. ಸೃಷ್ಟಿಕರ್ತನು ನಿಮ್ಮನ್ನು ಬುದ್ಧಿ ಜೀವಿಗಳನ್ನಾಗಿ ಹುಟ್ಟಿಸಿದ್ದಾನೆ. ಮಿದುಳು ಕೊಟ್ಟಿದ್ದಾನೆ, ಬುದ್ಧಿ ಕೊಟ್ಟಿದ್ದಾನೆ. ಆದ್ದರಿಂದ ಸ್ವಲ್ಪ ವಿಚಾರಮಾಡಿರಿ, ನಿಮ್ಮ ಮನೆಯಲ್ಲೇ ಅಂಥದೊಂದು ಮಾಂಸದ ಮುದ್ದೆಯಂತಿರುವ ವಿಕಾರವಾದ ಮಗು ಹುಟ್ಟಿದರೆ ಅದನ್ನು ನೀವು ಸಂತೋಷದಿಂದ ಸ್ವೀಕರಿಸಿ,ದೇವರೆಂದು ಪೂಜಿಸುವಿರಾ ?

ಮಾನವ ದೇಹಕ್ಕೆ–ಆನೆಯ ತಲೆ ಜೋಡಿಸಲು ಸಾಧ್ಯವೆ ? ಕೇವಲ ರಕ್ತದ ಗುಂಪು ಬೇರೆಯಾದರೇ ಸತ್ತುಹೋಗುವ ಮನುಷ್ಯ ಆನೆಯ ತಲೆ ಜೋಡಿಸಿಕೊಂಡು ಬದುಕಲು ಸಾಧ್ಯವೆ ? ಏಕೆ ನಿಮ್ಮಗಳಿಗೆ ಚಿಂತನೆ ಮಾಡಲು ಸಾಧ್ಯವಾಗದು ? !

ಹಿಂದುಗಳು ಒಂದು ಕಡೆಯಲ್ಲಿ ಬಹಳ ಭಾವುಕರು, ದೈವ ಭೀರುಗಳಂತೆ ತೋರುವರು. ಮತ್ತೊಂದು ಕಡೆ ಬೀಡಿ, ಸೆರೆಯ ಅಂಗಡಿಗಳಿಗೆ ದೇವ ದೇವತೆಗಳ ಹೆಸರು ಇಡುವರು. ಅಸಹ್ಯವಾದ ಗೀತೆಗಳಿಂದ ಜನಪ್ರಿಯವಾದ ಅಶ್ಲೀಲ ಹಾಡುಗಳ ದಾಟಿಗಳಲ್ಲಿ ದೇವತೆಗಳ ಭಜನೆ ಮಾಡುವರು. ಈ ದೇವತೆಗಳ ಹೆಸರಿನಲ್ಲಿ ಉತ್ಸವಗಳನ್ನು ಮಾಡಿ, ಕುಡಿದು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸುವರು. ಪವಿತ್ರತೆಯ ಭಾವ ಎಲ್ಲಿದೆ ? ಮುಸ್ಲೀಮರು–ಕ್ರೈಸ್ತರು ದೇವರ ಹೆಸರಿನಲ್ಲಿ ಹೀಗೆ ಎಂದಾದರೂ ಮಾಡಿದ್ದು ನೋಡಿರುವಿರಾ ? ಹಿಂದೂ ದೇವತೆಗಳನ್ನು ಶೃಂಗಾರಮಯ ಭಂಗಿಯಲ್ಲಿ ಚಿತ್ರಿಸಿ, ಭಾವಚಿತ್ರ ಪೂಜಿಸುವರು. ಇನ್ನು ಪೌರಾಣಿಕ ಕಲ್ಪನಾ ವಿಲಾಸವಂತೂ ಹೇಳತೀರದು. ಭಾರತೀಯರಿಗೆ ಇತಿಹಾಸದ ಪ್ರಜ್ಞೆಯೇ ಇರಲಿಲ್ಲ ಎಂದ ಆರೋಪವಿದೆ. (ಸುಧಾ ಸೆಪ್ಟಂಬರ್ 18, 1994, ಪುಟ 6) ಪುರಾಣಗಳನ್ನು ಓದಿದಾಗ ಅದರಲ್ಲಿ ಇತಿಹಾಸದ ಎಳೆಗಳು ಕಾಣುತ್ತವೆ. ಆದರೆ ಇತಿಹಾಸ-ಕಲ್ಪನೆ ಎಲ್ಲವೂ ಕಲಸು ಮೇಲೋಗರವಾಗಿ ಓದುವ ವ್ಯಕ್ತಿಗೆ ಗೊಂದಲವೇ ಉಂಟಾಗುತ್ತದೆ. ಏಸುಕ್ರಿಸ್ತರು ಶಿಲುಬೆಗೇರಿಸಲ್ಪಡುತ್ತಲೇ ಕೆಲವೇ ದಿನಗಳಲ್ಲಿ ಇತಿಹಾಸವು ರಚಿಸಲ್ಪಟ್ಟುದು, ಮೊಹಮ್ಮದರು 1400 ವರ್ಷಗಳ ಹಿಂದೆ ಕುರ್‌ಆನ್ ಕೊಟ್ಟುದು, ಅಂದಿನಿಂದಲೂ ಉಭಯತರೂ ಒಂದು ಪದವನ್ನು ಬದಲಿಸದೆ ಕಾಪಾಡಿಕೊಂಡು ಬಂದಿರುವುದು, ಐತಿಹಾಸಿಕ ಸ್ಮಾರಕಗಳಾಗಿ ಅವರು ಸಂಚರಿಸಿದ ಸ್ಥಳಗಳು ಸಂರಕ್ಷಣೆ ಮಾಡಲ್ಪಟ್ಟುದು ಆ ಜನರ ಐತಿಹಾಸಿಕ ಪ್ರಜ್ಞೆಗೆ ಜೀವಂತ ಸಾಕ್ಷಿಯಾಗಿದೆ. ಪುರಾಣ ರಚನೆ ಎಂಬ ಶೈಲಿ ಈ ದೇಶವನ್ನು ಹಾಳು ಮಾಡಿತೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಮ್ಮ ಕಣ್ಣೆದುರಿಗೇ ಆಗಿಹೋದ ಜನರು ಆಗಲೇ ವೈಭವೀಕರಿಸಲ್ಪಟ್ಟು, ಪುರಾಣ ಪುರುಷರಾಗಿ ಬಿಟ್ಟಿರುತ್ತಾರೆ. ಆ ಪುರಾಣ ವೈಭವದಲ್ಲಿ ಸತ್ಯ ಸಂಗತಿ ಹೇಳ ಹೆಸರು ಇಲ್ಲದಂತೆ ನಾಪತ್ತೆಯಾಗುತ್ತದೆ. ಕಲಾ ಕೌಶಲ್ಯ ಅಭಿವ್ಯಕ್ತಿಗೊಳಿಸಲು, ಸಾಹಿತ್ಯ–ಕಾವ್ಯ ಪ್ರೌಢಿಮೆ ಬೆಳೆಸಲು, ದೇವತೆಗಳನ್ನು ಆಯ್ಕೆ ಮಾಡಿಕೊಳ್ಳುವ ಹಿಂದೂ ಕಲಾಕಾರರು, ಸಾಹಿತಿಗಳು ವಿಪರೀತವಾಗಿ ತಾತ್ವಿಕ ಶುದ್ಧಿ ಹಾಳು ಮಾಡಿದ್ದಾರೆ. ಮದುವೆಯಾದ ಗಂಡನ ಕಣ್ಣು ತಪ್ಪಿಸಿ ಕೃಷ್ಣನೊಡನೆ ಸರಸವಾಡಲು ಬರುತ್ತಿದ್ದ ರಾಧೆ ಮತ್ತು ಕೃಷ್ಣರ ಸರಸ–ಸಲ್ಲಾಪಗಳನ್ನು ವರ್ಣಿಸಲೇ ಕಾವ್ಯ ರಚನೆ ಮಾಡಿದ ಪ್ರಭೃತಿಗಳು ಇಲ್ಲಿದ್ದಾರೆ. ಬಹುಪಾಲು ದೇವತೆಗಳು ವೈಕುಂಠ ಬಿಟ್ಟು ಭೂಮಿಗೆ ಬಂದುದೇ ತಮ್ಮ ಪ್ರೇಮಿಗಳ

ಬೆನ್ನು ಹತ್ತಿ. ಹಿಂದೂ ಭಕ್ತರೇ, ನಿಮಗೆ ಇವೆಲ್ಲ ಅನ್ಯ ಧರ್ಮೀಯರ ಮುಂದೆ ನಾಚಿಕೆಗೇಡಿನ ಪ್ರಸಂಗ ಎನಿಸುವುದಿಲ್ಲವೆ ? ಕಲಾಕಾರರು, ಸಾಹಿತಿಗಳು ನವರಸಗಳನ್ನು ಚಿತ್ರಿಸಬೇಕಾದರೆ, ಬರೆಯಬೇಕಾದರೆ, ಕೆತ್ತಬೇಕಾದರೆ ಲೌಕಿಕ (ಕಾಲ್ಪನಿಕ) ಕಥಾ ವಸ್ತುಗಳನ್ನು ಆಯ್ಕೆ ಮಾಡಬಹುದಿತ್ತಲ್ಲ, ಉದಾ : ಕಾಳಿದಾಸನ ಮೇಘ ಸಂದೇಶ. ಇದು ಬಿಟ್ಟು ದೇವತೆಗಳನ್ನೇಕೆ ತಮ್ಮ ಅಸಹ್ಯ ವರ್ಣನೆಗೆ ಬಳಸಬೇಕು ?

ಜಾಗೃತರಾಗಿರಿ, ದೇವ ಸ್ವರೂಪ ಅರಿಯಿರಿ, ಆ ಸೃಷ್ಟಿಕರ್ತ ದೇವನ ಮಹಿಮೆ ಸಾರಿ, ಪುನ : ಪುನ : ನಿಮಗೆ ಜಪ್ಪಿಸಿ ಬುದ್ಧಿ ಹೇಳಿದ ಏಕೇಶ್ವರವಾದಿಗಳಾದ ಬಸವಣ್ಣ, ಗುರುನಾನಕ, ದಯಾನಂದ ಸರಸ್ವತಿಯಂಥವರನ್ನು ಅರಿಯಲು ಯತ್ನಿಸಿರಿ. ಜನರ ವಿಘ್ನಗಳನ್ನು ಪರಿಹರಿಸುವ ಅಥವಾ ವಿಘ್ನ ಬರದಂತೆ ಮಾಡುವ ವಿಘ್ನೇಶ ಬಾಳೆ ಹಣ್ಣಿನ ಸಿಪ್ಪೆ ಮೇಲೆ ಇಲಿ ಹಾಯ್ದಾಗ ಜಾರಿದ್ದೇಕೆ? ಹಲ್ಲು ಮುರಿದು ಕೊಂಡಿದ್ದೇಕೆ? ಆತನು ಕೊಟ್ಟ ಸಂದೇಶವೇನಿದೆ, ? ಸಾಹಿತ್ಯವೇನಿದೆ ? ರಾವಣನು ತ್ರೇತಾಯುಗ-ದವನು ಎಂದು ಅನ್ನುವಿರಲ್ಲವೆ ? ಮಹಾಭಾರತ ಬರೆದವನು ವ್ಯಾಸಮಹರ್ಷಿ. ಎಲ್ಲವನ್ನೂ ಕಣ್ಣಾರೆ ಕಂಡೇ ಬರೆದಿರಬೇಕು ತಾನೆ ? ಇಲ್ಲವೇ ಕಾಲ್ಪನಿಕ ಎನ್ನಬೇಕಾದೀತು. ತ್ರೇತಾಯುಗದಲ್ಲಿದ್ದು ರಾವಣನ ಕೈಯಲ್ಲಿದ್ದ ಶಿವಲಿಂಗ ಕಳೆದುಹೋಗುವಂತೆ ಮಾಡಿದ ಗಣಪತಿ, ಮಹಾಭಾರತ ಪೂರ್ತಿ ನಡೆಯುವ ತನಕ ಇದ್ದು ನಂತರ ವ್ಯಾಸರು ಹೇಳಿದ ಶ್ಲೋಕಗಳನ್ನೂ ಬರೆದಿಡಲು ಸಾಧ್ಯವೆ ? ಅಷ್ಟು ದೀರ್ಘಾವಧಿಯಲ್ಲಿ ಇರಲು ಹೇಗೆ ಸಾಧ್ಯ ? ಗಣಪತಿ ಎಂಬ ಶೀಘ್ರಲಿಪಿಕಾರ ಬರಹ ಚತುರ ಮತ್ತೊಬ್ಬನು ಇದ್ದಿರಬೇಕು. ಅವನು ವ್ಯಾಸನು ಹೇಳಿದ ಭಾರತ ಬರೆದಿರಬೇಕು ಎಂದು ನೀವು ವಾದಿಸುವುದಾದರೆ ಈ ಗಣಪತಿಗೆ ಆನೆಯ ಸೊಂಡಿಲು ಏಕೆ ಹಚ್ಚಬೇಕು ? ಗಣಪತಿ ಎಂಬ ಹೆಸರಿನ ಎಲ್ಲರಿಗೂ ಆನೆಯ ಸೊಂಡಿಲು ಇರುವುದಾದರೆ ಈಗ ಹೆಸರಿಟ್ಟುಕೊಂಡವರಿಗೆಲ್ಲ ಏಕೆ ಇರುವುದಿಲ್ಲ ? ಸ್ವಲ್ಪವಾದರೂ ಕಾಲಮಾನದ ಇತಿಹಾಸದ ಪ್ರಜ್ಞೆ ಹಿಂದುಗಳಿಗೆ ಬೇಡವೆ ? ಇತಿಹಾಸ-ಸಾಹಿತ್ಯ-ಸಂದೇಶ ಮೂರೂ ಇಲ್ಲದ ಕಾಲ್ಪನಿಕ ದೇವತೆಗಳ ಜಾಲದಲ್ಲಿ ಸಿಕ್ಕಿ ಏಕೆ ದೇವರು ಕೊಟ್ಟ ಬುದ್ಧಿಶಕ್ತಿಯನ್ನು ವ್ಯರ್ಥಮಾಡಿಕೊಳ್ಳುವಿರಿ? ಹುಟ್ಟಿದ ಎಳೆಯ ಕಂದಮ್ಮಗಳ ಮುಂದೆ ವಿಚಿತ್ರರೂಪದ ಫೋಟೋ ಇಟ್ಟು, ನಂಬಿಕೆ ತುಂಬಿ, ಅವರು ಇಡೀ ಜೀವನ ಪರ್ಯಂತರ ಈ ಮೂಢತ್ವದ ಕೆಸರಿನಲ್ಲಿ ಸಿಕ್ಕಿಬೀಳು ವಂತೆ ಮಾಡುವರಲ್ಲ ? ಎಂತಹ ದೇವದ್ರೋಹಿಗಳು ಎಂದು ಇಂಥವರನ್ನು ಕಂಡು ನನಗೆ ಕೋಪ-ಮರುಕ ಎರಡೂ ಬರುತ್ತಿವೆ.

ಹಿಂದೂ ಸಮಾಜವು ಒಂದಾಗಲು ಇಂಥ ಮೂಢಸೂತ್ರ ಏಕೆ ಬೇಕು ? ಸೃಷ್ಟಿಕರ್ತನ ಹೆಸರಿನಲ್ಲೇ (ಮುಸಲ್ಮಾನರು ಅಲ್ಲಾಹನ ಹೆಸರಿನಲ್ಲಿ ಒಂದಾದಂತೆ) ಒಂದಾಗೋಣ, ಸೃಷ್ಟಿಕರ್ತನ ಪವಿತ್ರ ನಾಮವಾದ 'ಓಂ' ಕಾರದ ಹೆಸರಿನಲ್ಲಿ ಒಂದಾಗೋಣ,

(41 ನೇ ಪುಟಕ್ಕೆ ಮುಂದುವರಿದಿದೆ)

ಏಕಗುರು ನಿಷ್ಠೆ - ಸದಾಚಾರದ ಮಾರ್ಗ

—ಮಾತಾಜಿ

ಕ್ರೈಸ್ತಧರ್ಮ ಕುರಿತು ಕೆಲವು ವಿಚಾರಗಳನ್ನು ಹಿಂದಿನ ಸಂಚಿಕೆಯಲ್ಲಿ ಬರೆದಿದ್ದೆ. ಬಹಳ ಜನ ಬಹಳ ಸಂತೋಷಪಟ್ಟು ಪತ್ರ ಬರೆದಿದ್ದಾರೆ. ಸಂತ ಪಾಲನು ಬಹು-ದೊಡ್ಡ ಸುವಾರ್ತಾ ಪ್ರಚಾರಕ, ಅವನ ಮಾನಸಾಂತರವಾದ ಘಟನೆಯನ್ನು ಪ್ರಸ್ತಾಪಿಸಿ ಮಧುವರಸನ ಪರಿವರ್ತನೆಗೆ ಹೋಲಿಸಿದ್ದೇನಷ್ಟೆ. ಆತನ ಕಾರ್ಯವೈಖರಿ ಮತ್ತು ಪ್ರಚಾರದ ಬಗೆ ನೋಡಿದಾಗ ಆತನೊಡನೆ ಸಿದ್ಧರಾಮೇಶ್ವರರನ್ನು ಹೋಲಿಸಬಹು-ದೆನ್ನಿಸಿತು. ವಿಶ್ವಗುರು ಬಸವಣ್ಣನವರು, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಾಚಿದೇವರು ಮುಂತಾದವರು ನಿಂದ ನಿಲುವು, ಏರಿದ ಔನ್ನತ್ಯಗಳ ದೃಷ್ಟಿಯಿಂದ ಅವರನ್ನು ಸಂಪೂರ್ಣವಾಗಿ ಯಾರಿಗೆ ಹೋಲಿಸಲೂ ನನಗೆ ಇಷ್ಟವಾಗದು. ಇದಕ್ಕೆ ಕಾರಣ ಇವರ ಒಳಹೊಕ್ಕು ಇವರನ್ನು ತಿಳಿದುಕೊಂಡುದಾಗಿರಬಹುದು ಅಥವಾ ಒಂದು ಬಗೆಯ ಆತ್ಮೀಯತೆ ಬೆರೆತ ಗೌರವ ಇವರ ಬಗ್ಗೆ ನಮಗಿರುವುದೇ ಆಗಿರಬಹುದು. ಆದರೆ ಕೆಲಕೆಲವು ವಿಷಯಗಳ, ಅನ್ಯ ಸಂತರ ಬಗ್ಗೆ ಹೋಲಿಕೆ ನೀಡಿ ಅರ್ಥ ಮಾಡಿಕೊಂಡರೆ ತಪ್ಪಾಗಲಿಕ್ಕಿಲ್ಲವಲ್ಲವೇ ?

ಧರ್ಮಪಿತ ಬಸವಣ್ಣನವರಿಗಿಂತಲೂ ಒಂದು ತಿಂಗಳು ಮುಂಚೆ ಅಲ್ಲಮಪ್ರಭುಗಳು ಲಿಂಗೈಕ್ಯರಾದರು ; ಚನ್ನಬಸವಣ್ಣ ಧರ್ಮಪಿತರ ನಂತರ ಕೆಲವು ತಿಂಗಳೊಳಗೆ ಲಿಂಗೈಕ್ಯರಾದರು. ಮಾಚಿದೇವರು ಮುಖ್ಯವಾಗಿ ಹೋರಾಟಗಾರರು ಧರ್ಮಕರ್ತರಿಗೆ ಸಾಹಿತ್ಯವನ್ನು ಸಂರಕ್ಷಿಸಿದ ಸುದ್ದಿ ಮುಟ್ಟಿಸಲು ಬಂದು, ಶ್ರೀಗುರುವು ಲಿಂಗೈಕ್ಯರಾಗುತ್ತಲೇ ಪುನಃ ಉಳವಿಯತ್ತ ಸಾಗುತ್ತಲಿರುವಾಗಲೇ ದಾರಿಯಲ್ಲಿ ಗೊಡಚಿಯಲ್ಲಿ ಲಿಂಗೈಕ್ಯರಾದರು. ಹೀಗಾಗಿ ಹೆಚ್ಚಿನ ಹೊಣೆ-ಧರ್ಮವನ್ನು ಉಳಿಸುವುದರಲ್ಲಿ, ಪ್ರಚಾರ ಮಾಡುವುದರಲ್ಲಿ, ಅನಾಥವಾಗಿದ್ದ ಸಮಾಜ-ಶಿಶುವನ್ನು ಸಂರಕ್ಷಿಸುವುದರಲ್ಲಿ ಬಿದ್ದುದು ಶಿವಯೋಗಿ ಸಿದ್ಧರಾಮೇಶ್ವರರ ಮೇಲೆ. ಅದಕ್ಕಾಗಿಯೇ ನನಗೆ ಏಸುವಿನ ನಿಧನಾನಂತರ ಕ್ರೈಸ್ತ ಸಮಾಜವನ್ನು ಮುನ್ನಡೆಸಿದ ಸಂತ ಪಾಲನೊಡನೆ ಶಿವಯೋಗಿ ಸಿದ್ಧರಾಮೇಶ್ವರರನ್ನು ಹೋಲಿಸಬಹುದೆನ್ನಿಸಿತು.

ಬಸವ ಧರ್ಮ, ಬಸವ ಯೋಗ ಮುಂತಾದ ಪದಗಳು ಅವರ ವಚನಗಳಲ್ಲಿ ಬಳಕೆಯಾಗಿರುವುದು ಉಲ್ಲೇಖನಾರ್ಹ. ಧರ್ಮ ಸಂಹಿತೆಯನ್ನು ವ್ಯವಸ್ಥಿತಗೊಳಿಸುವುದರಲ್ಲಿ ಅವರು ಅಷ್ಟಾವರಣ ತ್ರಿವಿಧಿಯಂಥ ಕೃತಿಗಳನ್ನು ರಚಿಸಿರುವುದು ಗಮ-

ನಾರ್ಹ. ಬಸವ ಸ್ತೋತ್ರ ತ್ರಿವಿಧಿಯಲ್ಲಿ ಧರ್ಮಗುರು ಬಸವಣ್ಣನವರ ಸಮಗ್ರ ವ್ಯಕ್ತಿತ್ವವನ್ನು ಮನನೀಯವಾಗಿ ಚಿತ್ರಿಸಿದ್ದಾರೆ. ಕಲ್ಯಾಣ ಕ್ರಾಂತಿಯ ಪರಿಣಾಮವಾಗಿ ಸಂಪ್ರದಾಯವಾದಿಗಳು ಕಿತ್ತ ಮೇಟಿಗೂಟ (ಧರ್ಮಪಿತ ಬಸವಣ್ಣನವರು) ವನ್ನು ಪುನಃ ಭದ್ರಪಡಿಸುವ ಕಾರ್ಯವನ್ನು ಸಿದ್ಧರಾಮೇಶ್ವರರು ಬಸವ ಸ್ತೋತ್ರ ತ್ರಿವಿಧಿಯ ಮೂಲಕ ಮಾಡಿದ್ದರೆ, ಬಸವ ಸಂತಾನವಾದ ಶರಣ ಪರಂಪರೆಯ ಪರಿಚಯವನ್ನು ಮಿಶ್ರ ಸ್ತೋತ್ರ ತ್ರಿವಿಧಿಯಲ್ಲಿ ಮಾಡಿದ್ದಾರೆ.

ಧರ್ಮಪಿತ ಬಸವಣ್ಣನವರು ಆದ್ಯ ಪ್ರವರ್ತಕರಾದರೂ ಅವರಿಗಿಂತಲೂ ಮುಂಚೆ ಈ ಲಿಂಗವಂತ ಧರ್ಮವಿತ್ತೆಂದು ಸಾಧಿಸಲು ದ್ರೋಹಿಗಳು ಅನೇಕರು ಸಿದ್ಧವಾಗಿದ್ದಾರೆ. ಈ ದ್ರೋಹಿಗಳ ಸಾಲಿನಲ್ಲಿ ಕೆಲವು ವಿರಕ್ತ ಮಠಾಧಿಕಾರಿಗಳು, ಬರಹಗಾರರು ಎಲ್ಲರೂ ಸೇರ್ಪಡೆಯಾಗುತ್ತಿದ್ದಾರೆ. ಇವರು ಅಂತರಂಗದಲ್ಲಿ ಒಂದನ್ನು ಇಟ್ಟುಕೊಂಡು ಏನನ್ನೋ ಸಾಧಿಸುವ ಹುನ್ನಾರ ಮಾಡುತ್ತಲಿರುವರು. ಇವರ ಸಂಖ್ಯೆ ಬೆರಳಮೇಲೆ ಎಣಿಸುವಷ್ಟು ಗಣಿತ ಶಾಸ್ತ್ರೀಯದ ಲೆಕ್ಕಾಚಾರದಂತೆ (೧+೧=೨, ೨+೧=೩) ಬೆಳೆಯುತ್ತಲಿದ್ದರೆ ಧರ್ಮಪಿತ ಬಸವಣ್ಣನವರನ್ನೇ ಆದಿಗುರುವೆಂದು ಒಪ್ಪುವವರ ಸಂಖ್ಯೆಯು ಜ್ಯಾಮಿತಿ ಲೆಕ್ಕಾಚಾರದಂತೆ(೨×೨=೪, ೪×೪=೧೬)ಬೆಳೆಯುತ್ತಲಿದೆ. ಈ ಗುರುದ್ರೋಹಿ–ಧರ್ಮದ್ರೋಹಿಗಳು ಆದಿ ಪ್ರಮಥ ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ವಚನಗಳನ್ನೂ ಉಲ್ಲೇಖಿಸುವುದನ್ನೂ ಬಿಡುವುದಿಲ್ಲ. ಯಾವುದನ್ನೇ ವಿವರಿಸುವಾಗ ವಚನಗಳನ್ನು ಪುಂಖಾನು ಪುಂಖವಾಗಿ ಬಳಸುವ ಈ ಜನರು ಯಾವುದೇ ಆಧಾರವಿಲ್ಲದೆ ಈ ಲಿಂಗವಂತ ಧರ್ಮವು ಬಸವ ಪೂರ್ವದಲ್ಲಿತ್ತು ಎಂದು ಸಾಧಿಸುವ ವಂಚಕರು. ಈ ವಂಚಕರ ಕೈಯಿಂದ ಸತ್ಯವನ್ನು ಪಾರು ಮಾಡುವ ಅಗಾಧ ಕರ್ತವ್ಯವನ್ನೀಗ ಬಸವ ಪಥಿಕರು ಮಾಡಬೇಕಾಗಿದೆ. ನಮಗೆ ಈ ದಿಶೆಯಲ್ಲಿ ಸಿದ್ಧರಾಮೇಶ್ವರರ ಮಿಶ್ರಸ್ತೋತ್ರ ತ್ರಿವಿಧಿ ಬಹುದೊಡ್ಡ ಉಪಕಾರ ಮಾಡುತ್ತದೆ. ಸುಖವಾಗಿದ್ದ ಸಂಸಾರದೊಳಗೆ ಪ್ರವೇಶಿಸಿದ ಓರ್ವ ಚಾಡಿಕೋರನ ದೆಶೆಯಿಂದ ಇಡೀ ಕುಟುಂಬವೇ ನಾಶವಾಗುವಂತೆ, ಈ ವೀರಶೈವ ವಾದಿಗಳಿಂದ ಶರಣರ ಪರಂಪರೆಗೆ ಕುತ್ತು ಎರಗುತ್ತಿದೆ. ಅಂಥ ವಿಪತ್ತನ್ನು ಮಿಶ್ರಸ್ತೋತ್ರ ತ್ರಿವಿಧಿ ತಡೆಯುತ್ತದೆ.

"ಬಸವ ಸ್ತೋತ್ರ ತ್ರಿವಿಧಿ"—ಧರ್ಮಪಿತ ಬಸವಣ್ಣನವರನ್ನು ನೇರವಾಗಿ ಸ್ತುತಿಸುವ ಒಂದು ಕೃತಿಯಾದ್ದರಿಂದ ಅವರ ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವವನ್ನು ಚಿತ್ರಿಸುವುದೇ ಅಲ್ಲದೆ ಅವರು ಸ್ವಯಂಕೃತರು, ಇಷ್ಟಲಿಂಗ ಜನಕರು, ಶರಣ ಪರಂಪರೆಯ ಮೂಲಿಗರು, ಆದಿ ಪ್ರಮಥರು ಎಂಬುದನ್ನು ಚಿತ್ರಿಸುತ್ತದೆ. ಶ್ರೀಗುರುವನ್ನೇ ಕಥಾನಾಯಕ (?) ನನ್ನಾಗಿ ಇಟ್ಟುಕೊಂಡು ಸ್ತುತಿಸುವ ಕಾವ್ಯಭಾಗವಾದ್ದರಿಂದ ಹಾಗೆಲ್ಲ

ಸ್ತುತಿಸಿರುವುದು ಸಹಜ ಎಂದು ಯಾರಾದರೂ ಸತ್ಯನಿಷೇಧಿಗಳು, ವೀರಶೈವ–ಭಿನ್ನ ಮತೀಯರು ನುಡಿಯಬಹುದು. ಆದರೆ ಇಲ್ಲಿ ಬರೆದವರು ಹೊಟ್ಟೆಪಾಡಿಗಾಗಿ, ಹಣಕ್ಕಾಗಿ, ಬಿರುದು ಬಾವಲಿಗಳಿಗಾಗಿ ಕಾವ್ಯ–ಪುರಾಣ ಬರೆಯುವ ಶಾಸ್ತ್ರಿಗಳಲ್ಲ, ಮಹಾಜ್ಞಾನಿಯೂ ಸಿದ್ಧಪುರುಷರೂ ಆದ ಸಿದ್ಧರಾಮೇಶ್ವರರು ಎಂಬುದು ಗಮನಾರ್ಹ. ಇವರೆಲ್ಲ ಮಂತಿಗೆಟ್ಟು ಯಾರನ್ನೂ ಹೊಗಳದವರು ತಾನೆ ?

ಮಿಶ್ರಸ್ತೋತ್ರ ತ್ರಿವಿಧಿಯು ಆದಿಪ್ರಮಥ ಬಸವಗುರುವಿನಿಂದ ಹಿಡಿದು ಹಲವಾರು ಶರಣರನ್ನು ಬಣ್ಣಿಸುವ ಮಹಾನ್‌ಕೃತಿ. ಇಂಥ ಕೃತಿಯಲ್ಲೂ ಮೊಟ್ಟ ಮೊದಲಿಗೆ ಬಸವ ಗುರುವಿನ ಕೊಂಡಾಟವೇ ಆಗಿದೆ. ಸಿದ್ಧರಾಮೇಶ್ವರರು, ಈ ಲಿಂಗವಂತ ಧರ್ಮ ಬಸವಪೂರ್ವದಲ್ಲಿಯೇ ಇದ್ದುದಾದರೆ ಆದಿಗುರು ಬಸವಣ್ಣನವರಿಂದಲೇ ಏಕೆ ಮಿಶ್ರ ಸ್ತೋತ್ರ ತ್ರಿವಿಧಿಯನ್ನು ಆರಂಭಿಸಬೇಕಿತ್ತು ? ನಮ್ಮ ಷಟ್‌ಪ್ರಮಥರಲ್ಲಿ ಒಬ್ಬರಾದ ಸಿದ್ಧರಾಮೇಶ್ವರರನ್ನು ಸುಮ್ಮಸುಮ್ಮನೆ ತಮ್ಮ ಗುಂಪಿಗೆ ಸೇರಿಸಿಕೊಂಡು ಕೃತ್ರಿಮ ಇತಿಹಾಸ ಸೃಷ್ಟಿಸುವ ಪಂಚಾಚಾರ್ಯವಾದಿಗಳು ಈ ಪ್ರಶ್ನೆಗೆ ಉತ್ತರಿಸಬೇಕು. ಸಾಮಾನ್ಯ ಶರಣರನ್ನೂ ಸಹ ಸ್ತುತಿಗೈದ ಸಿದ್ಧರಾಮೇಶ್ವರರು ಪಂಚಾಚಾರ್ಯರು ತಮಗಿಂತಲೂ ಪೂರ್ವದಲ್ಲಿ ಇದ್ದುದಾದರೆ ಅವರನ್ನು ಏಕೆ ಸ್ತುತಿಸಲಿಲ್ಲ ? ನೇರವಾಗಿ ಧರ್ಮಪಿತ ಬಸವಣ್ಣನವರಿಂದಲೇ ಏಕೆ ಸ್ತೋತ್ರವನ್ನಾರಂಭಿಸಿದರು ? ಒಂದು ಕ್ರಮದಲ್ಲಿ ಮೊಟ್ಟ ಮೊದಲು ಬಸವಗುರು, ನಂತರ ಚಿನ್ಮಯ ಜ್ಞಾನಿ ಚನ್ನಬಸವಣ್ಣ ಶೂನ್ಯ ಪೀಠಾಧೀಶ ಅಲ್ಲಮ ಪ್ರಭು, ನಂತರ ಇನ್ನಿತರ ಶರಣರು–ಹೀಗೆ ಸ್ತೋತ್ರ ಮಾಡುತ್ತಾರೆ. ಅವರು ಸ್ತುತಿಸುವ ಕ್ರಮವು ವ್ಯಕ್ತಿಗಳ ಮಹತ್ವವನ್ನು ಸಹ ವಿವರಿಸುವಂತಿದೆ. ಆದಿ ಪ್ರಮಥರಿಂದ ಹಿಡಿದು ಹಿರಿಯ ಶರಣರು, ಕಿರಿಯ ಶರಣರು ಮತ್ತು ಸಾಮಾನ್ಯ ಶರಣರನ್ನು ಸಹ ಮುಕ್ತಕಂಠದಿಂದ ಹೊಗಳಿ ಅನುಭವ ಮಂಟಪದಲ್ಲಿದ್ದ ಮುಖ್ಯ ಶರಣರ ಹೆಸರುಗಳನ್ನು ದಾಖಲಿಸಿರುವ ಶಿವಯೋಗಿ ಸಿದ್ಧರಾಮೇಶ್ವರರಿಗೆ ರೇಣುಕ–ದಾರುಕ ಮುಂತಾದವರು ಹಿಂದೆ ಇದ್ದುದಾದರೆ ಪರಂಪರೆಯ ಆದ್ಯರಂತೆ ಸ್ತುತಿಸಲು ನೆನಪಾಗುತ್ತಿರಲಿಲ್ಲವೆ ? 'ಆದಿ ಗುರು ಬಸವಣ್ಣ', 'ಪ್ರಥಮಂತು ಬಸವಣ್ಣ ದ್ವಿತೀಯಂತು ಲಿಂಗವು' ಎಂದು ಏಕೆ ಸ್ತುತಿಸಬೇಕಾಗಿತ್ತು.

ಕರ್ನಾಟಕ ಸರ್ಕಾರವು 15 ಸಂಪುಟಗಳ ಒಂದು ಮಹಾನ್ ಕೃತಿಯನ್ನೇ ಹೊರ ತಂದಿದೆ. ಈ ಮಹಾನ್ ಕೃತಿಯ ಸಂಪಾದಕರುಗಳಲ್ಲಿ ಬಿ. ಪಿ. ಕಾಯಿಲೆಯವರು (ಅಂದರೆ ಬಸವ ಪೂರ್ವದಲ್ಲಿ ಲಿಂಗವಂತ ಧರ್ಮ ಇತ್ತು ಎನ್ನುವವರು) ಸಾಕಷ್ಟು ಜನರಿದ್ದಾರೆ. ಇವರು ಅದೇಕೆ ಮೊಟ್ಟಮೊದಲನೆಯ ಸಂಪುಟವಾಗಿ ಧರ್ಮಪಿತ ಬಸವಣ್ಣನವರ ವಚನಗಳನ್ನು ಹೊರತರಬೇಕು. ? ಬಸವ ಪೂರ್ವದ ವಚನಕಾರರು

ಇದ್ದರೆ ಮೊದಲ ಸಂಪುಟವಾಗಿ ಅವರದ್ದು ಬರಬೇಕಾಗಿತ್ತು. ಯಾರನ್ನೋ ಮೆಚ್ಚಿಸಲು ಯಾರನ್ನೋ ಓಲೈಸಲು ಸಾಹಿತ್ಯವನ್ನು ಇತಿಹಾಸವನ್ನು ತಿರುಚುವ ಕೆಲಸ ನಿರಂತರವಾಗಿ ಇಲ್ಲಿ ನಡೆಯುತ್ತಿದೆ.

ಸಿದ್ಧರಾಮೇಶ್ವರರು ತಮ್ಮ ಗುರುವಿನ ಗುರು ಪರಮಗುರು ಧರ್ಮಗುರು ಬಸವಣ್ಣನವರನ್ನು ಹೃದಯ ತುಂಬಿ ಬಣ್ಣಿಸುತ್ತಾರೆ, ಹುಚ್ಚು ಆವೇಶದಿಂದಲ್ಲ, ಸುಜ್ಞಾನಯುತ ಭಕ್ತಿಯಿಂದ ತಾತ್ತ್ವಿಕವಾಗಿ ಸ್ತುತಿಸಿದ್ದಾರೆ. ತಮಗಿಂತಲೂ ವಯಸ್ಸಿನಲ್ಲಿ ಕಿರಿಯರಾದ ಚನ್ನಬಸವಣ್ಣನಿಂದ ಅನುಗ್ರಹ ಪಡೆದುದು ಮಾತ್ರವಲ್ಲ ಗುರು-ಶಿಷ್ಯರ ಸಂಬಂಧ ಹೇಗಿರಬೇಕೆಂಬ ಆಚಾರ ಸಂಹಿತೆಯನ್ನೇ ಕೊಟ್ಟಿದ್ದಾರೆ. ಹೀಗಾಗಿ ಅವಳ ಬರಹಗಳು ಅಮೂಲ್ಯ ನಿಧಿಯಾಗಿವೆ.

ವ್ಯಕ್ತಿಪೂಜೆ ಬೇಡ

ಸಂತ ಪಾಲನು ಪರಿವರ್ತನೆಗೊಂಡಂತೆ ಸಿದ್ಧಮಾರ್ಗದಿಂದ ಶಿವಯೋಗ ಮಾರ್ಗಕ್ಕೆ ಸಿದ್ಧರಾಮೇಶ್ವರರು ಬಂದುದು ಒಂದು ಮಹಾನ್‌ಘಟನೆ. ಬಂದ ನಂತರ ಪಾಲನು ಕ್ರೈಸ್ತಧರ್ಮವನ್ನು ಹಬ್ಬಿಸಿದಂತೆ ಲಿಂಗಾಯತ ಧರ್ಮವನ್ನು ಸಿದ್ಧರಾಮೇಶ್ವರರು ಹಬ್ಬಿಸಿದರು. ಅವರ ದಿವ್ಯ ಸಮಾಧಿ ಇರುವ ಸೊಲ್ಲಾಪುರದ ಸುತ್ತಮುತ್ತ ಅತ್ಯಧಿಕ ಸಂಖ್ಯೆಯಲ್ಲಿ ಲಿಂಗವಂತರಿರುವುದು ಸಿದ್ಧರಾಮೇಶ್ವರರ ಪ್ರಯತ್ನದಿಂದಲೇ. ಅವರು ಒಂದು ಬಹುದೊಡ್ಡ ತ್ಯಾಗ ಮಾಡಿದರು. **ಅದುವೆ ವ್ಯಕ್ತಿ ಪೂಜೆಯ, ಕೀರ್ತಿಯ ತ್ಯಾಗ.** ಒಂದು ವೇಳೆ ಅವರು ಬಸವ ಧರ್ಮಾವಲಂಬಿಯಾಗದಿದ್ದರೆ ವೈಯಕ್ತಿಕ ಪೂಜಾವಸ್ತುವಾಗಿ, ಕೀರ್ತಿ ವಿಶೇಷಿತರಾಗುತ್ತಿದ್ದರು. ಒಂದು ಧರ್ಮಾವಲಂಬಿಯಾದ್ದರಿಂದ ವೈಯಕ್ತಿಕ ಕೀರ್ತಿ ಬದಿಗಿಟ್ಟು ಧರ್ಮದ ಕೀರ್ತಿಯನ್ನು ಮೊಳಗಿಸಿದರು. ಇದರಿಂದ ಅವರ ಹಳೆಯ ಅಭಿಮಾನಿಗಳಿಂದ, ಶಿಷ್ಯರಿಂದ ಪ್ರತಿರೋಧ ಎದುರಿಸಬೇಕಾಯಿತು; ಆ ಶಿಷ್ಯರಿಗೆ ತಮ್ಮ ಗುರು ಮಹಾಸಿದ್ಧಪುರುಷ. ಅಂಥವನು ಚನ್ನಬಸವಣ್ಣನವರ ಮೂಲಕ ಬಸವ ಪಥಿಕರಾದುದು ಬಲೇ ಕೋಪ ತರಿಸಿತು. ಅಂಥ ಮೂಢರಿಗೆ ಸಿದ್ಧರಾಮೇಶ್ವರ ಕೊಡುವ ಉತ್ತರ ನಮ್ಮನ್ನು ಬೆಚ್ಚಿಬೀಳಿಸುತ್ತದೆ. ಬೆರಗುಗೊಳಿಸುತ್ತದೆ. ನಂತರ ಅವರು ಅತ್ಯಂತ ದೃಢಚಿತ್ತರಾಗಿ ಹಿಂದಿನ ಮೂಢಾಚರಣೆಗಳನ್ನು ತೊರೆದರು.

ಸಂತ ಪಾಲನು ವಿದ್ವತ್ ದೃಷ್ಟಿಯಿಂದ ವ್ಯಕ್ತಿತ್ವ ದೃಷ್ಟಿಯಿಂದ ಏಸುವನ್ನು ಮೀರಿಸುವನೆಂದರೆ ಉತ್ಪ್ರೇಕ್ಷೆಯಲ್ಲ. ಆದರೂ ಆತ ತನ್ನ ಕೀರ್ತಿಯನ್ನು ಮೆರೆಸಿಕೊಳ್ಳಲು ಬಯಸಲಿಲ್ಲ. ಅವನು ಒಂದು ಮಾತನ್ನು ಕೊರಿಂಥದವರಿಗೆ ಬರೆಯುತ್ತಾನೆ, [12 : 14]

"ನಿಮ್ಮಲ್ಲಿ ಕೆಲವರು ನಾವು ಪೌಲನ ಹಿಂಬಾಲಕರೆಂದು, ಕೆಲವರು ತಾವು ಅಪೊಲ್ಲೋಸನವರೆಂದೂ, ಕೆಲವರು ತಾವು ಪೇತ್ರನವರೆಂದು, ಬೇರೆ ಕೆಲವರು ತಾವು

ಕ್ರಿಸ್ತನ ಹಿಂಬಾಲಕರೆಂದು ಹೇಳಿಕೊಳ್ಳುತ್ತಿದ್ದೀರಿ. ಹೀಗೆ ನೀವು ಕ್ರಿಸ್ತರನ್ನು ವಿಭಾಗ ಮಾಡುತ್ತಿದ್ದೀರಿ. ಹಾಗಾದರೇನು? ಪೌಲನೆಂಬ ನಾನು ನಿಮ್ಮ ಪಾಪಗಳಿಗಾಗಿ ಶಿಲುಬೆಯಲ್ಲಿ ಸತ್ತೆನೊ? ನಿಮ್ಮಲ್ಲಿ ಯಾರಾದರೂ ನನ್ನ ಹೆಸರಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರೋ?...." ಹೀಗೆ ಬುದ್ಧಿವಾದ ಸಾಗುತ್ತದೆ. ಎಂತಹ ಕೀರ್ತಿ ತ್ಯಾಗ?! ತ್ಯಾಗ ಮಾಡಿದವನು ಏಸುವು; ಅವನ ತತ್ತ್ವಪ್ರಚಾರ ಮಾಡಲು ಬಂದವರು ನಾವು ಎನ್ನುವನು ಪಾಲ್. ಈ ಮಾತು ಲಿಂಗವಂತ ಮಠಮಾನ್ಯರ ಕಣ್ಣು ತೆರೆಸಬೇಕು. ಒಬ್ಬ ಸಾಮಾನ್ಯ ದೀಕ್ಷಾಗುರು ಸಹಿತ ತನ್ನಿಂದ ದೀಕ್ಷೆ ಪಡೆದವರಿಗೆ ತನ್ನ ಫೋಟೋ ಕೊಟ್ಟು ಪೂಜಿಸಲು ಹೇಳುತ್ತಾನೆ. ಪ್ರತಿಯೊಬ್ಬರೂ, ಪ್ರತಿಯೊಂದು ಮಠದವರು ತಮ್ಮ ಕರ್ತೃ ಗದ್ದುಗೆಯನ್ನು ಚೆಂದವಾಗಿ ಕಟ್ಟಿಸಿ, ಆ ಕರ್ತೃವಿನ ಮೇಲೆ ಒಂದು ಪುರಾಣ ಬರೆಸಿ, ಫೋಟೋ ಮುದ್ರಿಸಿ ಹಂಚುವರು, ಮೂಢಜನರಿಗೆ ಧರ್ಮಕೊಟ್ಟವರು ಯಾರು; ಆದಿ ಗುರು ನಮಗಾಗಿ ಮಾಡಿದ ತ್ಯಾಗವೇನು ಎಂಬುದರ ಅರಿವು ಸಹ ಇರುವುದಿಲ್ಲ. ಜೀವಿತ ಕಾಲದಲ್ಲಿ ಏನೇನೂ ಇಲ್ಲದವರು ಸಹ ಪುರಾಣಕಾರರ ಕೈ ಚಳಕಕ್ಕೆ ಸಿಕ್ಕು ವೈಭವೀಕರಿಸಲ್ಪಟ್ಟು ಅವತಾರ ಪುರುಷರಾಗಿ ಬಿಡುತ್ತಾರೆ. ಹಿಂದೂ ಜನರ ದೌರ್ಬಲ್ಯ ಇಲ್ಲೇ ಇರುವುದು. ಈ ಸಾಧು–ಸಂತ–ಅವಧೂತರ ಸಂತೆಯಲ್ಲಿ ಸೃಷ್ಟಿಕರ್ತನಿಗೆ ಸ್ಥಾನವೇ ಇಲ್ಲ. ದೀಕ್ಷಾಗುರುಗಳ ಬಲದ ಮೇಲೆ ಹುಟ್ಟುವ ಗುಂಪು ಕೆಲವಾದರೆ, ಸ್ಥಾನಿಕ ಪಂಥಗಳ ಸುತ್ತ ಬೆಳೆಯುವವು ಮತ್ತಷ್ಟು ಗುಂಪು. ಒಬ್ಬ ವ್ಯಕ್ತಿಯನ್ನು ಆರಾಧಿಸುವುದೆಂದರೇನು? ನಿಜ ಅನುಸರಣೆ. ಅನುಸರಣೆ ಮಾಡಬೇಕಾದರೆ ಆತ ಏನಾದರೂ ಸಂದೇಶ ಕೊಟ್ಟಿರಬೇಕಲ್ಲವೆ? ಅವನ ಬದುಕು ಮಾದರಿಯಾಗಿ ಇರಬೇಕಲ್ಲವೆ? ಇದೊಂದನ್ನೂ ಮೂಢ ಜನರು ವಿಚಾರ ಮಾಡರು.

ಇತ್ತೀಚೆಗೆ ಇಲ್ಲೇ ಹತ್ತಿರದಲ್ಲಿ ಒಂದು ಘಟನೆ ನಡೆಯಿತು. ಒಬ್ಬ ಹುಚ್ಚು ಮನುಷ್ಯ ಓಡಾಡುತ್ತಿದ್ದ. ಮನೆಯಿಂದ ನಿಷ್ಪ್ರಯೋಜಕನೆಂದು ಹೊರಹಾಕಲ್ಪಟ್ಟು ದೊಡ್ಡ ನಗರಕ್ಕೆ ಬಂದು ಎಲ್ಲೋ ಕುಳಿತು ಎಲ್ಲೋ ನಿಂತು, ಎಲ್ಲೋ ಮಲಗಿ, ಏನೋ ತಿಂದು ಅಲೆಯುತ್ತಿದ್ದವನ ಮೇಲೆ ವ್ಯಾಪಾರಿ ವೃಂದದ ಅನುಗ್ರಹ–ದೃಷ್ಟಿ ಬಿದ್ದಿತು; (ಇವರ ಮೇಲೆ ಹುಚ್ಚನ ಅನುಗ್ರಹವೋ, ಆ ಹುಚ್ಚನ ಮೇಲೆ ಇವನ ಅನುಗ್ರಹವೋ ಅರ್ಥವಾಗುತ್ತಿಲ್ಲ.) ಆತ ಸಿದ್ಧಪುರುಷ ಎಂದು ಕಥೆ ಹುಟ್ಟಿಸಿದರು. ಆತ ಯಾರ ಅಂಗಡಿಗೆ ಬಂದು ಕೈ ಹಾಕಿದರೂ ವಿರೋಧಿಸಬಾರದು, ಅಂದು ವ್ಯಾಪಾರ ಚಂದವಾಗುತ್ತದೆ ಎಂಬ ಸುದ್ದಿಯನ್ನೂ ಹರಡಿದರು; ಪಾಪ ಇದರಿಂದ ಆ ಮುಗ್ಧ ಹುಚ್ಚನ ಹೊಟ್ಟೆ ತುಂಬುತ್ತಿತ್ತೆಂಬುದು ಸಮಾಧಾನಕರ ಸಂಗತಿ. ಒಂದು ದಿನ ಆತ ಅಲೆಯುವಾಗ ಹುಚ್ಚನೆಂದು ಯಾರೋ ಕಲ್ಲು ಬೀಸಿದರು; ತಲೆಗೆ ಏಟಾಯಿತು, ಹಾಸಿಗೆ ಹಿಡಿದ. ವ್ಯಾಪಾರಸ್ಥರೊಬ್ಬರ ತಲೆ ಚುರುಕಾಯಿತು. ಬಂಡವಾಳವಿಲ್ಲದೆ ಹಣಗಳಿಸುವ

ವಿಧಾನ ಹೊಳೆಯಿತು. ತಮ್ಮಲ್ಲೇ ಇಟ್ಟುಕೊಂಡು ಉಪಚರಿಸಿದರು. ಆಯಕಟ್ಟಿನ ಜಾಗದಲ್ಲಿ ಸಂಕ್ಷೇತ್ರವೊಂದನ್ನು ಹುಟ್ಟು ಹಾಕಲು ಯೋಜನೆಯೂ ಸಿದ್ಧವಾಯಿತು. ಜೀವನದಲ್ಲಿ ಯಾವೊಂದು ಸಾಧನೆ–ಸಿದ್ಧಿ–ಸಂದೇಶ ಇಲ್ಲದೆಯೆ ಆತ ಸಿದ್ಧಪುರುಷನಾಗಿ ಬಿಟ್ಟ. ಕೇವಲ ಕೆಲವು ವ್ಯಾಪಾರಿಗಳ ದೂರಾಲೋಚನೆಯಿಂದ ಇನ್ನು ಪುರಾಣ ಬರೆಯುವವರು ಹುಟ್ಟುವುದೇನು ತಡ; ಹೊಟ್ಟೆಪಾಡಿಗಾಗಿ ಕೀರ್ತನ–ಪುರಾಣ ಮಾಡುವವರು ತಯಾರಾಗುವುದೇನು ತಡ! ಬರೆಯುವವನಲ್ಲೂ ನಿಯತ್ತಿಲ್ಲ, ಹೇಳುವವನಲ್ಲೂ ನಿಯತ್ತಿಲ್ಲ, ವಿಲಾಸಿಗಳು, ಹಿಂಸಾಪ್ರಿಯರೂ ಆದ ರಾಜರನ್ನೇ ದೇವರೆಂದು ಹೊಗಳುವ ಅನಿಷ್ಟ ಸಂಪ್ರದಾಯದ ಜನ ಇನ್ನು ಸಂತರನ್ನು ವೈಭವೀಕರಿಸುವುದು ಎಷ್ಟುಹೊತ್ತಿನ ಮಾತು. ಹಿಂದುಗಳಿಗೆ ಇಂಥ ಮೌಢ್ಯತೆಯಿಂದ ವಿಮೋಚನೆಯೆ ಇಲ್ಲವೆನಿಸುತ್ತದೆ. ಅದೇ ಕ್ರೈಸ್ತ–ಮುಸ್ಲೀಮರು ಒಬ್ಬ ದೇವ, ಒಬ್ಬ ಧರ್ಮಗುರುವನ್ನು ನಂಬಿ ಎಂಥ ಅಚ್ಚುಕಟ್ಟು, ಶಿಸ್ತಿನಿಂದ ಬದುಕುತ್ತಾರೆ.

ಈ ದೇಶದ ವೈಶಿಷ್ಟ್ಯ ಇನ್ನೊಂದಿದೆ. ಸೃಷ್ಟಿಕರ್ತನ ಮಹಿಮೆಯನ್ನು ಎತ್ತಿ ಹಿಡಿಯುವವರು, ತನ್ಮೂಲಕ ಏಕದೇವ ನಿಷ್ಠೆಯನ್ನು ಪೋಷಿಸುವವರು, ಧರ್ಮಗುರುವಿನ ನಿಷ್ಠೆಯನ್ನು ಸಾರಿ ಏಕಗುರೂಪಾಸನೆ ಹೇಳುವವರು ಈ ಮೂಢ ಜನರ ದೃಷ್ಟಿಯಲ್ಲಿ ಸಣ್ಣವರಾಗಿ ಕಂಡು, ತನ್ನನ್ನೇ ಪೂಜಿಸಿರಿ ಎಂದು ಹೇಳುವವನು ಭಾರಿ ದೊಡ್ಡವನಾಗಿ ಗೋಚರವಾಗುತ್ತಾನೆ. ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಸಂತ ಪಾಲನ ಮಾತು ಎಷ್ಟು ಮಹತ್ವಪೂರ್ಣ ಎನಿಸುತ್ತವೆ. ಸೃಷ್ಟಿಯನ್ನು ಕೊಟ್ಟ ಸೃಷ್ಟಿಕರ್ತ, ಧರ್ಮವನ್ನು ಕೊಟ್ಟ ಧರ್ಮಕರ್ತ–ಇವರಿಬ್ಬರನ್ನು ಬಿಟ್ಟು ಕಂಡಕಂಡದ್ದನ್ನು, ಕಂಡಕಂಡವರನ್ನು ಪೂಜಿಸುವ ಮೌಢ್ಯತೆ ಬಿಡದ ಹೊರತು ಲಿಂಗಾಯತ ಸಮಾಜ–ಹಿಂದೂ ಸಮಾಜಗಳಿಗೆ ಭವಿಷ್ಯವಿಲ್ಲ.

"ಬುದ್ಧೀ ನಾವು ನಿಮ್ಮ ಶಿಷ್ಯರು, ಆ ಗುರುಗಳಿಗೆ ನಾವು ಬೆಲೆ ಕೊಡಲಿಲ್ಲ" ಎಂದು ಹಿಂಬಾಲಕರು ಅಂದರೆ ಆ ಬುದ್ಧಿಗೆ ಖುಷಿಯೋ ಖುಷಿ. ನಮ್ಮೆಲ್ಲರ ಗುರು ಬಸವಣ್ಣ. ಅವರ ತತ್ತ್ವಗಳನ್ನು ಯಾರೇ ಹೇಳಲಿ, ಕೇಳಿರಿ ಎನ್ನುವ ವಿವೇಕ ಎಷ್ಟು ಜನರಿಗುಂಟು. ಸ್ಥಾನಿಕ ಪಂಥಗಳ ಹಾವಳಿ ತಪ್ಪಿಸಬೇಕಾದರೆ ವ್ಯಕ್ತಿಗತ ಪುರಾಣ ಹೇಳಿಸುವುದು, ಕೇಳಿಸುವುದು ಬಿಟ್ಟು, ವಚನ ಸಾಹಿತ್ಯದ ಮೇಲೆ ಪ್ರವಚನ–ಚಿಂತನ ನಡೆಯಬೇಕು. ಈ ವ್ಯಕ್ತಿಗತ ಪುರಾಣಗಳು ಕಾಡಿನಲ್ಲಿರುವ ಕಾಲುದಾರಿಗಳಂತೆ. ಕೊಂಚದೂರ ಒಯ್ದು ಮುಂದೆ ದಾರಿ ತಪ್ಪಿಸುವವು. ವಚನ ಸಾಹಿತ್ಯವು ರಾಜಮಾರ್ಗದಂತೆ, ಗುರಿಮುಟ್ಟಿಸುವುದು.

ಆದ್ದರಿಂದ ವ್ಯಕ್ತಿಗತ ಪಂಥ, ಸ್ಥಾನಿಕ ಪಂಥಗಳ ಅಬ್ಬರಕ್ಕೆ ಜನರು ಬಲಿಯಾಗದೆ ಏಕದೇವೋಪಾಸನೆ–ಏಕಗುರು ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು. ಆದನ್ನೇ ಸಂತ

ಪಾಲನ್ನು ಮಾರ್ಮಿಕವಾಗಿ ಹೇಳಿದ್ದಾನೆ. ಈ ದಿಶೆಯಲ್ಲಿ ಸಾಧು–ಸಂತರು ಸಹಿತ ತಮ್ಮ ವೈಯಕ್ತಿಕ ಕೀರ್ತಿಯ ಹುಚ್ಚುಬಿಟ್ಟು ಸೃಷ್ಟಿಕರ್ತನ ಕಡೆಗೆ ಭಕ್ತಿ ಬೆಳೆಸಬೇಕು, ಅದನ್ನು ದೃಢಪಡಿಸಬೇಕು.

ಒಂದು ಪತ್ರ

ಓರ್ವರು ಚಿಕ್ಕವೀರಣ್ಣ ಎನ್ನುವವರು ಜೂನ್ ತಿಂಗಳ ಕಲ್ಯಾಣ ಕಿರಣ ಓದಿ ಒಂದು ಪತ್ರ ಬರೆದಿದ್ದಾರೆ. ಅವರು ಇದೊಂದೇ ಸಂಚಿಕೆ ಓದಿರುವರೋ ಅಥವಾ ಕಲ್ಯಾಣ ಕಿರಣದ ಕಾಯಂ ಓದುಗರೋ ತಿಳಿಯದು. ಕಲ್ಯಾಣ ಕಿರಣದ ಕಾಯಂ ಓದುಗರೇ ಇದ್ದರೆ ಇವರ ವಿಚಾರಧಾರೆ ಕಂಡು ನಾವೇ ನಾಚಬೇಕಾದ ಪರಿಸ್ಥಿತಿ ಇದೆ. ಏಕೆಂದರೆ, ಇಷ್ಟು ವರ್ಷ ಓದಿಯೂ ಅವರ ತಲೆಯಲ್ಲಿ ಗುರುತ್ವದ ಬಗ್ಗೆ, ಸಂತತ್ವದ ಬಗ್ಗೆ ಇನ್ನೂ ಒಂದು ಪರಿಕಲ್ಪನೆ (Concept) ಮೂಡಿಲ್ಲವಾದ್ದರಿಂದ.

ಓರ್ವ ಆಲಸಿ ಸ್ವಾಮಿ ತಾನು ಉಟ್ಟ ಬಟ್ಟೆ ಕೊಳಕಾಗಿದ್ದರೂ ಅದನ್ನು ತೊಳಕೊಳ್ಳಲಾರದೆ ಧ್ಯಾನ ಮಾಡುತ್ತಿದ್ದರು ಎಂಬ ನನ್ನ ಆಕ್ಷೇಪದ ಬಗ್ಗೆ ಚಿಕ್ಕ–ವೀರಣ್ಣ ಬರೆಯುತ್ತಾರೆ; "ಅವರು ಪ್ರಾಪಂಚಿಕ ವ್ಯಾಮೋಹದಿಂದ ದೂರವಾಗಿ ದೇಹದ ಮೇಲೆ ಅರಿವಿಲ್ಲದೆ ಬಟ್ಟೆ ಊಟದ ಗಮನವಿಲ್ಲದೆ ಮುಕ್ತಿಯ ಮಾರ್ಗವೊಂದನ್ನೇ ಗುರಿಯಾಗಿಟ್ಟುಕೊಂಡು ಪರಮಾತ್ಮನ ಧ್ಯಾನದಲ್ಲಿರುವ ಅವಧೂತ ಪದವಿಯನ್ನು ಪಡೆದಿರುವ ಪವಿತ್ರಾತ್ಮರು." ಇದೇನು ಹಿಂದೂ ಸಮಾಜದ ದುರ್ದೈವವೋ, ಭಾರತ ದೇಶದ ದುರಾದೃಷ್ಟವೊ ಇಂಥ ನಂಬಿಕೆ ಹೊಂದಿರುವ ಅನುಯಾಯಿಗಳು, ಇಂಥ ನಂಬಿಕೆ ಬೆಳೆಸುವ ಸಾಧುಗಳು ಇಲ್ಲಿ ಹೇರಳವಾಗಿದ್ದಾರೆ. ಅಜ್ಞಾನ–ಅನಾಚಾರಗಳನ್ನೇ ವೈಭವೀಕರಿಸುವ ಇಂಥ ಜನರು ಇರುವ ತನಕ ಅಜ್ಞಾನದಿಂದ ಈ ದೇಶಕ್ಕೆ ಬಿಡುಗಡೆಯೇ ದೊರೆಯದು. ಒಂದು ಕಡೆ ಎಲ್ಲೋ ಓದಿದ ನೆನಪು. "ಹಿಂದುಗಳು ವೈಯಕ್ತಿಕವಾಗಿ ಶುಚಿ, ಸಾಮಾಜಿಕವಾಗಿ ಕೊಳಕರು; ಪಾಶ್ಚಿಮಾತ್ಯರು ವೈಯಕ್ತಿಕವಾಗಿ ಕೊಳಕರು, ಸಾಮಾಜಿಕವಾಗಿ ಶುದ್ಧರು." ನೆನಪಿಲ್ಲದ ಕಾರಣ ಲೇಖಕರ ಹೆಸರು ಕಾಣಿಸಿಲ್ಲ. ಇದು ಕಠೋರ ಸತ್ಯ. ಸಮಾಜ ರಾಷ್ಟ್ರಗಳಲ್ಲಿ ಭ್ರಷ್ಟಾಚಾರ, ಕರ್ತವ್ಯಲೋಪ, ಅನೀತಿ, ಜಾತೀಯತೆ, ಮೌಢ್ಯತೆ ಇಲ್ಲಿ ತುಂಬಿ ತುಳುಕುತ್ತವೆ. ಆದರೆ ಬಹುಪಾಲು ಹಿಂದುಗಳು ಸ್ನಾನ ಮಾಡುವರು, ಶುಚಿಯಾಗಿರುವರು. ಐರೋಪ್ಯ ದೇಶಗಳಲ್ಲಿ ದಿನ ನಿತ್ಯ ಸ್ನಾನ ಮಾಡರು. ಹೊರಗಡೆ ಸುಗಂಧ ದ್ರವ್ಯ ಬಳಿದುಕೊಂಡು ಹೊರಬೀಳುವರು. ಆದರೆ ಕರ್ತವ್ಯ ಪ್ರಜ್ಞೆ, ಕಾಯಕ ನಿಷ್ಠೆ, ಪ್ರಾಮಾಣಿಕತೆ ಜಾತ್ಯತೀತತೆ ಅಲ್ಲಿರುತ್ತವೆ. ಹಿಂದುಗಳು ಪ್ರತಿಯೊಬ್ಬರ ದೇವರಕೋಣೆಯಲ್ಲಿ ಕೈಗೆ ಸಿಕ್ಕ ಪಟಗಳನ್ನೆಲ್ಲ ತೂಗುಹಾಕಿಕೊಂಡು ಮ್ಯೂಸಿಯಮ್ ಮಾಡಿರುವರು, ಅವನ್ನೆಲ್ಲ ತೊಳೆದು ಬಳಿದು ಗಂಟೆಗಟ್ಟಳೆ ಪೂಜೆ ಮಾಡುವರು, ಹೊರಗಡೆ ನೋಡಿದರೆ ಸಾಮಾ

ಜಿಕ ಶಿಸ್ತೂ ಇಲ್ಲ, ಸಂಘಟನೆಯೂ ಇಲ್ಲ. ಹಿಂದುಯೇತರ ಸಮಾಜಗಳಲ್ಲಿ ಸಾಮಾಜಿಕ ಶಿಸ್ತು, ಕ್ರಮ ಬದ್ಧತೆ ಎದ್ದು ಕಾಣುವುದು.

ಧಾರ್ಮಿಕ ಭ್ರಾತೃತ್ವ–ಶಿಸ್ತು ಹಿಂದು ಸಮಾಜದಲ್ಲಿ ಕನಸಿನ ಮಾತು. ಹೋಗಲಿ ಧರ್ಮವು ಶುಚಿತ್ವದ ಮೇಲೆ ನಿಂತಿರಬೇಕು ಎಂಬ ಮೂಲಭೂತ ಕಲ್ಪನೆಯಾದರೂ ಚಿಕ್ಕವೀರಣ್ಣನಂಥವರಿಗೆ ಬೇಡವೆ? ಮನೆಯ ಪರಿಸರದ ಸ್ವಚ್ಛತೆ, ಮನೆಯೊಳಗಣ ಸ್ವಚ್ಛತೆ, ದೇಹದ ಸ್ವಚ್ಛತೆ, ಬಟ್ಟೆ ಬರೆಗಳ ಸ್ವಚ್ಛತೆ ಅಧ್ಯಾತ್ಮ ಜೀವನದ ಮೊಟ್ಟ ಮೊದಲ ಅಗತ್ಯ. ತೀರ್ಥ–ಪ್ರಸಾದ ಅತ್ಯಂತ ಮಹತ್ವಪೂರ್ಣ. ಇದನ್ನು ನಾವು ಒಪ್ಪುತ್ತೇವೆ. ಆದರೆ ಆ ತೀರ್ಥ–ಪ್ರಸಾದ ಕೊಳಕಾಗಿ, ರೋಗಾಣುಗಳ ಆಗರವಾಗಿದ್ದರೂ ಭಕ್ತಿಯಿಂದ ಸ್ವೀಕರಿಸಬೇಕೆ? (ಮೊನ್ನೆ ಕಲಕತ್ತಾದಲ್ಲಿ ವೈದ್ಯರ ತಂಡವೊಂದು ಸಮೀಕ್ಷೆ ನಡೆಸಿದ ಪ್ರಕಾರ ಹಿಂದುಗಳ ದೇವಾಲಯಗಳಲ್ಲಿ ಕೊಡುವ ತೀರ್ಥ–ರೋಗಾಣುಗಳ ತವರು.)

ಗುರುವು ಅಥವಾ ಜ್ಞಾನಿಯು ತನ್ನ ಸ್ವಚ್ಛತೆ, (ಮಡಿಯಲ್ಲ) ಆಚಾರ–ವಿಚಾರ, ನಡೆ–ನುಡಿಗಳಿಂದ ತನ್ನ ಅನುಯಾಯಿಗಳಿಗೆ ಮಾದರಿಯಾಗಿರಬೇಕು. ಅವನೇ ಕೊಳಕಿನ ಆಗರವಾಗಿ ಅದನ್ನೇ ಅವಧೂತ ಸ್ಥಿತಿಯೆಂದು ಮೂರ್ಖತನದಿಂದ ಭಾವಿಸಿದರೆ, ಇತರರಿಗೆ ಬಿಂಬಿಸಿದರೆ, ಜನರು ಅದನ್ನು ನಂಬಿದರೆ, ಸ್ವಚ್ಛತೆ ವಿದ್ಯಾರ್ಥಿಗಾಗಲೀ, ಅಧ್ಯಾಪಕರಿಗಾಗಲೀ ಏಕೆ ಬೇಕು? ವೈದ್ಯರಿಗಾಗಲೀ, ರೋಗಿಗಾಗಲೀ ಏಕೆ ಬೇಕು? ಎಲ್ಲರೂ ಕೊಳಕಾಗಿರುವ ಅಪೂರ್ವ ಸ್ಥಿತಿಯನ್ನೇ ಸಾಧಿಸಬಹುದು. ದುರ್ಗಂಧದ ಮಧ್ಯೆಯೇ ಸಮಾಧಿ ಸ್ಥಿತಿ ಪಡೆಯಬಹುದು.

ಈ ಚಿಕ್ಕವೀರಣ್ಣನವರೆಂಬ ಭಯಂಕರ ಜ್ಞಾನಿ ಒಂದು ಉದಾಹರಣೆ ಕೊಟ್ಟಿದ್ದಾರೆ. ಶಾಂತವೀರ ಸ್ವಾಮಿ ಎಂಬ ಓರ್ವರು 1989 ರಲ್ಲಿ ತೀರಿಕೊಂಡರಂತೆ; ಅವರು ನಿದ್ದೆ ಮಾಡಿದ್ದು, ಸ್ನಾನ ಮಾಡಿದ್ದನ್ನು ಇವರು ಕಾಣಲೇ ಇಲ್ಲವಂತೆ, ಅವರು ಧರಿಸಿದ ಬಟ್ಟೆಯನ್ನು ಹರಿಯುವವರೆಗೂ ಬಿಚ್ಚುತ್ತಿರಲಿಲ್ಲವಂತೆ, ಅನ್ನಾಹಾರದ ಅರಿವೇ ಇಲ್ಲದೆ ಯಾವಾಗಲೂ ಹೆಂಡದ ಅಂಗಡಿಯಲ್ಲಿ ಕುಳಿತಿರುತ್ತಿದ್ದರಂತೆ. ಒಂದು ಸಾರಿ ಈ ವ್ಯಕ್ತಿ ಅಲ್ಲಿಗೇ ಹೋದಾಗ ಹೆಂಡ ಕುಡಿಯುತ್ತಿದ್ದ ಅವರು ಇವರಿಗೂ ಕೊಟ್ಟಿರಂತೆ. ಅದು ಪಂಚಾಮೃತದಷ್ಟು ಸಿಹಿಯಾಗಿತ್ತಂತೆ. ಈ ಪುಣ್ಯಾತ್ಮರು ಎಡೆಯೂರು ಸಿದ್ಧಲಿಂಗೇಶ್ವರರನ್ನು ಸಹ ಈ ಸಾಲಿಗೆ ಸೇರಿಸಿದ್ದಾರೆ. ಇನ್ನು ಕೆಲವು ಅವಧೂತರ ಹೆಸರು ಪತ್ರದಲ್ಲಿ ಕಾಣಿಸಿದ್ದಾರೆ. ಎಡೆಯೂರು ಸಿದ್ಧಲಿಂಗೇಶ್ವರರು ಸದಾಚಾರ ಸಂಪನ್ನತೆಯ ಶಿವಯೋಗ ಮಾರ್ಗಿಗಳು. ಚಿಕ್ಕವೀರಣ್ಣ ತಿಳಿದಂತೆ ಸಾರಾಯಿ ಕುಡಿದು ಸಮಾಧಿ, ಸ್ವರ್ಗ ಕಾಣುವ ಅನಾಚಾರಿಗಳಲ್ಲ. ಶರಣರ ಮಾರ್ಗ ಮೂಢನಂಬಿಕೆಯ ಕರ್ಮಠತನವನ್ನು ಒಪ್ಪದು, ಆಚಾರವಿಲ್ಲದ ಅನಾಚಾರವನ್ನೂ ಅನು–

ಮೋದಿಸದು, ಜ್ಞಾನ ಸಹಿತ ಆಚಾರಕ್ಕೆ ಬದ್ಧವಾದ ಮಾರ್ಗವಿದು. ಅಂತರಂಗ ಶುದ್ಧಿಗೆ ಪೂರಕವಾದ ಬಹಿರಂಗಶುದ್ಧಿಗೆ ಮಹತ್ವ ನೀಡುತ್ತದೆ. ನಾಯಕನ ಹಟ್ಟಿಯ ತಿಪ್ಪೇಸ್ವಾಮಿಯವರನ್ನು ಅವಧೂತರಂತೆ, ಹುಚ್ಚರಂತೆ ನಾಟಕಗಳವರು ಪುರಾಣಕಾರರು ಚಿತ್ರಿಸಿ ಘೋರ ಅಪರಾಧ ಮಾಡಿದ್ದಾರೆ. ಅವರು ಶುದ್ಧ ಶರಣ ಮಾರ್ಗಿಗಳು. ಕಲ್ಯಾಣದಿಂದ ಬಂದ ಕೆಲವು ಮುಖ್ಯ ಶರಣರು ಚಿತ್ರದುರ್ಗ ಭಾಗದಲ್ಲಿ ನೆಲೆಸಿದರು; ಅವರಲ್ಲಿ ಇವರು ಒಬ್ಬರು. ಏನು ಬರೆದರೂ, ಯಾವ ನಾಟಕ ಆಡಿದರೂ ಹೇಳುವವರು ಕೇಳುವವರು ಲಂಗುಲಗಾಮು ಇಲ್ಲದ ಲಿಂಗವಂತ ಸಮಾಜದಲ್ಲಿ ತಮ್ಮ ಕೈಯಿ, ಬಾಯಿ ಚಪಲಕ್ಕೆ ತಕ್ಕಂತೆ ಸಾಹಿತ್ಯ ರಚಿಸುವ ಹವ್ಯಾಸ ನಿರಂತರವಾಗಿ ಸಾಗಿದೆ. ಹೆಂಡದ ಅಂಗಡಿಯಲ್ಲಿ ಕುಳಿತು ಚಿಕ್ಕವೀರಣ್ಣನಿಗೂ ಹೆಂಡ ಕುಡಿಸಿದ ವ್ಯಕ್ತಿ ಮಹಾಪುರುಷನಾದರೆ ಸಾರಾಯಿ ಅಂಗಡಿಯಲ್ಲಿ ಹೊರಳಾಡುವ ಇತರರು ಏನು ಪಾಪ ಮಾಡಿದ್ದಾರೆ? ಪ್ರಾಮಾಣಿಕ ಕುಡುಕರು, "ಈ ದುಶ್ಚಟದ ಅಷ್ಟಪದಿ ಹಿಡಿತದಲ್ಲಿ ಸಿಕ್ಕಿಬಿದ್ದಿದೇವೆ; ತಪ್ಪು ಎನಿಸಿದರೂ ಬಿಡಲಾಗುತ್ತಿಲ್ಲ" ಎಂದು ಪ್ರಾಮಾಣಿಕತೆ ಪ್ರದರ್ಶಿಸಿ ಕ್ಷಮ್ಯ ಅಪರಾಧ ಮಾಡಿದರೆ ಧಾರ್ಮಿಕ ಸೋಗಿನ ವಾಮಾಚಾರಿಗಳು ಅವರ ದುರ್ನಡತೆಗೆ ಸಮಾಧಿ ಸ್ಥಿತಿಯ ಪವಿತ್ರ ಹೊದಿಕೆ ತೊಡಿಸಿ ಅಕ್ಷಮ್ಯ ಅಪರಾಧ ಎಸಗುತ್ತಾರೆ. ಪಾನ ನಿರೋಧ ಆಗಬೇಕೆಂದು ಸರ್ಕಾರವನ್ನು ಏಕೆ ಗಾಂಧೀಜಿಯಂಥವರು ಒತ್ತಾಯಿಸಬೇಕು. ಎಷ್ಟೊಂದು ಜನ ಸಮಾಧಿ ಸ್ಥಿತಿಯಲ್ಲಿರುವ ಮಹಾಪುರುಷರನ್ನು ಸಾರಾಯಿ ಅಂಗಡಿಗಳು, ಅದರ ಗುತ್ತಿಗೆದಾರರು, ಅವರ ಹಿಂದಿರುವ ಸರ್ಕಾರ ತಯಾರು ಮಾಡುತ್ತಿದೆ ಎಂದು ಅಭಿನಂದಿಸಬೇಕಲ್ಲವೆ? ಹೆಂಡ ಕುಡಿಯುವುದು, ಕೊಲೆ ಮಾಡುವುದು ತಪ್ಪುಗಳಾದರೆ ಅವನ್ನು ಯಾರೇ ಮಾಡಿದರೂ ತಪ್ಪುಗಳೇ ಅಲ್ಲವೆ? ಸಮಾಧಿ ಸ್ಥಿತಿ ಎಂದರೆ ಒಂದು ಪವಿತ್ರ–ತನ್ಮಯತೆಯ ಸ್ಥಿತಿ. ಇದೇ ಅಧ್ಯಾತ್ಮ ಸಾಧನೆಯ ಗುರಿ. ಆದರೆ ಇದನ್ನು ಹೀನ ಆಚರಣೆಗಳಾದ ಹೆಂಡ ಕುಡಿದು, ಭಂಗಿ ಸೇದಿ, ನಿದ್ರೆ ಗುಳಿಗೆ ತಿಂದು, ಮಾದಕ ದ್ರವ್ಯ ಸೇವಿಸಿ ಕೃತಕವಾದ ಸಾಧನಗಳಿಂದ ಪಡೆಯಬಾರದು. ಏಕಾಗ್ರತೆಯಿಂದ, ಪರಿಶುದ್ಧ ಪರಮಾತ್ಮನ ನಾಮ ಸ್ಮರಣೆಯಿಂದ ಸಾಧಿಸಬೇಕು. ಎಲ್ಲ ವಾಮಾಚಾರಗಳನ್ನು ಈ ರೀತಿ ಸಮರ್ಥಿಸಿಕೊಳ್ಳುವುದಾದರೆ ಸಮಾಜದಲ್ಲಿ ನೀತಿ ಏಕೆ ಬೇಕು? ಕಾಯಿದೆ ಕಾನೂನು ಮುಂತಾದ್ದು ಏಕೆ ಬೇಕು? ಚಿಕ್ಕವೀರಣ್ಣನವರು ಕೆಲವು ಭಂಗಿ ಸೇದಿ, ಸೆರೆ ಕುಡಿದವರ ಹೆಸರುಗಳನ್ನು ಉದಾಹರಿಸಿ ಅವರು ಜನರ ಕಣ್ಮನಗಳಲ್ಲಿ ಆರಾಧ್ಯ ದೇವರಾಗಿಲ್ಲವೆ ಎಂದು ಕೇಳಿದ್ದಾರೆ. ಚಿಕ್ಕವೀರಣ್ಣನಂತಹ ಭ್ರಾಂತ ಕಲ್ಪನೆಯ ಭಕ್ತರು ಈ ಹಿಂದೂ ದೇಶದಲ್ಲಿ ವಿಪುಲವಾಗಿ ಇರುವ ಕನಕ ಅಂಥ ಗುರುಗಳ ಸಂಖ್ಯೆಯೂ ಅಷ್ಟೇ ಪ್ರಮಾಣದಲ್ಲಿ ಬೆಳೆಯುವುದು ಅಸಂಭವವೇನಲ್ಲ. ಒಬ್ಬ ಗೃಹಸ್ಥನಿಗೂ ನಿಷೇಧಿಸಲಾಗಿರುವ ಆಚರಣೆ

ಗಳನ್ನು ಇಟ್ಟುಕೊಂಡು ಕೀರ್ತಿ–ಗೌರವ–ಹಣ ಸುಲಭವಾಗಿ ಸಂಪಾದಿಸುವ ಅದೃಷ್ಟ ಲಭ್ಯವಾಗುವಾಗ, ಏಕೆ ಇಂಥ ಗುರುಗಳ ಸಂಖ್ಯೆಯೂ ಬೆಳೆಯಬಾರದು ? ಧರ್ಮದ ಸೋಗಿನಲ್ಲಿ ಮಾನವನ ಎಲ್ಲ ದುಶ್ಚಟ, ದುರ್ವ್ಯಸನ, ದುರಾಚಾರಗಳನ್ನು ಅಳವಡಿಸಿ ಕೊಂಡು ಅದಕ್ಕೆ ಭವ್ಯತೆ ಕೊಡುವ ಹಲವಾರು ಪಂಥಗಳು ಈ ದೇಶದಲ್ಲಿ ಹುಟ್ಟಿದವು, ಇಂದೂ ಹುಟ್ಟುತ್ತವೆ. ಇತರೆ ದೇಶಗಳಲ್ಲೂ ಇಂಥ ವಾಮಮಾರ್ಗಗಳು ಇದ್ದವು. ಏಸುಕ್ರಿಸ್ತ–ಮೊಹಮ್ಮದರಿಂದ ಅಂಥ ವಾಮಮಾರ್ಗಗಳು ದೂರವಾದವು. ಈ ಶಾಪ ಗ್ರಸ್ತ ದೇಶದಲ್ಲಿ ಬುದ್ಧ–ಮಹಾವೀರ–ಬಸವಣ್ಣನಂತಹವರು ಹುಟ್ಟಿಯೂ ಅವು ತೊಲಗಲಿಲ್ಲ. ಅರ್ಧಬೆಲೆಗೆ ಗೃಹೋಪಯೋಗಿ ಸಾಮಾನು ಕೊಡುತ್ತೇವೆ ಎಂದು ಅಂಗಡಿ ತೆರೆದು ಲಕ್ಷಾಂತರ ರೂಪಾಯಿ ದೋಚಿಕೊಂಡು ಹೋಗುವ ತಂತ್ರಗಾರರನ್ನು ಕಂಡೂ ಕೇಳಿಯೂ ಪುನಃ ಅಂಥವರು ಬರುತ್ತಲೇ ಜನರು ಸಮ್ಮೋಹನಕ್ಕೆ ಒಳಗಾದಂತೆ ಧಾವಿಸುವರು. ಅದೇ ರೀತಿ ಮಾನವರನ್ನೆಲ್ಲ ದೇವರು ಎಂದುಕೊಂಡು, ಪಡಬಾರದ ಯಾತನೆ ಪಟ್ಟರೂ ಮತ್ತೂ ಅಂಥ ಒಬ್ಬ ವ್ಯಕ್ತಿ ಬರುತ್ತಲೇ ಮೂಢರು ಬೆಂಕಿಗೆ ಹಾರುವ ಪತಂಗಗಳಂತೆ ನುಗ್ಗುವರು. ಹೀಗಾಗಿಯೇ ಹಿಂದು ಸಮಾಜದಲ್ಲಿ ಪವಾಡ ಪುರುಷರ ಸಂಖ್ಯೆ ಬೆಳೆಯುತ್ತಲೇ ಇದೆ. ಮೋಸ ಹೋಗುತ್ತಾರೆ, ಪಶ್ಚಾತ್ತಾಪ ಪಡು ತ್ತಾರೆ, ಕೆಲವರು ಕಹಿ ಅನುಭವಗಳಿಂದ ಪೂರ್ಣ ನಾಸ್ತಿಕರಾಗುತ್ತಾರೆ ; ಮತ್ತೆ ಕೆಲವರು ಬುದ್ಧಿ ಕಲಿತು ವಿವೇಕಿಗಳಾಗುತ್ತಾರೆ, ಇನ್ನು ಕೆಲವರು ಅದೇ ಭ್ರಾಂತಿಯ ಲ್ಲಿದ್ದು ಅಂಥ ಶೋಷಕರ ವಲಯದಲ್ಲೇ ಸಿಕ್ಕಿಬೀಳುತ್ತಾರೆ. ಈ ವಿಕ್ಷಿಪ್ತ ಬುದ್ಧಿಯ ಭಕ್ತಿಯ ಬದಲು ಸೃಷ್ಟಿಕರ್ತನನ್ನು ನಂಬಿ, ನಿಜ ಜ್ಞಾನವನ್ನು ಬೋಧಿಸುವ ಬುದ್ಧ-ಬಸವಣ್ಣ-ಅಲ್ಲಮಪ್ರಭು-ಅರವಿಂದರು-ವಿವೇಕಾನಂದರು ನಡೆದ ದಾರಿಯಲ್ಲಿ ಸಾಗಿದರೆ ಜೀವನವು ಸುಧಾರಿಸುವುದು, ಸಮಾಜವು ಶುದ್ಧವಾಗುವುದು, ರಾಷ್ಟ್ರವು ಸಮೃದ್ಧ–ವಾಗುವುದು.

ಚಿಕ್ಕವೀರಣ್ಣ ಬರೆಯುತ್ತಾರೆ, "ನಿಮ್ಮ ಬಗ್ಗೆಯೂ ಜನತೆ ಹಣ ಗಳಿಸುವುದ ಕ್ಕಾಗಿ ವೇಷಧರಿಸಿಕೊಂಡವರು ಎಂದು ಮಾತಾಡುತ್ತಾರೆ, ಇದನ್ನು ನಂಬಬಹುದೆ ?" ಎಂದು ಪತ್ರವನ್ನು ಮುಗಿಸಿದ್ದಾರೆ. ನಮ್ಮನ್ನು ನಾವು ಸಮರ್ಥಿಸಿಕೊಳ್ಳಬಹುದು ; ಭಂಗಿ ಸೇದುವವರು ಅದನ್ನೇ ಸಮರ್ಥಿಸಿಕೊಳ್ಳಬಹುದು. ಆದರೆ ಯಾವುದನ್ನೇ ಸತ್ಯ ಅಥವಾ ನಂಬಲರ್ಹವಾದುದು ಎಂದು ನಿರ್ಣಯಿಸುವುದನ್ನು ಚಿಕ್ಕವೀರಣ್ಣನಂಥವರು ಬೆಳೆಸಿಕೊಳ್ಳಬೇಕು. ಸತ್ಯವು ಕೇವಲ ವೈಯಕ್ತಿಕ (Personal–Subjective) ಆಂತರಿಕವಲ್ಲ, ವಸ್ತುನಿಷ್ಠವಾದುದು (Objective) ಒಂದು ಲ್ಯಾಕ್ಟೋ–ಮೀಟರನ್ನು ಇಟ್ಟು ಹಾಲಿನ ಗುಣವನ್ನು ತಿಳಿಯುವಂತೆ ವ್ಯಕ್ತಿಗಳನ್ನು ಅಳೆಯುವ ಸಾಮರ್ಥ್ಯವನ್ನು ಧಾರ್ಮಿಕರು ಬೆಳೆಸಿಕೊಳ್ಳಬೇಕು.

ಕ್ರೈಸ್ತ–ಇಸ್ಲಾಂ ಧರ್ಮಗಳಲ್ಲಿ ಗುರು–ಭಕ್ತ ಬಾಂಧವ್ಯ ವೈಯಕ್ತಿಕವಾಗಿಲ್ಲ. ಅಲ್ಲಿ ಸಂಬಂಧ ಸಾಮಾಜಿಕ (social) ಮತ್ತು ಸಾಂಘಿಕ (institutional) ಹಿಂದು ಸಮಾಜದಲ್ಲಿ ಗುರು–ಭಕ್ತ ಸಂಬಂಧ ವೈಯಕ್ತಿಕವಾಗಿ ಅನೇಕ ವಿಪತ್ತುಗಳಿಗೆ ಎಡೆಮಾಡಿಕೊಡುತ್ತಲೇ ಇದೆ. ಅನ್ಯಧರ್ಮ–ಸಮಾಜ ರಚನೆಗಳನ್ನು ಅಧ್ಯಯನ ಮಾಡಿದ ಮೇಲೆ ನಾನು ಈ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದೇನೆ. ಸಂತ, ಗುರು, ಮಹಾತ್ಮರು ಹೇಗಿರಬೇಕು ? ಅವರ ನಡೆ-ನುಡಿ, ಆಚಾರ-ವಿಚಾರ ಚಿಂತನೆ, ಬರಹ ಇವೆಲ್ಲ ವ್ಯಕ್ತಿತ್ವಗಳನ್ನು ಅಳೆಯುವ ಸಾಧನಗಳು. ಮಹಾತ್ಮರು ತಮ್ಮ ಸನ್ನಿಧಿಯಿಂದ ಇನ್ನಿತರರನ್ನು ಪರಿವರ್ತಿಸಬೇಕು, ಅವರ ದುಶ್ಚಟಗಳನ್ನು ಬಿಡಿಸಬೇಕು ಎಂದು ಒಂದು ವ್ಯಾಖ್ಯೆ ಕೊಡುತ್ತೇವೆ ಎಂದುಕೊಳ್ಳಿರಿ. ಆಗ ಹೆಂಡ ಕುಡಿಯುವವನನ್ನು ಬಿಡಿಸಿದವನು ಗುರುವೇ ವಿನಾ, ಚಿಕ್ಕವೀರಣ್ಣನ ಗುರುವಿ ನಂತೆ ಹೆಂಡದ ಅಂಗಡಿಯಲ್ಲಿ ಕುಳಿತು ನಂಬಿ ಬಂದ ಭಕ್ತನಿಗೆ ಹೆಂಡ ಕುಡಿಸಿದವನಲ್ಲ. ಅದು ಅಮೃತದಂತಿತ್ತು ಎಂದು ಈ ಪುಣ್ಯಾತ್ಮ ಬಾಯಿ ಚಪ್ಪರಿಸಿದ್ದಾರೆ, ಹೂಂ, ಅದು ಅಮೃತದಂತೆ ಇರುತ್ತದೆ ಎಂದೇ ಹೆಂಡತಿ-ಮಕ್ಕಳನ್ನು ಉಪವಾಸ ಕೆಡವಿ ಕುಡುಕರು ಸಾರಾಯಿ ಅಂಗಡಿಗಳಲ್ಲಿ ಹೊರಳಾಡುವುದು. ಅವನಿಗೆ ಅದು ಅಮೃತ ದಂತಿರದಿದ್ದರೆ ಅವನೇಕೆ ಹೊಲಸಿನಲ್ಲಿ ಹೊರಳಾಡುವನು ! ಕಾಪಾಲಿಕರು ಅತ್ಯಂತ ಸ್ವೇಚ್ಛಾಚಾರಿಗಳಾಗಿ ದೇವರ ಹೆಸರಲ್ಲೇ ವಿಕೃತ ಜೀವನ ನಡೆಸುವರು. ಆದರದು ಧರ್ಮ ಸಮ್ಮತವೆ ? ಯಾರಾದರೊಬ್ಬರು ಸಾರ್ವಜನಿಕ ವ್ಯಕ್ತಿಯಾಗುತ್ತಾರೆ ಎಂದು ಕೊಳ್ಳೋಣ. ಆಗ, ಅವರ ಬೋಧನೆ ಯಾವ ರೀತಿ ವ್ಯಕ್ತಿಗಳನ್ನು ರೂಪಿಸುವುದು, ಅವರ ಬರಹ ಎಂತಹ ಚಿಂತನ ಶೈಲಿ ಬೆಳೆಸುವುದು, ಇವರ ಬರಹ–ಬೋಧೆಗಳಿಂದ ಎಂಥ ಜನಾಂಗ ನಿರ್ಮಾಣವಾಗುವುದು; ಈ ದಿಶೆಯಲ್ಲಿ ಚಿಂತಿಸಿ ವ್ಯಕ್ತಿಗಳ ಮಟ್ಟವನ್ನು ನಿರ್ಧರಿಸಿಕೊಳ್ಳಬೇಕು. ಸಂತ ಪಾಲ ಒಂದು ಕಡೆ ಧರ್ಮ ಪ್ರಚಾರಕ್ಕೆ ಹೋಗುವನು. ಯಹೂದಿಗಳು ತುಂಬಾ ಕಿರುಕುಳ ಕೊಡುವರು. ಆಗ ಒಬ್ಬ ಒಳ್ಳೆಯ ಯಹೂದಿ ಹೇಳುತ್ತಾನೆ : "ನೀವೇಕೆ ಕಿರುಕುಳ ಕೊಡುವಿರಿ. ಯಾವುದೇ ಒಳ್ಳೆಯದು ಇದ್ದರೆ ಕಷ್ಟಗಳ ಮಧ್ಯೆಯೂ ಬೆಳೆಯುತ್ತಿದೆ. ಕೆಟ್ಟದ್ದು ತಾತ್ಕಾಲಿಕವಾಗಿ ಬೆಳೆದಂತೆ ಕಂಡರೂ ತನ್ನ ವಿನಾಶವನ್ನು ತಾನೇ ತಂದುಕೊಳ್ಳುತ್ತದೆ." ಆದ್ದರಿಂದ ನಾವು ಧರ್ಮವನ್ನು ಸದಾಚಾರದ ಮೇಲೆ ಬೆಳೆಸಬೇಕು, ಅನಾಚಾರದ ಮೇಲಲ್ಲ.

ಅತ್ಯಂತ ಹೇಯವಾದುದನ್ನೂ ಈ ರೀತಿ ಸಮರ್ಥಿಸಿಕೊಳ್ಳುವ ಅಸಹ್ಯ ನಂಬಿಕೆ ತೊರೆದು ಚಿಕ್ಕವೀರಣ್ಣನಂತಹವರು ಸಮತೋಲನದ ದಾರಿ ಹಿಡಿಯಬೇಕು. ಧರ್ಮವು ಸುಜ್ಞಾನ–ಸದ್ಭಕ್ತಿ–ಸತ್ಕ್ರಿಯೆಗಳ ಸಂಗಮವಾಗಿ ವ್ಯಕ್ತಿಯನ್ನು ಆತ್ಮೋದ್ಧಾ ರಕ್ಕೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಪ್ರೇರೇಪಿಸುವ ಸಾಧನವಾಗಬೇಕು. ಆದ್ದರಿಂದ ಹಿಂದುಗಳು ವ್ಯಕ್ತಿನಿಷ್ಠ ಪಂಥಗಳ ಬೆನ್ನುಹತ್ತುವ ಬದಲು ತತ್ತ್ವನಿಷ್ಠ ಧರ್ಮಾವಲಂಬಿ ಗಳಾಗಬೇಕು. ಅಂದರೆ ಮಾತ್ರ ಈ ದೇಶಕ್ಕೆ ಒಳ್ಳೆಯ ಭವಿಷ್ಯವಿದೆ. ★ ★

ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ

ರಾಷ್ಟ್ರೀಯ ಬಸವ ದಳದವರು ತಮ್ಮದೇ ಆದ ಒಂದು ಪ್ರಾರ್ಥನಾ ಮಂದಿರ, ಬಸವ ಮಂಟಪ ಹೊಂದಲು ನಿವೇಶನ ಪಡೆಯಲು ಪ್ರಯತ್ನ ಮಾಡಿದ್ದಾರೆ, ಮಾಡುತ್ತಿದ್ದಾರೆ, ಈ ಬಗ್ಗೆ ಕೆಲವು ರಾ. ಬ. ದಳಗಳವರು ಎರಡು ವರ್ಷಗಳ ಹಿಂದೆ ಸಾಕಷ್ಟು ಚರ್ಚಿಸಿದ್ದಾರೆ; ಆ ಚರ್ಚೆಯ ಫಲಿತಾಂಶ ಹೀಗಿದೆ; ರಾ. ಬ. ದಳಗಳವರು ನಿವೇಶನ, ಆಸ್ತಿ ಹೊಂದುವಾಗ ಬಸವ ಧರ್ಮಪೀಠ [ರಿ] ಇದರ ಹೆಸರಿಗೆ, ಅದು ರೆವಿನ್ಯೂ ನಿವೇಶನ ಅಥವಾ ಕೃಷಿ ಭೂಮಿಯೇ ಇರಲಿ, ಬಿನ್‌ಶೇತಗಿ ಆಗಿರುವ ಭೂಮಿಯೇ ಇರಲಿ ಖರೀದಿಸಬೇಕು. ರಾಷ್ಟ್ರೀಯ ಬಸವ ದಳ ಕೇಂದ್ರ ಸಮಿತಿಯವರು ಒಂದು ಸ್ಥಳೀಯ ಸಮಿತಿ ಮಾಡಿ ಅವರಿಗೆ ಎಲ್ಲ ಸ್ವಾತಂತ್ರ್ಯ ನೀಡಬೇಕು. ಸ್ಥಳೀಯರೇ ಎಲ್ಲವನ್ನೂ ಕಟ್ಟಬೇಕು; ನಿರ್ವಹಿಸಬೇಕು; ಆಕಸ್ಮಾತ್ ಸ್ಥಳೀಯ ಸಮಿತಿಗಳಲ್ಲಿ ಭಿನ್ನಾಭಿಪ್ರಾಯ ಬಂದಾಗ ಕೇಂದ್ರ ಸಮಿತಿಯವರು ಮಧ್ಯೆ ಪ್ರವೇಶಿಸಿ ಸರಿಪಡಿಸಬೇಕು ಮತ್ತು ಸ್ಥಳೀಯ ಸಮಿತಿಯು ಅಸಮರ್ಥವಾದಾಗ ಕೇಂದ್ರವು ಮಧ್ಯೆ ಪ್ರವೇಶಿಸಿ ಬೇರೊಂದು ಸಮಿತಿಯನ್ನು ರಚಿಸಿ, ಸುಸೂತ್ರವಾದ ಆಡಳಿತ ನಿರ್ವಹಣೆಗೆ ಅನುವು ಮಾಡಿಕೊಡಬೇಕು. ಹೀಗೆ ನಿರ್ಣಯ ತೆಗೆದುಕೊಳ್ಳುವಲ್ಲಿ ಶರಣ. ಎನ್. ಪುಟ್ಟರುದ್ರಪ್ಪ ಮತ್ತು ಶರಣ. ಎಸ್. ಲಿಂಗಣ್ಣ ಬಹಳಷ್ಟು ಸಲಹೆ, ಪ್ರೇರಣೆ ನೀಡಿದರಲ್ಲದೆ ಬೇರೆ ಕೆಲವೊಂದು ಸಂಘಟನೆಗಳನ್ನು ಮಾದರಿಯಾಗಿ ಉದಾಹರಿಸಿದರು. ನೆರೆದ ಎಲ್ಲರೂ ಇದೇ ನಿರ್ಣಯಕ್ಕೆ ಬಂದರು. ಅಂದಿನಿಂದ ಎಲ್ಲ ಬಸವ ದಳಗಳಿಗೆ ಇದೇ ಸೂಚನೆ ನೀಡುತ್ತಾ ಬರಲಾಗಿದೆ.

ಅದರಂತೆಯೇ ಇತ್ತೀಚೆಗೆ ಹುಟ್ಟಿದ ಒಂದು ಬಸವ ದಳಕ್ಕೂ ಇದೇ ಸೂಚನೆ ನೀಡಿದಾಗ ಅದರಲ್ಲಿ ಒಂದಿಬ್ಬರು, "ಮಾತಾಜಿಯವರು ಪವರ್ ಸೆಂಟ್ರಲೈಸ್ ಮಾಡಿಕೊಳ್ಳಬಯಸಿದ್ದಾರೆ" ಎಂದು ನುಡಿದುದಾಗಿ ತಿಳಿಯಿತು; ಚರ್ಚೆ ನಡೆದ ಸಭೆಯಲ್ಲಿ ನಾನು ಸೂಚಿಸಿದ್ದೇ ಬೇರೆ " ಶಿಸ್ತು, ನಿಷ್ಠೆ, ನಿಸ್ವಾರ್ಥ ಇಲ್ಲದೆ ಕೆಲಸ ಮಾಡುವವರೇ ಹೆಚ್ಚಾಗಿ ಇರುವ ಈ ಸಮಾಜದಲ್ಲಿ ಈ ನೇಮ ಹಾಕೋದು ಬೇಡ. ರಾ. ಬ. ದಳದವರು ಅವರವರ ಜವಾಬ್ದಾರಿ ಅವರೇ ಹೊರಲಿ. ಅಧ್ಯಾತ್ಮಿಕ–ನೈತಿಕ–ಧಾರ್ಮಿಕ ಮಾರ್ಗದರ್ಶನ ಮಾತ್ರ ಕೇಂದ್ರ ಸಮಿತಿಯದಿರಲಿ. ಬಾಕಿ ವ್ಯವಹಾರ ಸ್ಥಳೀಯರದೇ ಇರಲಿ" ಎಂದು ನಾನು ಸೂಚಿಸಿದರೂ ಅನೇಕ ಶರಣರು, "ಹೀಗಾದರೆ ಕಾಲಾನಂತರದಲ್ಲಿ ಸಂಸ್ಥೆಗಳು ನಡೆಯದೆ ನಿಂತು ಹೋಗುತ್ತವೆ. ಕೇಂದ್ರ ಸಮಿತಿಗೆ ಅಧಿಕಾರವಿದ್ದರೆ ಪ್ರವೇಶಿಸಿ ಸರಿಪಡಿಸಬಹುದು ; ಬೇರೆ ಸಮಿತಿ ರಚಿಸಿ ಆಡಳಿತ ಸುಸೂತ್ರಗೊಳಿಸಬಹುದು ಇಂದು ಸಮಾಜದ ಎಷ್ಟೋ ಆಸ್ತಿಪಾಸ್ತಿ ಹೆರವರ ಪಾಲಾಗಿರುತ್ತವೆ,

ಅದು ತಪ್ಪಿಸಬೇಕಾದರೆ ಕೇಂದ್ರ ಸಂಸ್ಥೆಯೊಂದಿದ್ದರೆ, ಅದಕ್ಕೆ ಅವಕಾಶವಿದ್ದರೆ ಬಸವ ದಳಗಳ ಆಸ್ತಿ ಅಪವ್ಯಯವಾಗುವುದನ್ನೂ ತಡೆಯಬಹುದು" ಎಂದು ಕೆಲವು ಶರಣರು ಬಲವಾಗಿ ವಾದಿಸಿದರು. ಉಳಿದ ಎಲ್ಲರೂ ಅನುಮೋದಿಸಿದರು. ಮೇಲೆ ಸೂಚಿಸಿದ ಒಂದು ಬಸವ ದಳದ (ಹೆಸರು ಬೇಡ) ಕೆಲವರ ಬಾಯಿಯಲ್ಲಿ ಈ ಮಾತು ಬಂದಿದೆ ಎಂದ ಮೇಲೆ ಅವರಿಗೆ ಕೇಂದ್ರ ಸಮಿತಿ ಕೈಗೊಂಡ ನಿರ್ಣಯದಲ್ಲಿ ವಿಶ್ವಾಸವಿಲ್ಲ ಎಂದಾಯಿತು. ಆದ್ದರಿಂದ ಎರಡು ವರ್ಷಗಳ ಹಿಂದೆ ತೆಗೆದುಕೊಂಡ ನಿರ್ಣಯವನ್ನು ಪುನರ್ ವಿಮರ್ಶಿಸಿ ಚರ್ಚಿಸುವುದು ಒಳ್ಳಿತು. ಈ ಚರ್ಚೆಯನ್ನು ಅಕ್ಟೋಬರ 22 ರಂದು ಇಟ್ಟುಕೊಂಡು, ನಿರ್ಧಾರಕ್ಕೆ ಬರುವುದು ಒಳ್ಳೆಯದು. ಕೇಂದ್ರದಿಂದ ಎಲ್ಲವನ್ನೂ ನಿಯಂತ್ರಿಸುವುದು ಆಗದ್ದರಿಂದಲೂ ಶಿಸ್ತು ಅವಲಂಬಿಸುವುದು ಲಿಂಗವಂತರಿಗೆ ಆಗದೆ ಇರುವ ಸಂಗತಿಯಾದ್ದರಿಂದಲೂ, ಸ್ಥಳೀಯ ರಾಷ್ಟ್ರೀಯ ಬಸವ ದಳಗಳವರಿಗೇ ಹೆಚ್ಚಿನ ಸ್ವಾತಂತ್ರ್ಯ ಕೊಡುವ ದಿಶೆಯಲ್ಲಿ ಎಲ್ಲರೂ ಚಿಂತನೆ ಮಾಡುವುದು ಒಳ್ಳೆಯದು. ಆದ್ದರಿಂದ ಚಿಂತನೆಗೆ ಅಣಿಯಾಗಿ ಬರಬೇಕೆಂದು ಸೂಚಿಸುವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ರಾಷ್ಟ್ರೀಯ ಬಸವ ದಳಗಳಿಗೆ ಒಂದು ಲೈಟಿನ ಲಾಂಛನ

ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಮತ್ತು ಶರಣರುಗಳು ವೈಯಕ್ತಿಕವಾಗಿ ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳಬಹುದಾದ ಒಂದು ವಿಶೇಷ ಲೈಟ್ ಬಾಕ್ಸನ್ನು ಬಸವ ಧರ್ಮ ಪೀಠಕ್ಕೆಂದು ಸಿದ್ಧಪಡಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಆರ್ಡರ್ ಕೊಟ್ಟು ಸಿದ್ಧಪಡಿಸಲಾಗುತ್ತಿರುವ ಈ ಲೈಟ್ ಬಾಕ್ಸನ್ನು ಅಕ್ರಿಲಿಕ್ ಷೀಟ್‌ನಿಂದ ತಯಾರು ಮಾಡಿಸಲಾಗುತ್ತಿದೆ. ಅಕ್ಟೋಬರ್ ಶಿಬಿರದ ಹೊತ್ತಿಗೆ ಈ ಬಾಕ್ಸನ್ನು ಸಿದ್ಧಪಡಿಸಿ ಇಟ್ಟಿರಲಾಗುವುದು. ಈ ಬಾಕ್ಸಿನ ತಯಾರಿಕೆ ವೆಚ್ಚ 800–00 (ಎಂಟು ನೂರು) ಎಂದು ಅಂಗಡಿಯವರು ಹೇಳಿದ್ದಾರೆ. ಎಲ್ಲ ರಾಷ್ಟ್ರೀಯ ಬಸವ ದಳಗಳವರೂ ಈ ಬಸವ ಲಿಂಗ ಮುದ್ರೆಯ ಬಾಕ್ಸನ್ನು ಕಡ್ಡಾಯವಾಗಿ ಹೊಂದಿರಬೇಕು, ಶರಣರುಗಳು ವೈಯಕ್ತಿಕವಾಗಿ ತಮ್ಮ ಮನೆಯಲ್ಲಿ ಸಹ ಹಾಕಿಕೊಳ್ಳಬಹುದು. ಆದ್ದರಿಂದ ಇದನ್ನು ಹೊಂದಬೇಕು ಎನ್ನುವ ಶರಣರು ಮೊದಲೇ 800 ರೂಗಳನ್ನು ಬ್ಯಾಂಕ್ ಡ್ರಾಫ್ಟ್ ಮುಖಾಂತರ ಕಳಿಸಿದರೆ ಬಾಕ್ಸನ್ನು ಸಿದ್ಧಪಡಿಸಿ ಇಟ್ಟಿರಲಾಗುವುದು. ಶಿಬಿರ ಮುಗಿಸಿ ಹೋಗುವಾಗ ಒಯ್ಯಲು ಅನುಕೂಲವಾಗುವುದು. ಅಥವಾ ಶಿಬಿರದ ಹೊತ್ತಿಗೆ ನಮ್ಮ ಸಂಸ್ಥೆಯ ಪರವಾಗಿ, ಸಂಸ್ಥೆಗಾಗಿ ಸಿದ್ಧವಾಗಿರುವ

ಬಾಕ್ಸ್ ಆನ್ನು ಸ್ವತಃ ನೋಡಿ, 800 ರೂ ಹಣ ತುಂಬಿ ಹೋದರೆ ಆರ್ಡರ್ ಕೊಟ್ಟು ಸಿದ್ಧಪಡಿಸಿ ಕೊಡಲಾಗುವುದು. ತಯಾರಾದ ಮೇಲೆ ತರಿಸಿಕೊಳ್ಳುವ ಜವಾಬ್ದಾರಿ ಶರಣ ಬಂಧುಗಳದೇ ಆಗಿರುವುದು. ಕೇಂದ್ರ ಕಾರ್ಯಾಲಯದಿಂದಲೇ ಸಿದ್ಧಪಡಿಸಿಕೊಡಬೇಕೆಂಬ ಅಪೇಕ್ಷೆಯುಳ್ಳವರು "ಸಿಸ್ಟರ್ ನೀಲಾಂಬಿಕೆ, ಬೆಂಗಳೂರು" ಇವರ ಹೆಸರಿಗೆ ಬ್ಯಾಂಕ್ ಡ್ರಾಫ್ಟ್ 800 ರೂಗಳಿಗೆ ತೆಗೆಸಿ ಕಳಿಸಬೇಕು; ಬೇಗನೇ ಪತ್ರ ವ್ಯವಹಾರವನ್ನು ಮಾಡಬೇಕು ಆಕ್ರಿಲಿಕ್ ಷೀಟ್‌ದಲ್ಲಿ ಷಟ್ಕೋನ–ಬಸವ ಲಿಂಗ ಮುದ್ರೆಯನ್ನು ಈ ಪಟವು ಹೊಂದಿರುತ್ತದೆ. ವಿ. ಸೂ : ನಾವು ಇದರಲ್ಲಿ ಸೂಚಿಸಿರುವ 800 ರೂಗಳು ಸದ್ಯದ ಬೆಲೆ. ಕಾಲಾನಂತರದಲ್ಲಿ ಬೆಲೆ ಹೆಚ್ಚುತ್ತದೆ ಎಂದು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇವೆ.

ಸೋದರಿ ನೀಲಾಂಬಿಕೆ
ಬಸವ ಮಂಟಪ, 2035, 2ನೇ ಬ್ಲಾಕು
20 ನೆಯ ಮೇಯಿನ್, ರಾಜಾಜಿನಗರ, ಬೆಂಗಳೂರು–560010

ಶ್ರೀ ಮೂಜಗಂ ಪರ ಸಮರ್ಥನೆ

—ಮಾತಾಜಿ

ಹುಬ್ಬಳ್ಳಿಯ ಪೂಜ್ಯ ಮೂಜಗಂರವರ ದೃಷ್ಟಿಕೋನ ವಿಚಾರಧಾರೆಯನ್ನು ವಿಮರ್ಶಿಸಿ ಬರೆದ ಲೇಖನಕ್ಕೆ ಪ್ರತ್ಯುತ್ತರವಾಗಿ ಹುನಗುಂದದ ಶ್ರೀ ಬಸವರಾಜ ತೆಗ್ಗಿನಮಠ ಅವರು ಪ್ರಜಾಜ್ಯೋತಿ ಎಂಬ ಒಂದು ಪತ್ರಿಕೆಯ ಆಗಸ್ಟ 1994 ರ ಸಂಚಿಕೆಯಲ್ಲಿ ಒಂದು ಲೇಖನ ಬರೆದಿದ್ದಾರೆ. ಅದಕ್ಕೆ ಶೀರ್ಷಿಕೆ ಹೀಗೆ ಕೊಟ್ಟಿದ್ದಾರೆ, **"ಬೆಂಕಿ ಬಿದ್ದಾಗ ನೆರೆಯುವರು ಕಾಸಿಕೋಬಾರದು"** ಎಂಬುದಾಗಿ ಶೀರ್ಷಿಕೆಯೇ ದೋಷಯುಕ್ತವಾಗಿದೆ, ಯಾವಾಗಲೂ ಸಮಸ್ಯೆಗಳು ವೈಯಕ್ತಿಕ–ಸಾಮೂಹಿಕ, ವ್ಯಷ್ಟಿಗತ–ಸಮಷ್ಟಿಗತ ಎಂದು ಎರಡು ಪ್ರಕಾರವಾಗಿ ಇರುತ್ತವೆ. ಇಳಕಲ್‌ದ ಪೂಜ್ಯ ಶ್ರೀ ಮಹಾಂತ ಸ್ವಾಮೀಜಿಯವರು ಮತ್ತು ಹುಬ್ಬಳ್ಳಿಯ ಪೂಜ್ಯ ಮೂಜಗಂ ಅವರ ಮಧ್ಯೆ ಇತ್ತೀಚಿಗೆ ನಡೆದ ವಾದ–ವಿವಾದ ವೈಯಕ್ತಿಕವಲ್ಲ ಅಥವಾ ಯಾವುದೋ ಒಂದು ಆಸ್ತಿ–ಪಾಸ್ತಿ ಕುರಿತಾದ ಜಗಳವಲ್ಲ; ಇದು ಒಂದು ತತ್ತ್ವಕ್ಕೆ ಸಂಬಂಧಪಟ್ಟುದು, ವಿವಾದಕ್ಕೆ ಸಾಮಾಜಿಕ ಆಯಾಮವಿದೆ, ಸಮಷ್ಟಿಗತ ಸಮಸ್ಯೆ ಕುರಿತದ್ದಾಗಿದೆ, ಹಲಿತರು ಲಿಂಗವಂತ ಸಂಪ್ರದಾಯದ ಮಠವೊಂದಕ್ಕೆ ಮಠಾಧಿಕಾರಿಯಾಗಬಲ್ಲರೇ ಎಂಬುದನ್ನು ಎಂಬ ತಾತ್ತ್ವಿಕ ಸಮಸ್ಯೆಯನ್ನು ಕೆದರಿದೆ. ಆದ್ದರಿಂದ ಇದರಲ್ಲಿ ಆಸಕ್ತಿ ಇರುವ ಅಥವಾ ಬಸವ ತತ್ತ್ವಕ್ಕೆ ಬದ್ಧರಾದ ಯಾರಿಗೇ ಆದರೂ ಚರ್ಚೆಯಲ್ಲಿ ಪ್ರವೇಶಿಸುವ ಹಕ್ಕಿದೆ. ಆದ್ದರಿಂದ ಇದಕ್ಕೆ, ಇನ್ನೊಬ್ಬರಿಗೆ ತೊಂದರೆಯಾದಾಗ ತಾವು ಲಾಭ ತೆಗೆದುಕೊಳ್ಳುವ ಕುತ್ಸಿತ ಬುದ್ಧಿಯ ಮನೋಭಾವದ ಗಾದೆ 'ಬೆಂಕಿ ಬಿದ್ದಾಗ

ನೆರೆಯುವರು ಕಾಸಿಕೋ ಬಾರದು' ಎಂಬ ಶೀರ್ಷಿಕೆಯೇ ಸರಿಯಲ್ಲ. ಧರ್ಮ–ತತ್ತ್ವ–ಸಮಾಜ ಶಾಸ್ತ್ರ ಮುಂತಾದುವನ್ನು ಕುರಿತು ಚರ್ಚಿಸುವುದು ಇಂದು ಅತ್ಯಗತ್ಯವಾಗಿದೆ. ಇದು ಕೇವಲ ಇಬ್ಬರು ಸ್ವಾಮಿಗಳೊಳಗೆ ನಡೆದ ವೈಯಕ್ತಿಕ ಕದನವಾಗಿದ್ದರೆ ಶ್ರೀ ಎಸ್. ನಿಜಲಿಂಗಪ್ಪನವರು, ಲಿಂ|| ಸಿದ್ಧಯ್ಯ ಪುರಾಣಿಕರು, ಶ್ರೀ ಹಿರೇಮಲ್ಲೂರು ಈಶ್ವರನ್ ನಂತಹವರೆಲ್ಲ ಏಕೆ ಈ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭಟನೆ ಸೂಚಿಸಬೇಕಿತ್ತು ?

"ಕಲ್ಯಾಣ ಕಿರಣ"–ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಜಗದ್ಗುರು ಮಾತೆ ಮಹಾದೇವಿ ತಾಯಿಯವರ ಧಾರ್ಮಿಕ ವಿಚಾರಗಳ ಬಸವ ತತ್ತ್ವಾಧಾರಿತ ಪತ್ರಿಕೆ ಎಂಬ ಪ್ರತೀತಿ ಬೇರೆ; ಹೀಗಿದ್ದು ಈ ವಿಷಯಕ್ಕೆ ಕಲ್ಯಾಣ ಕಿರಣ ಪತ್ರಿಕೆಯನ್ನು ಮೀಸಲಾಗಿಟ್ಟು ಹೊರತರುವುದು ವಿಸ್ಮಯಕಾರಕ ವಿಚಾರವೇ ಸರಿ." ಎಂದಿದ್ದಾರೆ ಬಸವರಾಜ ತೆಗ್ಗಿನ ಮಠರು. ಟೀಕಿಸುವುದರಲ್ಲೂ ಸ್ಪಷ್ಟತೆ–ಪ್ರಖರತೆ ಇವರ ಬರಹದಲ್ಲಿಲ್ಲ.

ಕಲ್ಯಾಣ ಕಿರಣ ಚಿಂತನಶೀಲ ಪತ್ರಿಕೆ ಶ್ರೀ ಪೂಜ್ಯ ಗುರುಗಳ ಮತ್ತು ನಮ್ಮ ವಿಚಾರಧಾರೆ ಏನು ಎಂಬುದನ್ನು ಪ್ರತಿಪಾದಿಸಲು ಹುಟ್ಟಿದ ಪತ್ರಿಕೆ, ಆದಕ್ಕಾಗಿಯೇ ಇರುವ ಪತ್ರಿಕೆ. ವಚನ ಸಾಹಿತ್ಯ ವಿಶ್ಲೇಷಿಸಲು ಮತ್ತು ಧರ್ಮಪಿತ ಬಸವಣ್ಣನವರು ಇತರ ಶರಣರ ಕುರಿತು ಏನೇ ಅಪಚಾರವಾದಾಗ ತಕ್ಷಣವೇ ಪ್ರತಿಕ್ರಿಯೆ, ಪ್ರತಿಭಟನೆ ನೀಡುವ ಪತ್ರಿಕೆ. ಕೇವಲ ಮೂಜಗಂ ಕುರಿತಷ್ಟೆ ವಿಮರ್ಶಿಸಿಲ್ಲ; ಎಂದಿನಿಂದಲೂ ಪಿ. ವಿ. ನಾರಾಯಣ, ಚಂಪಾಪ್ರಲಾಪ, ಗದುಗಿನ ಜಗದ್ಗುರುಗಳ ವಿರುದ್ಧ ಪಂಚಾಚಾರ್ಯವಾದಿಗಳ ಆಪಸ್ವರ–ಇವೆಲ್ಲಕ್ಕೂ ನಿರಂತರವಾಗಿ ಉತ್ತರ ಕೊಡುತ್ತಾ ಬಂದಿದೆ; ಆದ್ದರಿಂದ ತನ್ನ ವೃತ್ತಿಧರ್ಮವನ್ನೇ ಈ ಸನ್ನಿವೇಶದಲ್ಲೂ ಕಲ್ಯಾಣ ಕಿರಣ ಅಭಿವ್ಯಕ್ತಗೊಳಿಸಿದೆಯೇ ವಿನಾ ಹೊಸದಾಗಿ ಏನೂ ಶುರುಮಾಡಿಲ್ಲ. ಇಳಕಲ್‌ದ ಪೂಜ್ಯ ಮಹಾಂತ ಸ್ವಾಮಿಗಳವರು ಮೊಟ್ಟ ಮೊದಲ ಶರಣ ಮೇಳಕ್ಕೆ ಬಂದುದು ನಿಜ, ಕಾರ್ಯಾಧ್ಯಕ್ಷರಾಗಿದ್ದುದು ನಿಜ, ನಂತರ ಅವರು ಬರಲಿಲ್ಲ; ಅದಕ್ಕೆ ಅವರಿಗೆ ತಮ್ಮವೇ ಆದ ಕಾರಣಗಳಿವೆ. ಆದರೆ ತಾತ್ತ್ವಿಕವಾದ ಭಿನ್ನಾಭಿಪ್ರಾಯ ನಮಗೆ-ಅವರಿಗೆ ಏನೂ ಇಲ್ಲ. ತಾತ್ತ್ವಿಕ ವ್ಯತ್ಯಾಸ ಇದ್ದರೂ ಕೇವಲ ಎರಡು ವಿಷಯಗಳಲ್ಲಿ; ಒಂದು ಗುರು ಪೂಜೆ; ಇನ್ನೊಂದು ವಿವಾಹದಲ್ಲಿ ಅಕ್ಷತೆ ಹಾಕುವ ವಿಷಯದಲ್ಲಿ. ಅವರು ಇವೆರಡೂ ಬೇಡವೆನ್ನುತ್ತಾರೆ; ನಾವು ಇವು ಬೇಕೆ ಬೇಕು ಎನ್ನುತ್ತೇವೆ ಅಷ್ಟೆ. ಕೆಲವರು ಒಂದು ವೇದಿಕೆ ಮೇಲೆ ಕುಳಿತು ಭಾಷಣ ಮಾಡುತ್ತಾರೆ; ಪರಸ್ಪರ ಸಂತೋಷದಿಂದ ನಗುತ್ತಾರೆ. ಆದರೆ ಒಳಗೇ ಇನ್ನೊಬ್ಬರನ್ನು ಕಂಡು ಮತ್ಸರಿಸುತ್ತಾರೆ, ಅಂದರೆ ದೈಹಿಕವಾಗಿ ಅವರುಗಳು

ಒಂದೇ ವೇದಿಕೆಯ ಮೇಲೆ ಬಾದರೂ, ತಾತ್ತ್ವಿಕವಾಗಿ ಭಿನ್ನಹೃದಯದವರಾಗಿರುತ್ತಾರೆ. ಇಂತಹ ಕೃತಕತೆಯನ್ನು ಸಾಮಾನ್ಯ ಜನರು ಮೆಚ್ಚಬಹುದು.

ಆದರೆ ಇಳಕಲ್ ಶ್ರೀಗಳು ಆಗಲಿ ನಾವಾಗಲೀ ಒಂದೇ ವೇದಿಕೆಯ ಮೇಲೆ ಸದ್ಯದಲ್ಲಿ ಕಾಣಿಸಿಕೊಳ್ಳದಿದ್ದರೂ ತಾತ್ತ್ವಿಕ ಹೊಂದಾಣಿಕೆ, ಬಸವ ನಿಷ್ಠೆ ಹೊಂದಿದ್ದೇವೆ. ಸ್ವಾಮೀಜಿಯವರು ಸದುಹೃದಯದವರಾಗಿದ್ದರೂ (ಸದು ಹೃದಯವಿಲ್ಲದವರಿಗೆ ಬಸವ ತತ್ತ್ವವು ಎಂದೂ ಹಿಡಿಸದು) ಕೆಲವರು ಅವರ ಸಮೀಪದವರು ಗುಂಪುಗಾರಿಕೆ ಮಾಡುವ ಪ್ರವೃತ್ತಿ ಹೊಂದಿರುವುದರಿಂದ ದೂರವಿದ್ದರೂ ಸ್ವಾಮೀಜಿಯವರ ಬಗ್ಗೆ ನಮ್ಮ ಅಭಿಮಾನ ಆತ್ಮೀಯತೆ ಉಂಟೇ ಉಂಟು. ಇದು ಧರ್ಮಪಿತ ಬಸವಣ್ಣನವರು ಬೆಳೆಸುವ ದೃಷ್ಟಿಕೋನ. ವೈಯಕ್ತಿಕ ಆತ್ಮೀಯ ಸಂಬಂಧಕ್ಕಿಂತ ತಾತ್ತ್ವಿಕ ಸಂಬಂಧವೇ ಮಿಗಿಲಾದುದು.

ಶಿವಯೋಗ ಮಂದಿರದ ಸಾಧನೆ ಕುರಿತು ತೆಗ್ಗಿನಮಠರು ಬರೆದಿದ್ದಾರೆ, ಆ ದಿಶೆಯಲ್ಲಿ ನಾವು ಸೀಮಿತರಾಗಿ ವಿಚಾರ ಮಾಡುತ್ತೇವೆ ಎಂದು ಅಂದಿರುವುದಲ್ಲದೆ ಈ ಸಂಸ್ಥೆ ಅನೇಕ ಸ್ವಾಮಿಗಳನ್ನು ತಯಾರಿಸಿ, ಬೇರೆ ಬೇರೆ ಮಠಗಳಿಗೆ ಅಧಿಕಾರಿಗಳನ್ನಾಗಿ ಮಾಡಿ ಅವರ ಮೂಲಕ ಅನ್ನದಾನ, ವಿದ್ಯಾದಾನ ಮಾಡುತ್ತಿರುವುದನ್ನು ನಾವು ಗಮನಿಸಿಲ್ಲ ಎಂದಿದ್ದಾರೆ. ನಮ್ಮ ಸಮಸ್ಯೆ ಇದಲ್ಲವೇ ಅಲ್ಲ. ಇಂಥ ಒಳ್ಳೆಯ ಕೆಲಸ ಮಾಡುವ ಅವಕಾಶ ಅದೇಕೆ ಒಂದೇ ಜಾತಿಯಲ್ಲಿ ಹುಟ್ಟಿದವರಿಗೆ ಸೀಮಿತವಾಗಬೇಕು ? ಯಾರದ್ದು ಸೀಮಿತ ವಿಚಾರ ? ಕೇವಲ ಹುಟ್ಟಿನಿಂದ ಅಯ್ಯನವರಿರುವವರಿಗೆ ಸ್ವಾಮಿತ್ವದ ಹಕ್ಕು ಮೀಸಲು ಎನ್ನುವವರದೋ ಅರ್ಹತೆ ಇರುವ ಯಾರಾದರೂ ಆಗಬಹುದು ಎನ್ನುವುದು. Blood is thicker than water ಎಂಬ ಒಂದು ಆಂಗ್ಲ ಮಾತಿನಂತೆ ಇವರೆಲ್ಲರೂ ಜಾತಿ ವಿಷಯಕ್ಕೆ ಬರುತ್ತಲೇ ಉಳಿದೆಲ್ಲ ಆದರ್ಶಗಳಿಗೂ ತಿಲಾಂಜಲಿ ಕೊಡುವರಲ್ಲ ! ಜಾತಿ ಪಿತ್ತ ತಲೆಗೇರಿದವರಿಂದಲೇ ಬಸವ ಧರ್ಮದ ಸಮಾನತಾ ಸಿದ್ಧಾಂತ ಶಿಥಿಲಗೊಂಡಿತು ಎಂಬುದು ವಿಷಾದನೀಯವಾದರೂ ಸತ್ಯ ಸಂಗತಿ. ಪವಿತ್ರ ಹುಟ್ಟು–ಪವಿತ್ರ ಜಾತಿ ಎಂಬ ಪದವೇ ಲಿಂಗವಂತ ಧರ್ಮದ ಮೂಲ ಸಿದ್ಧಾಂತಕ್ಕೆ ಹೊರತು. ಹುಟ್ಟುತ್ತ ಎಲ್ಲರೂ ಭವಿ ಮಾನವರು, ಆಚಾರದಿಂದ ಭಕ್ತ, ಅರಿವಿನಿಂದ ಗುರು, ಅನುಭಾವದಿಂದ ಜಂಗಮ. ಇದನ್ನೊಪ್ಪದ ಶಿವಯೋಗ ಮಂದಿರ ಗುರುತ್ವದ ಹಕ್ಕನ್ನು ಎಲ್ಲರಿಗೂ ಕೊಡದಿದ್ದರೆ ಉಳಿದ ಎಲ್ಲ ಅದರ ಸಾಧನೆಯೂ ಶೂನ್ಯವೆ. ಅದರ ಈ ಮೂಲಭೂತ ಜಾತಿವಾದಕ್ಕೆ ತಡೆಹಾಕಿ ಎಲ್ಲ ಲಿಂಗವಂತರಿಗೂ ಪ್ರವೇಶದ ಹಕ್ಕು ನೀಡುವವರೆಗೂ ನಮ್ಮ ಅಭಿಪ್ರಾಯ ಬದಲಾಗದು.

★ ★

ಸಂಬಂಧಗಳು

—ಮಾತಾಜಿ

ಪ್ರತಿಯೊಬ್ಬ ಮಾನವನೂ ವ್ಯಕ್ತಿಯಾಗಿ ಹುಟ್ಟುವನು, ಹುಟ್ಟಿದ ಮೇಲೆ ಅವನ ಸಂಬಂಧಗಳು ವಿಸ್ತಾರಗೊಳ್ಳುವವು. ಮಗು–ತಾಯಿತಂದೆ, ನಂತರ ಕುಲ, ಜಾತಿ, ಧರ್ಮ, ಸಮಾಜ, ರಾಷ್ಟ್ರ ಹೀಗೆ ಸಂಬಂಧ ವಿಸ್ತಾರಗೊಳ್ಳುವುದು. ಈ ಸಂಬಂಧಗಳು ಎರಡು ಪ್ರಕಾರ, ಒಂದು ವೈಯಕ್ತಿಕ ಆತ್ಮೀಯತೆಯ ಮೇಲೆ, ಇನ್ನೊಂದು ತಾತ್ತ್ವಿಕ ಸಂಬಂಧ. ತಾತ್ತ್ವಿಕ ಸಂಬಂಧವು ನೀತಿ, ರಾಷ್ಟ್ರೀಯತೆ, ಧರ್ಮವಂತಿಕೆ, ತತ್ತ್ವ ಹೀಗೆ ಸಾಗುತ್ತದೆ.

ನೀತಿ : ಇಬ್ಬರು ಪ್ರಿಯ ಮಿತ್ರರಿರುತ್ತಾರೆ. ಅದರಲ್ಲಿ ಒಬ್ಬನು ಅನೀತಿಯ ದಾರಿ ಹಿಡಿದು ಕೆಟ್ಟಕೆಲಸಗಳಲ್ಲಿ ನಿರತನಾಗುತ್ತಾನೆ, ಆಗ ಸಾಚಾ ಮತ್ತು ಒಳ್ಳೆಯವನು ತನ್ನ ಕೆಟ್ಟ ಮಿತ್ರನನ್ನು ಪ್ರೋತ್ಸಾಹಿಸಬೇಕೊ ? ಸಹಿಸಬೇಕೋ ? ಅಥವಾ ತಿದ್ದಬೇಕೊ ? ದೂರವಾಗಬೇಕೋ, ಪ್ರತಿಭಟಿಸಬೇಕೊ ? ಇದೇನನ್ನೂ ಮಾಡದೆ ಕೇವಲ ವೈಯಕ್ತಿಕ ಗೆಳೆತನ–ಪ್ರೀತಿಗಾಗಿ ತನ್ನ ದುಷ್ಟ ಮಿತ್ರನನ್ನು ಆದರಿಸುವವನು ತಾನು ಹೇಗೆ ನೀತಿವಂತನಾಗಬಲ್ಲ ?

ರಾಷ್ಟ್ರೀಯತೆ : ರಾಷ್ಟ್ರಕ್ಕೆ ಕೇಡು ಬಗೆಯುವಲ್ಲಿ ಒಬ್ಬ ನಿರತನಾಗಿದ್ದಾನೆ. ಮಿತ್ರನೋ ರಾಷ್ಟ್ರ ಭಕ್ತನಾಗಿದ್ದಾನೆ. ಆದರೆ ರಾಷ್ಟ್ರದ್ರೋಹ ಮಾಡುವವನನ್ನು ವೈಯಕ್ತಿಕ ಪ್ರೀತಿಗಾಗಿ ಸಹಿಸಿಕೊಂಡವನು ಅದೆಂಥಾ ರಾಷ್ಟ್ರಭಕ್ತ ? !

ಧರ್ಮ-ತತ್ತ್ವ : ಒಂದು ತತ್ತ್ವಕ್ಕೆ, ಧರ್ಮ ಸಂಹಿತೆಗೆ ವ್ಯಕ್ತಿ ಬದ್ಧನಾಗಿರುತ್ತಾನೆ. ಅವನ ಸ್ನೇಹಿತ ಅಥವಾ ಮಿತ್ರ ಆ ತತ್ತ್ವಕ್ಕೆ-ಧರ್ಮ ಸಂಹಿತೆಗೆ ವಿರುದ್ಧವಾಗಿರುತ್ತಾನೆ. ಅವನನ್ನು ವೈಯಕ್ತಿಕ ಗೆಳೆತನಕ್ಕಾಗಿ, ಈತ ಸಹಿಸಿಕೊಂಡರೆ ಇವನೆಂಥಾ ತತ್ತ್ವನಿಷ್ಠ ?

ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದರೇನು
ಲಿಂಗ ಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ
ನಂಟು–ಭಕ್ತಿ ನಾಯಕ ನರಕ
ಕೂಡಲ ಸಂಗಮದೇವಾ ! (ಬ. ಷ. ವ. ೭೧೩)

ಇದೊಂದು ನನ್ನ ಮೇಲಿನ ವಿಚಾರವನ್ನು ಪುಷ್ಟೀಕರಿಸುವ ಅದ್ಭುತ ವಚನ. **ಲಿಂಗ ಸಾಹಿತ್ಯ** ಎಂಬ ಪದವಿದ್ದಲ್ಲಿ, ಬೇರೆ ಬೇರೆ ಪದಗಳನ್ನು ಜೋಡಿಸಿ ನೋಡಿರಿ. ಸುನಿಲ್‌ದತ್–ಸಂಜಯದತ್ ವಿಷಯದಲ್ಲಿ ಹೀಗೆ ಹೇಳಿದರೆ, ಆ ಸ್ಥಳದಲ್ಲಿ ರಾಷ್ಟ್ರ ನಿಷ್ಠೆ

ಇಲ್ಲದವನ ಎನ್ನವರೆನ್ನೆನಯ್ಯಾ ಎಂದರೆ ಆಗ ಸುನಿಲ್‌ದತ್ ಕೇವಲ ಒಬ್ಬ ತಂದೆಯಾಗದೆ ಆದರ್ಶ ರಾಷ್ಟ್ರ ಭಕ್ತರಾಗುತ್ತಾರೆ.

ತಾತ್ತ್ವಿಕ ಸಂಬಂಧ ವ್ಯಕ್ತಿಯನ್ನು ಮೇಲಕ್ಕೆತ್ತಿದರೆ, ವೈಯಕ್ತಿಕ ಪ್ರೀತಿಗಾಗಿ, ವಾತ್ಸಲ್ಯಕ್ಕಾಗಿ ತತ್ತ್ವವನ್ನು ಬಿಡುವುದು ವ್ಯಕ್ತಿಯನ್ನು ಪಾತಾಳಕ್ಕೆ ಇಳಿಸುತ್ತದೆ. ತಾತ್ತ್ವಿಕ ವಿಷಯದಲ್ಲಿ ರಾಜಿ ಮಾಡಿಕೊಳ್ಳಬಾರದೆಂದು ನಾವು ಪದೇಪದೇ ಹೇಳುವುದು, ಬರೆಯುವುದು ಕೆಲವರಿಗೆ ಕಹಿ ಎನ್ನಿಸುತ್ತದೆ. ಆದರೆ ನಮ್ಮ ಮುಂದೆ ಎರಡು ಸ್ಪಷ್ಟ ದಾರಿಗಳಿವೆ.ವೈಯಕ್ತಿಕ ಪ್ರೀತಿ-ವಿಶ್ವಾಸಕ್ಕಾಗಿ-ಎಲ್ಲರ ಮೆಚ್ಚುಗೆಗಾಗಿ ತತ್ತ್ವವನ್ನು ಬಿಡುವುದು ಅಥವಾ ಶಿಥಿಲ ಗೊಳಿಸುವುದು ಇನ್ನೊಂದು ವೈಯಕ್ತಿಕ ಪ್ರೀತಿ–ವಿಶ್ವಾಸ ಬದಿಗಿಟ್ಟು ತಾತ್ತ್ವಿಕ ಸಂಬಂಧ ಇರುವವರನ್ನು ಆದರಿಸುವುದು. ಆಗ ತತ್ತ್ವನಿಷ್ಠೆ ಇರುವ ಶತ್ರುವನ್ನೂ ಪ್ರೀತಿಸಬೇಕಾಗುವುದು, ತತ್ತ್ವನಿಷ್ಠೆಯಿಲ್ಲದ ಮಿತ್ರನನ್ನು ತೊರೆಯಬೇಕಾಗುವುದು, ಇಂಥ ಕಟುತ್ವ ಲೋಕದ ದೃಷ್ಟಿಯಲ್ಲಿ ವಿಚಿತ್ರವಾಗಿ ಕಂಡರೂ ದೇವರ ದೃಷ್ಟಿಯಲ್ಲಿ ಸೂಕ್ತವಾಗಿರುವುದು, ಏಸು, ಮೊಹಮ್ಮದ್, ಬಸವಣ್ಣ, ಬುದ್ಧ ಇವರ ಬದುಕನ್ನು ನೋಡಿದಾಗ ನಮ್ಮ ಮಾತು ಸರಿ ಎನ್ನಿಸುವುದು. ಅವರು ತಾವು ನಂಬಿದ ಸತ್ಯದ ಪ್ರತಿಪಾದನೆಗೆ ಬದ್ಧರಾದರೇ ವಿನಾ, ಲೋಕದ ಜನರ ಮೆಚ್ಚುಗೆಗಾಗಿ ದೌರ್ಬಲ್ಯದ, ಕಳ್ಳದಾರಿ ಹಿಡಿಯಲಿಲ್ಲ.

ಹಿಂದು ಜನರಲ್ಲಿ ಈ ಮೂಲಭೂತ ತತ್ತ್ವದ ಬಗ್ಗೆಯೇ ಸರಿಯಾದ ಕಲ್ಪನೆಯಿಲ್ಲ. ಒಬ್ಬನು ಭಯಂಕರ ರಾಷ್ಟ್ರದ್ರೋಹ ಮಾಡಿರುತ್ತಾನೆ ಎಂದುಕೊಳ್ಳಿರಿ. ಅವನನ್ನು ಪ್ರೀತಿಯಿಂದ ತಮ್ಮ ವೈಯಕ್ತಿಕ ಗೆಳೆತನಕ್ಕಾಗಿ ಮನೆಯಲ್ಲಿ ಮುಚ್ಚಿಟ್ಟುಕೊಂಡರೆ ಅದು ಎಂತಹ ಪಾಪದ ಕೆಲಸ ಎಂಬ ಕಲ್ಪನೆಯಿಲ್ಲ. ಮನ ಸ್ವೇಚ್ಛೆ ಹೊಗಳಿ, ಸನ್ಮಾನ ಮಾಡಿಬಿಟ್ಟರಂತೂ ಮುಗಿದೇ ಹೋಯಿತು ; ಹೊಗಳಿಕೆಗೆ ಮರುಳಾಗದವರಿಲ್ಲ. ಹೇಗೆ ಒಬ್ಬ ನಿಜವಾದ ಸೈನಿಕನು ಶತ್ರುವಿನ ಯಾವುದೇ ಆಮಿಷ, ಗೆಳೆತನ, ಸನ್ಮಾನಕ್ಕೆ ಮರುಳಾಗದೆ ಮನಸ್ಸನ್ನು ಗಟ್ಟಿಗೊಳಿಸಿಕೊಂಡು ದೇಶಕ್ಕಾಗಿ ದುಡಿಯುವನೋ ಹಾಗೆ ನಿಜ ಧರ್ಮವಂತನೂ ತತ್ತ್ವಕ್ಕಾಗಿ, ದೇವ ಮೆಚ್ಚುಗೆಗಾಗಿ ಬದುಕಬೇಕೇ ವಿನಾ ಮಾನವರ ಪ್ರೀತಿ–ಹೊಗಳಿಕೆಗಾಗಿ ಅಲ್ಲ. ಆದನ್ನೇ ಧರ್ಮಪಿತ ಬಸವಣ್ಣನವರು ಹೀಗೆ ದೇವರಲ್ಲಿ ಬೇಡಿಕೊಂಡರು ;

ಧೃತಿಗೆಟ್ಟು ಅನ್ಯರ ಬೇಡದಂತೆ
ಮಂತಿಗೆಟ್ಟು ಅನ್ಯರ ಹೊಗಳದಂತೆ
ಇರಿಸು ಕೂಡಲ ಸಂಗಮದೇವಾ

★ ★

ತಾಯ ಮಾರಿ ತೊತ್ತು ಕೊಂಬಂತೆ

—ಮಾತಾಜಿ

ಯಾವುದೇ ವ್ಯಕ್ತಿ ತಾಯಿಯನ್ನು ಮಾರಿ, ಸೇವಕಿಯನ್ನು ಕೊಳ್ಳುವುದಿಲ್ಲ. ಏಕೆಂದರೆ ತಾಯಿಯು ಬರೀ ತಾಯಿಯು ಅರ್ಥಾತ್ ಪೋಷಕಿ, ಮತ್ತು ಗುರು ಅರ್ಥಾತ್ ಬೋಧಕಿಯ ಕರ್ತವ್ಯವನ್ನಷ್ಟೇ ಮಾಡಳು; ಮಕ್ಕಳಿಗೆ ಕಾಯಿಲೆ ಕಸಾಯಿಲೆ ಆದಾಗ ತೊತ್ತು (ಸೇವಕಿ) ಕೆಲಸವನ್ನು ಸಹ ಮಾಡಬಲ್ಲ ವಾತ್ಸಲ್ಯನಿಧಿ, ತೊತ್ತು ಹಣಕ್ಕಾಗಿ ದುಡಿದರೆ ತಾಯಿ ವಾತ್ಸಲ್ಯದಿಂದ ದುಡಿವಳು. ಇದು ಲೋಕದ ಎಲ್ಲರ ಅನುಭವ.

ಒಮ್ಮೆ ನಾನು ಪ್ರವಾಸ ಕೈಗೊಂಡಿದ್ದೆ. ಓರ್ವ ಶರಣ ಬಂಧುಗಳ ಮನೆಯಲ್ಲಿ ಇಳಿದಿದ್ದೆ, ತುಂಬಾ ವಿಶಾಲವಾದ ಸುಂದರ ಮನೆಯದು. ಅವರ ಮನೆಯೂ ಚಂದ, ಮನಸ್ಸೂ ಚಂದ. ಅಷ್ಟೇ ಪ್ರೀತಿ–ಭಕ್ತಿ–ವಿಶ್ವಾಸದಿಂದ ಆದರಾತಿಥ್ಯ ಮಾಡಿದರು. ಒಂದು ಕೋಣೆಯಲ್ಲಿ ಹೋಗುತ್ತಲೇ ಮೊಟ್ಟ ಮೊದಲು ನಾನು ಮಾಡುವ ಕೆಲಸ ಕಿಟಕಿ ಬಾಗಿಲು ತೆರೆಯುವುದು, ಸರ್ಕಾರಿ ಐ. ಬಿ. ಗಳಿಗೆ ಹೋದರೂ ಅಷ್ಟೆ, ನನಗೆ ಶುದ್ಧ ಗಾಳಿ ಬೇಕು, ಬಹಳ ಸುಂದರವಾದ, ಚಿತ್ತಾಕರ್ಷಕ ಡಿಸೈನಿನ ಕಿಟಕಿಗಳಿದ್ದವು. ಅವು ವಿಶಾಲವಾದ ಪಡಕಗಳಿಂದ ಕೂಡಿದ್ದವು. ತೆಗೆಯಲು ಹೋದರೆ ಬರಲೇ ಇಲ್ಲ. ಅಂತೂ ಬಿಡಲಿಲ್ಲ ಪ್ರಯತ್ನಿಸಿ ತೆಗೆದೆವು. ಅವು ಸರಿಯಾಗಿ ಬಳಕೆಯಾಗುತ್ತಿಲ್ಲ ಎಂದು ಊಹಿಸಿದೆ. ಆಶ್ಚರ್ಯವಾಯಿತು, ನಾನು ಕೋಣೆಯಲ್ಲಿ ಹೋಗುತ್ತಿದ್ದಂತೆಯೇ ಓರ್ವರು ಫ್ಯಾನ್ ಹಾಕೋಣವೇ ಎಂದರು. ಇದು ಗಾಳಿಯ ಕಾಲ, ಇದೇನು ಫ್ಯಾನ್ ಹಾಕೋಣ ಎನ್ನುತ್ತಿದ್ದಾರೆ ಎಂದು, 'ಏನೂ ಬೇಡ, ನನಗೆ ಫ್ಯಾನ್ ಗಾಳಿ ಇಷ್ಟವಾಗದು.' ಎಂದೆ. ನಂತರ ಕಷ್ಟಪಟ್ಟು ಕಿಟಕಿ ತೆಗೆದಾಗ ಆಹ್ಲಾದಕರವಾದ ಗಾಳಿ ಬಂದಿತು. ಆಗ ಈ ಗಾದೆ ನೆನಪಾಯಿತು, 'ತಾಯ ಮಾರಿ ತೊತ್ತ ಕೊಂಬಂತೆ' "ಅಲ್ಲಾ, ದೇವರು ಸೃಷ್ಟಿಸಿರುವ ಆಮ್ಲಜನಕ ಸಹಿತ ಗಾಳಿ ಅದೆಷ್ಟು ಅದ್ಭುತ, ಶ್ವಾಸಕೋಶಕ್ಕೆ ಅತ್ಯಂತ ಪ್ರಿಯ. ಇಂಥ ಗಾಳಿಯನ್ನು ಹೊರಕ್ಕಿಟ್ಟು, ಮನುಷ್ಯ ಕಲ್ಪಿತ ಕೃತಕ ಫ್ಯಾನ್ ಗಾಳಿ ಹಚ್ಚಿಕೊಳ್ಳುವುದು ಎಷ್ಟು ಸೂಕ್ತ ? ಗಾಳಿ ಇಲ್ಲದಾಗ ಬೇಸಿಗೆ ಧಗೆಯಲ್ಲಿ ಫ್ಯಾನ್ ಬೇಕಾದರೆ ಹಚ್ಚಿಕೊಳ್ಳಲಿ. ಹೊರಗೆ ಗಾಳಿಯು ಆಹ್ಲಾದಕರವಾಗಿ ಬೀಸುವಾಗ ಕಿಟಕಿ ಮುಚ್ಚಿ ಫ್ಯಾನ್ ಹಾಕಿಕೊಳ್ಳುವರಲ್ಲ !" ಎಂದು ಅನ್ನಿಸಿತು.

ಹೀಗೇಕೆ ಕಿಟಕಿ–ಬಾಗಿಲು ಇಷ್ಟು ಬಿಗಿಯಾಗಿ ಮುಚ್ಚಿಟ್ಟುಕೊಂಡಿರುವರು ಎಂದು ಕೇಳಿದಾಗ ವಿಷಯ ತಿಳಿಯಿತು. ಸೊಳ್ಳೆ ಬಹಳ, ಆದಕ್ಕೆ ಕಿಟಕಿ ತೆರೆದರೆ ಅವು ಒಳ–

ಬರುತ್ತವೆ. ಆ ಸೊಳ್ಳೆ ಓಡಿಸುವ ಸಲುವಾಗಿ ಮತ್ತು ಸೆಕೆಗಾಗಿ ರಾತ್ರಿ ಇಡೀ ಫ್ಯಾನ್ ಹಾಕೋದು.

"ಇದೇನಮ್ಮಾ... ಎಂಥಾ ಜನರು ನೀವು? ಗಾಳಿಯನ್ನು ಒಳಗೆ ಬಿಡದೆ ಫ್ಯಾನ್ ಹಾಕೋದು ಸರಿಯಲ್ಲ. ಸೊಳ್ಳೆಗಾಗಿ ಸೊಳ್ಳೆ ಪರದೆ ಕಟ್ಟಿಕೊಳ್ಳಬೇಕು. ಕೋಣೆಗಳಲ್ಲಿ ಯಾವಾಗಲೂ ಗಾಳಿ ಮುಕ್ತವಾಗಿ ಸಂಚರಿಸಬೇಕು" ಎಂದೆ.

"ನಮ್ಮ ಮಂಚಗಳಿಗೆ ಸೊಳ್ಳೆಪರದೆ ಕಟ್ಟಲು ಅನುಕೂಲವಿಲ್ಲ" ಎಂದರು. ಸೋಜಿಗವೆನಿಸಿತು. ನಮ್ಮ ಅಗತ್ಯಕ್ಕೆ ತಕ್ಕಂತೆ ಸೊಳ್ಳೆ ಪರದೆಗೆ ಬೇಕಾದ ಪಟ್ಟಿ ಮಾಡಿಸಿಕೊಳ್ಳಬೇಕು. ಜನರಿಗೆ ಇಂಥ ವಿಷಯದಲ್ಲಿ ಸಾಮಾನ್ಯ ತಿಳುವಳಿಕೆಯೂ ಇಲ್ಲ, ಕಳೆದ ತಿಂಗಳು ಒಂದು ಊರಿಗೆ ಹೋದಾಗಲೂ ಇದೇ ತರಹ ಆ ಮನೆಯವರಿಗೂ ಹೇಳಿದ್ದಾಯಿತು. ಈ ತಿಂಗಳು ಹೋದಾಗಲೂ ಇದೇ ತರಹ ಹೇಳುವುದಾಯಿತು. ಪಾಪ, ಕಿಟಕಿ ಇಲ್ಲದ ಸಣ್ಣಸಣ್ಣ ಮನೆಗಳಲ್ಲಿ ಅನಿವಾರ್ಯವಾಗಿ ವಾಸಿಸುವವರ ಬವಣೆ ಏನೋ ಇರಲಿ, ಇಷ್ಟು ದೊಡ್ಡಮನೆ ಕಟ್ಟಿಕೊಂಡೂ, ಚಂದಚಂದವಾದ ಕಿಟಕಿ, ಶೋಗಾಗಿ ಇಟ್ಟೂ ಈ ರೀತಿ ಮಾಡುವವರನ್ನು ಕಂಡು ಆಶ್ಚರ್ಯವಾಗುತ್ತದೆ. ಅವರ ಅಜ್ಞಾನಕ್ಕೆ ಮರುಕವೆನ್ನಿಸುತ್ತದೆ. ಗಾಳಿಯು ಅತ್ಯಂತ ಅಗತ್ಯವಾದ ವಸ್ತು. ಶುದ್ಧ ಹವೆಯನ್ನು ಕುಡಿದಷ್ಟೂ ಶ್ವಾಸಕೋಶಗಳು ಶುದ್ಧವೂ, ಹಗುರವೂ ಎನಿಸುತ್ತವೆ.

ಪಾಶ್ಚಾತ್ಯರ ಅನುಕರಣೆ

ಸೊಳ್ಳೆಪರದೆ ಕಟ್ಟಲು ಬರದ ಮಂಚಗಳನ್ನು ಸುಂದರವಾಗಿ ಮಾಡಿಸಿ ಇಟ್ಟುಕೊಳ್ಳುವುದು ಕಾಣುತ್ತೇವೆ. ಇಂಗ್ಲೆಂಡ್-ಅಮೇರಿಕಾ-ಕೆನಡಾಗಳಲ್ಲಿ ಸಂಚರಿಸಿದಾಗ ಇದೇ ತರಹ ಅಲ್ಲಿದ್ದವು. ರಾತ್ರಿ ಸೊಳ್ಳೆ ಬಂದರೆ ಹೇಗಪ್ಪಾ ಎಂದು ಆತಂಕವೆನಿಸಿತ್ತು. ಆದರೆ ಆ ಶೀತದೇಶಗಳಲ್ಲಿ ಸೊಳ್ಳೆಗಳು ಬದುಕುವುದಿಲ್ಲ; ನೊಣ, ಸೊಳ್ಳೆ ಇರಲೇ ಇಲ್ಲ. ನಮ್ಮದು ಉಷ್ಣದೇಶ. ಇಲ್ಲಿ ಬಗೆಬಗೆಯಾದ ಕ್ರಿಮಿಕೀಟಗಳು. ಹೀಗಿರುವಾಗ ನಮ್ಮ ಪರಿಸರಕ್ಕೆ ತಕ್ಕಂತೆ ನಾವು ಸಾಮಗ್ರಿಗಳನ್ನು ಜೋಡಿಸಬೇಕು.

ಕಾಯಿಲ್ಸ್

ಕಳೆದ ವರ್ಷ ಓರ್ವ ಶ್ರೀಮಂತ ಭಕ್ತರ ಮನೆಯಲ್ಲೂ ಇದೇ ಸನ್ನಿವೇಶ. ಅವರೂ ಗಾಳಿ ಬರದಂತೆ ಕಿಟಕಿ ಮುಚ್ಚಿಟ್ಟವರು. ಜೊತೆಗೆ ಒಳಗೆ ಫ್ಯಾನ್ ಹಾಕಿ, ಮಸ್ಕಿಟೋ ಕಾಯಿಲ್ ರಾತ್ರಿ ಇಡೀ ಉರಿಸುವವರು. ಅವರ ಮನೆಯವರಿಗೆ ಉಸಿರಾಟದ ತೊಂದರೆಯಿದ್ದು ಒಂದು ಶ್ವಾಸಕೋಶವೇ ಕೆಲಸ ಮಾಡದಂತಾಗಿತ್ತು. ಏಕೆ ಈ ಜನ ವಿಚಾರ ಮಾಡುವುದಿಲ್ಲವೊ? ಒಂದು ಸೊಳ್ಳೆ–ಅದೂ ಜೀವವೆ, ಗಾಳಿ ಕುಡಿದು ಬದುಕುವ ಕೀಟ; ಅದಕ್ಕೆ ಮಸ್ಕಿಟೋ ಕಾಯಿಲ್‌ದಿಂದ ತೊಂದರೆಯಾಗಿ ಓಡಿಹೋಗುತ್ತದಾದರೆ, ಆ ಕಾಯಿಲ್ ಹೊಗೆಯು ಮಾನವನಿಗೂ ಉಪದ್ರವಕಾರಿ ಇರಲೇಬೇಕು ಎಂದು

ಹೇಗೆ ಊಹಿಸುವುದಿಲ್ಲವೊ? ಶುದ್ಧಗಾಳಿ ಬರುವ ಕಿಟಕಿ ಮುಚ್ಚಿ, ಫ್ಯಾನ್ ಹಾಕಿಕೊಳ್ಳುವುದು 'ತಾಯ ಮಾರಿ ತೊತ್ತ ಕೊಂಬಂತೆ'. ಆದರೆ ಫ್ಯಾನ್ ಹಾಕಿಕೊಂಡು ಮಸ್ಕಿಟೋ ಕಾಯಿಲ್ ಹೊಗೆ ಉರಿಸುವುದು "ತಾಯ ಮಾರಿ ರಾಕ್ಷಸಿ (ಮಾರಿ) ಯ ಕೊಂಬಂತೆ" ಎಂದು ಅನ್ನಬಹುದು. ಒಬ್ಬ ವ್ಯಕ್ತಿ ಒಂದು ಸೊಳ್ಳೆಯ ಪರದೆ ಕೊಂಡರೆ ನೂರು ರೂಪಾಯಿ ಖರ್ಚಾದರೂ ಅದು ಹತ್ತಾರು ವರ್ಷ ಬಾಳಿಕೆ ಬರುವುದು. ಅದರ ಬದಲು ಫ್ಯಾನ್ ಹಚ್ಚಿ, ಕಾಯಿಲ್ ನಿರಂತರವಾಗಿ ಸುಡುವುದರಿಂದ ಇನ್ನೂ ಹೆಚ್ಚು ಖರ್ಚು ಬರುತ್ತದೆ. ಆರೋಗ್ಯಕ್ಕೂ ಹಾನಿಕರ. ಶುದ್ಧವಾದ ಗಾಳಿಯನ್ನು ಉಸಿರಾಡುವ ಬಗ್ಗೆ ಮನುಷ್ಯ ತೀವ್ರಗಮನ ಕೊಡಬೇಕು.

ಸ್ಫುರಣ

ಚಂದವಾದ ವಿಶಾಲವಾದ ಕಿಟಕಿ–ಬಾಗಿಲು ಇಟ್ಟು, ಮನೆಯ ಶೋವನ್ನು ಚಂದ ಮಾಡಿ, ತಾವು ಆ ಕಿಟಕಿ ತೆರೆಯದೆ ದೂಷಿತವಾದ ಗಾಳಿಯನ್ನು ಕುಡಿಯುವ ಜನರಂತಿದ್ದಾರೆ, ಇಂದಿನ ಬಹು ಪಾಲು ಲಿಂಗವಂತರು. ವಚನಗಳು ಎಂಬ ಕಿಟಕಿಗಳು ಲಿಂಗಾಯತ ಧರ್ಮದ ಭವನಕ್ಕೆ ಇವೆ. ಇವನ್ನು ಪುಂಖಾನುಪುಂಖವಾಗಿ ಉದಾಹರಿಸುವರು, ರಾಗಬದ್ಧವಾಗಿ ಹಾಡುವರು. ವಚನ ಸಾಹಿತ್ಯ ಎಷ್ಟು ಚಂದಾಗಿದೆ, ಕ್ರಾಂತಿಕಾರಿಯಾಗಿದೆ ಎಂದು ಕೊಚ್ಚಿಕೊಳ್ಳುವರು. ಆದರೆ ಈ ಕಿಟಕಿಗಳನ್ನು ತೆರೆದು ಸದ್ಧರ್ಮದ ಗಾಳಿಯನ್ನು ಮಾತ್ರ ಕುಡಿಯದೆ ಮೂಢಶ್ರದ್ಧೆಯ ದಗೆಯಲ್ಲಿ ಬಳಲುತ್ತಾ ಪೌರಾಣಿಕ ಧರ್ಮ ಎಂಬ ಫ್ಯಾನನ್ನು ಹಚ್ಚಿಕೊಳ್ಳುವರು. ★

ಶಿರಗುಪ್ಪಾದಲ್ಲಿ ವಿಶ್ವಧರ್ಮ ಪ್ರವಚನ ಮುಕ್ತಾಯ

ಬಳ್ಳಾರಿ ಜಿಲ್ಲೆಯ ಶಿರಗುಪ್ಪಾದಲ್ಲಿ **ಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಲಿಂಗಾನಂದ ಸ್ವಾಮಿಗಳ** ಪ್ರವಚನವು ಅಪೂರ್ವ ಯಶಸ್ಸನ್ನು ಕಂಡಿತು. ದಿನಾಂಕ 4–7–1994 ರಂದು ಆರಂಭವಾದ ಪ್ರವಚನವು 24–8–94 ರಂದು ಮಂಗಲಗೊಂಡಿತು. ವ್ಯಾಯಾಮ ಶಾಲಾ ಮೈದಾನದಲ್ಲಿ ಆರಂಭವಾದ ಪ್ರವಚನವು ಕಡೆಯ ಮೂರು ದಿನ ಊರ ಹೊರಗಿನ ಪದವಿ ಪೂರ್ವ ಕಾಲೇಜ್ ಮೈದಾನಕ್ಕೆ ಸ್ಥಳಾಂತರಗೊಂಡಿತು. ಅತ್ಯಧಿಕ ಸಂಖ್ಯೆಯಲ್ಲಿ ಕಿಕ್ಕಿರಿದು ಸೇರಿ ಪ್ರವಚನವನ್ನು ಕೇಳಿ ಆನಂದಿಸಿದರು. ಸುತ್ತಲಿನ ಹಳ್ಳಿಗಳಿಂದಲೂ ಜನ ಆಗಮಿಸುತ್ತಿದ್ದರು. ಪೂಜ್ಯ ಗುರುಗಳ ವಾಣಿ ಅಭೂತಪೂರ್ವ ಪರಿಣಾಮ ಬೀರಿ, ಎಲ್ಲಿ ನೋಡಿದರೂ ಪ್ರವಚನದ ಸುದ್ದಿಯೇ ಹರಿದಾಡುತ್ತಿತ್ತು. ಮುಕ್ತಾಯದ ನಿಮಿತ್ತ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು ಬಂದಾಗಲಂತೂ ಜನರ ಉತ್ಸಾಹ ಹೇಳತೀರದಷ್ಟು. ಭವ್ಯ ಕಮಾನು ಕಟ್ಟಿ, ಬ್ಯಾನರ್ ಕಟ್ಟಿ ಪೂಜ್ಯರಿಗೆ ಸ್ವಾಗತ ಬಯಸಿದರು. ಎಲ್ಲ ಜಾತಿ ಮತ ಪಂಥಗಳವರು ಅತ್ಯಂತ ಸಾಮರಸ್ಯದಿಂದ ಬದುಕುವ ಸಿರಗುಪ್ಪ ಪರಿಸರ ನೋಡಿ ಪೂಜ್ಯ ಮಾತಾಜಿಯವರು ಪ್ರಶಂಸಿಸಿದರು. "ಇದೊಂದು ಪುಟ್ಟ ಭಾರತದಂತಿದೆ, ಭಾರತದಲ್ಲಿ ಹಲವಾರು ಜಾತಿ ಧರ್ಮಗಳು, ಭಾಷೆಗಳವರು ಇದ್ದು ಸಾಮರಸ್ಯದಿಂದ ಹೇಗೆ ಇರಬೇಕೆಂದು ತೋರಿಸುವ ಮಾದರಿಯಂತೆ ಸಿರಗುಪ್ಪ ಇದೆ" ಎಂದು ಕೊಂಡಾಡಿದರು. ಸಿರಗುಪ್ಪಾ ಜನರು ಹೃತ್ಪೂರ್ವಕವಾಗಿ ಪ್ರವಚನ ಕೇಳಿ ತನು–ಮನ–ಧನದಿಂದ ನೆರವು ನೀಡಿದರು.

ಬಸವ ಧರ್ಮ ಪೀಠದ ಅಭಿವೃದ್ಧಿಗಾಗಿ ದೇಣಿಗೆ ನೀಡಿದ ದಾಸೋಹಿಗಳು

(1994 ಜೂನ್ ಸಂಚಿಕೆಯಿಂದ ಮುಂದುವರಿದುದು)

– ಕಟ್ಟಡ ನಿಧಿಗೆ –

ಶರಣರುಗಳಾದ :

೧.	ಶ್ರೀ ಶರಣ ಬಸವೇಶ್ವರ ಟ್ರೇಡಿಂಗ್ ಕಂಪೆನಿ, ಶಿರಗುಪ್ಪ	7001–00
೨.	ಬೀರಳ್ಳಿ ರಾಮರೆಡ್ಡಿ, ಶಿರಗುಪ್ಪ	5001–00
೩.	ಕೆ. ಚನ್ನಯ್ಯ ಮತ್ತು ಸೋದರರು, ಶಿರಗುಪ್ಪ	5001–00
೪.	ಎಸ್. ಯಲ್ಲಯ್ಯ, ಶಿರಗುಪ್ಪ	5001–00
೫.	ಆರ್. ಯಲ್ಲಪ್ಪ, ಶಿರಗುಪ್ಪ	5001–00
೬.	ಆರ್. ವೀರಭದ್ರ ಗೌಡ, ರಾರಾವಿ	5001–00
೭.	ದೇವಾನಂದ ಮಹಾರುದ್ರಪ್ಪ ಬಾಡಗಿ, ಮುಧೋಳ	5001–00
೮.	ಎಂ. ಐ. ಮುನವಳ್ಳಿ, ಮೀರಜ್	3000–00
೯.	ಶ್ರೀ ಬಸವೇಶ್ವರ ಕೋ ಆಪರೇಟಿವ್ ಬ್ಯಾಂಕ್, ಬೆಳಗಾಂವ	2500–00
೧೦.	ಚನ್ನಬಸಪ್ಪ ಚನ್ನಪ್ಪ ಆದಿ, ರಾಯಚೂರು.	1001–00
೧೧.	ಬಿ. ಎಸ್. ರುದ್ರಪ್ಪ. ಬಿದರೆ, ಶಿವಮೊಗ್ಗ	1001–00
೧೨.	ಶ್ರೀ ಶರಣ ಬಸವೇಶ್ವರ ಟ್ರೇಡಿಂಗ್ ಕಂಪೆನಿ, ಶಿರಗುಪ್ಪ	1001–00
೧೩.	ಶಿವಬಾಯಿ ತಳವಾರ (ಕೇಸರಿ) ಬಾದಾಮಿ	1001–00
೧೪.	ಡಿ. ಪುರಂದರದಾಸ, ಶಿರಗುಪ್ಪ	1001–00
೧೫.	ಎಂ. ನರಸಿಂಹರೆಡ್ಡಿ, ಶಿರಗುಪ್ಪ	1001–00
೧೬.	ಕೆ. ಮಣಿ, ಶಿರಗುಪ್ಪ	1001–00

ಧರ್ಮಗ್ರಂಥ ನಿಧಿಗಾಗಿ

೧. ಶರಣ. ನಾಗರಾಜು ಮತ್ತು ಸರೋಜಮ್ಮ, ಮೈಸೂರು, ಡಿ.ಟಿ.ಪಿ. ಯಂತ್ರವನ್ನು ಕೊಳ್ಳಲು 20,000 ದೇಣಿಗೆ ನೀಡಿದ್ದಾರೆ.

೨. ಶರಣ. ಎನ್. ಪುಟ್ಟರುದ್ರಪ್ಪ ಅವರ ಮಾತಾಪಿತೃಗಳಾದ ಲಿಂ॥ ಚನ್ನವೀರಮ್ಮ ಮತ್ತು ಲಿಂ॥ ಪಂಡಿತ ನಂಜುಂಡಪ್ಪನವರ ಸ್ಮರಣಾರ್ಥ 5001–00 ರೂ ನೀಡಿದ್ದಾರೆ.

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯರ ಪ್ರವಚನದಲ್ಲಿ

ಹೈದರಾಬಾದ್ ನಗರದಿಂದ ಬಸವ ಧರ್ಮ ಪೀಠಕ್ಕೆ ಬಂದಿರುವ ಧನ ದಾಸೋಹ

ಕಟ್ಟಡ ನಿಧಿಗೆ

ಶರಣರುಗಳಾದ :

೧.	ಸುಭಾಷ್ ಅಣ್ಣೆಪ್ಪ ಪಾಟೀಲ, ಹೈದರಾಬಾದ [ಲಿಂ॥ ತಂದೆ ಅಣ್ಣೆಪ್ಪ ಪಾಟೀಲ, ಸ್ಮರಣಾರ್ಥ ಒಂದು ಕೋಣೆ]	50001–00
೨.	ತೇಜಮ್ಮ ಮತ್ತು ನಾಗಶೆಟ್ಟಿ ಹೆಗ್ಗೆ, ಜಿಯಾಗುಡ [ಪ್ಲಾಟುಗಳನ್ನು ದಾನ ಮಾಡಿದ್ದು ಆ ಹಣವನ್ನು ಕೋಣೆ–ಕಟ್ಟಿಸಲು ಬಳಸಬೇಕು]	
೩.	ಭಾರತೀಬಾಯಿ ಮಲ್ಲಿಕಾರ್ಜುನ ಮಾಶೆಟ್ಟಿ.	10001–00
೪.	ಶಾಲಿನಿ ಧನರಾಜ ಜೀರಗೆ.	5001–00
೫.	ಬಾಬುರಾವ ಸಿರಸಿ	5001–00
೬.	ವಿಜಯಕುಮಾರ್ ಪಾಟ್ನೆ	5111–00
೭.	ಬಿ. ಶಿವಾ	5011–00
೮.	ಸುರೇಶ್ ಕೋರೆ	5001–00
೯.	ಶ್ರೀ ಬಸವೇಶ್ವರ ಸೇವಾ ಸಂಘ	5001–00
೧೦.	ಕಾಶೀನಾಥ ಪಾಟೀಲ್. ವನಸ್ಥಲೀಪುರಂ	3001–00
೧೧.	ಶರಣಪ್ಪ ಭಾಲ್ಕಿ	1001–00
೧೨.	ಸಂಗಮ್ಮ ಗಣಪತಪ್ಪ ಬಾಚೆ	1001–00
೧೩.	ಕಲ್ಲಪ್ಪ ರಾಜಾಪುರೆ (ಪುಸ್ತಕ ಪ್ರಿಂಟಿಂಗ್‌ಗಾಗಿ)	6001–00
೧೪.	ಸುಶೀಲಾಬಾಯಿ ಮಾದಪ್ಪ ಭಾವುಗೆ (ಪುಸ್ತಕ ಪ್ರಿಂಟಿಂಗ್‌ಗಾಗಿ)	4001–00

ಧರ್ಮಗ್ರಂಥ ನಿಧಿಗಾಗಿ 1001—00 ರೂ. ಕೊಟ್ಟ ದಾಸೋಹಿಗಳು

ಶರಣರುಗಳಾದ :

ಕ್ರ. ಸಂಖ್ಯೆ	ಹೆಸರು	ಊರು
543.	ಸಂಗಪ್ಪ ರಾಜಮನಿ	ಹುನಗುಂದ
544.	ಸುಮಂಗಲಾ ಬಿ. ಪಿ. ಬಸವನಗೌಡ,	ಬಂಡೂರು
545.	ಪಿ. ಸೋಮಶೇಖರಪ್ಪ,	ರಾಯಚೂರು

546,	ಮಲ್ಲಪ್ಪ ಪುಲಾರಿ,	ರಾಯಚೂರು
547,	ಶಿವಶಂಕರರಾಯ ನಾಡಗೌಡರು	„
548,	ತಾಯಣ್ಣ, ಕೆ.ಇ.ಬಿ.	„
549,	ಹೆಚ್. ಶಿವರಾಜ ಪಾಟೀಲ	„
550,	ಮಲ್ಲಾಪುರದ ಬಸವರಾಜಪ್ಪ	„
551.	ಎನ್. ಪುಟ್ಟರುದ್ರಪ್ಪ,	ಬೆಂಗಳೂರು
552,	ಸರೋಜಾ ನಾಗರಾಜು,	ಮೈಸೂರು
553.	ಬಿ. ಮಡಿವಾಳಪ್ಪ,	ಶಿರಗುಪ್ಪ
554.	ಕೆ. ಭೀಮೇಶ,	„
555,	ವಿ. ಉಮಾದೇವಿ,	„
556,	ಆರ್. ಶಿವಶಂಕರರಾವ್	„
557,	ಬಿ. ಬಸಪ್ಪ	„
558,	ಬಿ. ಎಸ್. ದೊಡ್ಡಮನಿ	
559.	ಪಿ. ಚಂದ್ರಮೌಳಿ,	ಬಾಗವಾಡಿ
560.	ಶ್ರೀ ಶರಣ ಬಸವೇಶ್ವರ ಟ್ರೇಡಿಂಗ್ ಕಂಪೆನಿ	
561.	ಚಂದ್ರಮೌಳಿ ಬಿ. ಪಾಟೀಲ,	ರಾಯಚೂರು
562.	ಭಾರತಿಬಾಯಿ ವೀರಶೆಟ್ಟಿ ಟೇಲರ್,	ಹೈದರಾಬಾದ
563.	ಧನರಾಜ ಗಣಪತಿ ಬಡಿಗೇರ, ರಾಜಪ್ಪ	ಗೌಡಗಾಂವ

ಬಸವ ಧರ್ಮ ಪೀಠದ ದಾಸೋಹ ಕಾರ್ಯಕ್ಕೆ 1111-00 ರೂ. ಕೊಟ್ಟ ದಾಸೋಹಿಗಳು

ಶರಣರುಗಳಾದ :

ಕ್ರ.ಸಂಖ್ಯೆ	ಹೆಸರು	ಊರು
1639.	ಎಸ್. ಎನ್. ಚಂದ್ರಣ್ಣ	ಚಿತ್ರದುರ್ಗ
1640.	ಸಿದ್ಧರಾಮಪ್ಪ ಗುರುಪಾದಪ್ಪ ಲಖಮಣ	ಗುಲಬರ್ಗ
1641.	ಚನ್ನವೀರಪ್ಪ ಎಡೆಯಾಪುರ,	ರಾಣೇಬೆನ್ನೂರು
1642.	ಹಳ್ಳಳ್ಳಿ ವೀರಪ್ಪ	ದಾವಣಗೆರೆ
1643.	ಎಸ್. ಡಿ. ಗೋಕಾವಿ,	ಮುಂಬಯಿ
1644.	ಎ. ಬಿ. ಅಮಾಸಿ, ಕನಕವಲೆ	ಮಹಾರಾಷ್ಟ್ರ
1645.	ಶಿವರಾಜಮ್ಮ ಗೂಳಿ ಬಸಪ್ಪ,	ಬೀಚಗಾನಹಳ್ಳಿ

1646.	ಪುಟ್ಟಮ್ಮ ಗೂಳಿ ವೀರಪ್ಪ ಮತ್ತು ಮಕ್ಕಳು	ಬೀಚಗಾನಹಳ್ಳಿ
1647.	ಎಸ್. ಆರ್. ವಿಜಯಪ್ರಕಾಶ	ಬಾಗೇಪಲ್ಲಿ
1648.	ಎಚ್. ಎನ್. ಚಿಕ್ಕಣ್ಣ	ಹಳೇಪಲ್ಲಿ
1649.	ಗೂಳಿ ಬಸಪ್ಪ ಮತ್ತು ಶಿವರಾಜಪ್ಪ	ಗುಡಿಬಂಡೆ
1650.	ನಂಜುಂಡಪ್ಪ	ಚಿಕ್ಕಬಳ್ಳಾಪುರ
1651.	ಹೆಚ್. ಸಿ. ನಂಜುಂಡಯ್ಯ ಮತ್ತು ಬಸಮ್ಮ,	ಹಳೇಹಳ್ಳಿ
1652.	ಬಿ. ಎಂ. ಮಲ್ಲಪ್ಪ,	ಬ್ಯಾಲೇನಹಳ್ಳಿ
1653.	ವಿಶ್ವನಾಥ ನೀಲಕಂಠಪ್ಪ ಗಂಜರಿ,	ಬಿಜಾಪುರ
1654.	ಶಿವಪುತ್ರಪ್ಪ ದುಂಡಪ್ಪ ಕೋಳೆ	ಇಚಲಕರಂಜಿ
1655.	ಕೆ. ವೀರಭದ್ರಗೌಡ	ರಾರಾವಿ
1656.	ಉಮಾದೇವಿ	ಶಿರಗುಪ್ಪ
1657.	ಸುಶೀಲಮ್ಮ ಮಠರೆಪ್ಪ	„
1658.	ಆರ್. ಶಿವಶಂಕರರಾವ	„
1659.	ಮಂದವಾಗಲಿ ತಿಪ್ಪಯ್ಯಶೆಟ್ಟರು	„
1660.	ಕೇಶವರೆಡ್ಡಿ	„
1661.	ಎಸ್. ಯಲ್ಲಯ್ಯ	„
1662.	ಲಕ್ಷ್ಮೀದೇವಿ ಮಾಣಿಕ್ಯಯ್ಯ	„
1663.	ಮೋಹನಲಾಲ ಪಾಟೀಲ	„
1664.	ವಿ. ಜಂಬನಗೌಡ ಮಹಾಲಿಂಗನಗೌಡ	ಇಬ್ರಾಹಿಂಪುರ
1665.	ಜಿ. ಅನ್ನದಾನಯ್ಯ ಸ್ವಾಮಿ	ಶಿರಗುಪ್ಪ
1666.	ಹನುಮೇಶ ಭೀಮಣ್ಣ ಕಂಪ್ಲಿ	„
1667.	ಬಿ. ಬಸಪ್ಪ	„
1668.	ಮರಿಬಸವನಗೌಡ ವಿರುಪಾಕ್ಷಪ್ಪ	„
1669.	ಆರ್. ಯಲ್ಲಪ್ಪ	„
1670.	ಆರ್ಲಗಡ ಪಾಂಡುರಂಗಶೆಟ್ಟಿ	„
1671.	ಟಿ. ಎಂ. ಚಂದ್ರಶೇಖರಯ್ಯ	„
1672.	ಎನ್. ಜಿ. ಬಸವರಾಜಪ್ಪ	„
1673.	ಜಯಮ್ಮ. ಎಸ್. ಅಯ್ಯಪ್ಪ	„
1674.	ಎಚ್. ನಾಗಪ್ಪ	„
1675.	ಎಮ್. ಶೇಷಯ್ಯಶೆಟ್ಟಿ	„

1676.	ಬಿ. ಜಿ. ರಾಮರೆಡ್ಡಿ	ಶಿರಗುಪ್ಪಾ
1677.	ಎಸ್. ಸತ್ಯನಾರಾಯಣಶೆಟ್ಟಿ	"
1678.	ಬಿ. ಮಡಿವಾಳಪ್ಪ ವಿನಾಯಕಗನ್ನಿ	"
1679.	ಎಂ. ಗೋಪಾಲರಾವ	"
1680.	ಕೆ. ಚನ್ನಯ್ಯ ಆ್ಯಂಡ ಬ್ರದರ್ಸ್	"
1681.	ಜಿ. ರಂಗರಾವ	"
1682.	ಮಲ್ಲಮ್ಮಾ ವಿಶ್ವನಾಥ ಅಂಕದ	"
1683.	ನಾಗರೆಡ್ಡಿ ನಾಗರಹಾಳ	"
1684.	ಬಿ. ಬಾಲಸುಬ್ಬಯ್ಯ	"
1685.	ಪತಂಗೆ, ಶ್ರೀನಿವಾಸರಾವ್	"
1686.	ಮಾಕಮ್ ಗೋಪಾಲರಾವ	"
1687.	ಎಸ್. ಸತ್ಯನಾರಾಯಣಶೆಟ್ಟಿ	"
1688.	ವ್ಹಿ. ಭೀಮರೆಡ್ಡಿ ಸಿ.ಪಿ.ಐ.	ಮಲ್ಲಾಪೂರ
1689.	K. M. ಮೃತ್ಯುಂಜಯ (ಕಲ್ಲುಮಠ)	ಶಿರಗುಪ್ಪಾ
1690.	ಶ್ರೀ ಮಲ್ಲಿಕಾರ್ಜುನ ಟ್ರೇಡರ್ಸ್	"
1691.	ಶ್ರೀ ಹನುಮೇಶ ಶೆಟ್ಟಿ ಅಚ್ಚೊಳ್ಳಿ	"
1692.	ಆರ್. ಎನ್. ಭೈರಪ್ಪ, ಪಿ.ಎಸ್.ಐ.	ನೀರಗುಂದ
1693.	ಜೆ. ಮುಕ್ಕಣ್ಣ, ಪೋಸ್ಟಮಾಸ್ತರ	ಶಿರಗುಪ್ಪಾ
1694.	ಮೆಸರ್ಸ್ ಬಾಲಾಜಿ ರೈಸಮಿಲ್	"
1695.	ಜಿ. ರಾಚಪ್ಪ	"
1696.	ಬಿ. ಮುತ್ಯಾಲ ಶೆಟ್ಟರು	"
1697.	ಪ್ರಶಾಂತ ಗುರುಪಾದಪ್ಪ ಕುದುರೆ	ಸೊಲ್ಲಾಪುರ
1698.	ಲಕ್ಷ್ಮೀಬಾಯಿ ಅಡಿವೆಯ್ಯಾಸ್ವಾಮಿ,	ಹೈದರಾಬಾದ
1699.	ಸರಸ್ವತಿ ಧೂಳಪ್ಪ ಟೊಣ್ಣೆ	"
1700.	ಭಾರತೀಬಾಯಿ	"
1701.	ಧನರಾಜ್ ಗಣಪತಿ ಬಡಿಗರ	"
1702.	ನಾಗನಾಥ ಶ್ಯಾಮರಾವ ಪಾಟೀಲ	"
1703.	ಮಲ್ಲಮ್ಮ ವೈಜನಾಥ ತೆರನಳ್ಳಿ	"
1704.	ತೇಜಮ್ಮ ಹೊನ್ನಪ್ಪ ಬಜೋಳಗೇಕರ್,	ಶಿವರಾಮಪಳ್ಳಿ
1705.	ಸುಮಿತ್ರಾಬಾಯಿ ಕಾಶಪ್ಪ ಬಜೋಳಗೇಕರ್,	"

1706.	ಚಂದ್ರಕಲಾ ಬಸವರಾಜ ಗುಳಶೆಟ್ಟಿ,	ಹೈದರಾಬಾದ
1707.	ಸುಭಾಷ್ ಶಾಂತಲಿಂಗಪ್ಪ ಪಾಟೀಲ,	"
1708.	ಭಾಗೀರಥಿಬಾಯಿ ಅಮೃತರಾವ ಚಿಕ್ಮುಟೆ,	"
1709.	ನಿರ್ಮಲಾ ಮನೋಜಕುಮಾರ್ ನೀಲಾ,	"
1710.	ಗುಂಡಮ್ಮ ಕಾಶೀನಾಥ ಹೀರೋಡೆ	ಹೈದರಾಬಾದ
1711.	ನೀಲಮ್ಮ ಬಸಪ್ಪ ಮುರಜೋಡೆ	"
1712.	ರಾಷ್ಟ್ರೀಯ ಬಸವ ದಳ, ಜಿಯಾಗಡ	"
1713.	ಪಿ. ವೀಣಾಕುಮಾರಿ ತಂದೆ ರಾಮಚಂದ್ರ	"
1714.	ಬಾಬೂರಾವ ಪಾಟೀಲ	"
1715.	ಸುಶೀಲಾಬಾಯಿ ಕಾಶಪ್ಪ ಹೊಕ್ರಾಣಿ	"
1716.	ನಾಗರಾಜ ನಿಜಲಿಂಗಪ್ಪ ಶೀಲವಂತ	"
1717.	ಬಸವರಾಜ ಬಂಡೆಯ್ಯ ಸ್ವಾಮಿ	"
1718.	ತೀರ್ಥಯ್ಯ ಸ್ವಾಮಿ, ತಲವಾಡ	"
1719.	ಬಿ. ಶಿವರಾಜ್ ಬಿರಾದಾರ	"

[ಮುಂದುವರಿಯುವುದು]

ಸ್ಥಳಾಭಾವಕ್ಕಾಗಿ 501 ರೂ. ಮತ್ತು ಕೆಳಗೆ ಕೊಟ್ಟವರ ಪಟ್ಟಿ ಪ್ರಕಟಿಸಿಲ್ಲ.

ಈ ಎಲ್ಲ ದಾಸೋಹಿಗಳಿಗೆ ಸೃಷ್ಟಿಕರ್ತನು ಮತ್ತು ವಿಶ್ವಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಕೊಡಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೂಡಲ ಸಂಗಮ.

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಶರಣ ಮೇಳ ಪ್ರಚಾರ ಪ್ರವಾಸ

ಶರಣ ಬಂಧುಗಳೇ,

ಬಸವ ಧರ್ಮೀಯರ ವಾರ್ಷಿಕ ಮಹಾಗಣ ಸಮಾವೇಶವಾದ ಎಂಟನೆಯ ಶರಣ ಮೇಳವು ಧಾವಿಸಿ ಬರುತ್ತಿದೆಯಷ್ಟೆ. ಇದರ ಪ್ರಚಾರಾರ್ಥ ಅಂದರೆ ಇದರ ಮಹತ್ವವನ್ನು ತಿಳಿಸಿಕೊಟ್ಟು ಹೆಚ್ಚು ಜನರನ್ನು ಆಕರ್ಷಿಸುವಂತೆ ಮಾಡಲು, ಧರ್ಮ ತತ್ತ್ವಗಳನ್ನು ಬೋಧಿಸಲು, ದೀಕ್ಷಾವಿಧಿ ಮುಂತಾಗಿ ನೆರವೇರಿಸಲು, ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ** ಪ್ರವಾಸವನ್ನು ಈ ರೀತಿಯಲ್ಲಿ ಯೋಜಿಸಲು ಪ್ರಾಯೋಗಿಕವಾಗಿ ರೂಪುರೇಷೆ ಹಾಕಲಾಗಿದೆ.

ಶರಣ ಮೇಳ ಪ್ರಚಾರಾರ್ಥ ಯೋಜಿಸಲಾಗಿರುವ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ ಅವರ ಪ್ರವಾಸ ವಿವರ

1	ತಮಿಳುನಾಡು	25-10-94-ರಿಂದ 3-11-94 ರವರೆಗೆ 4-11-94 ರಂದು ಪ್ರಯಾಣಕ್ಕಾಗಿ	
2	ವಿಜಯಪುರ	5-11-94	ರಾಷ್ಟ್ರೀಯ ಬಸವ ದಳ
3	ಮೇಲೂರು	6-11-94	ವಿಜಯಪುರ ಇವರ
4	ಮಳ್ಳೂರು	7-11-94	ನೇತೃತ್ವದಲ್ಲಿ
5	ಕೋಲಾರ	8-11-94	"
6	ದೊಡ್ಡ ನೆಲ್ಲೂರುಹಳ್ಳಿ	9-11-94	"
7	ಖಾಜಿ ಸೊಣೇನಹಳ್ಳಿ	10-11-94	"
8	ಮಂಚೇನಹಳ್ಳಿ	11-11-94	"
9	ಚಿಕ್ಕಬಳ್ಳಾಪುರ	12-11-94	ರಾ.ಬ.ದಳ, ಚಿಕ್ಕಬಳ್ಳಾಪುರ
10	ಬೀಚಗಾನಹಳ್ಳಿ	13-11-94	" ಬೀಚಗಾನಹಳ್ಳಿ
11	ಹಿಂದೂಪುರ	14-11-94	" ಹಿಂದೂಪುರ
12	ತುಮಕೂರು	15-11-94	" ತುಮಕೂರು
13	ತರೀಕೆರೆ	16-11-94	" ತರೀಕೆತೆ
14	ಭದ್ರಾವತಿ	17 ಮತ್ತು 18-11-94	" ಭದ್ರಾವತಿ
15	ಶಿವಮೊಗ್ಗ	19-11-94 ರಿಂದ 24-11-94, 6 ದಿವಸ	ಶಿವಮೊಗ್ಗದವರ " ನೇತೃತ್ವದಲ್ಲಿ
16	ಹಾಸನ	25 ಮತ್ತು 26-11-94	" ಹಾಸನ
17	ಗೋಣಿಸೋಮನಹಳ್ಳಿ	27-11-94	" ಗೋ. ಸೋ. ಹಳ್ಳಿ
18	ಹಳೇಬೀಡು	28-11-94	" ಹಳೇಬೀಡು
19	ತಿಪಟೂರು	29 ಮತ್ತು 30-11-94	" ತಿಪಟೂರು
20	ಗನ್ನಾಯ್ಕನಹಳ್ಳಿ	1-12-94	" ಗನ್ನಾಯ್ಕನಹಳ್ಳಿ
21	ಚಳ್ಳಕೆರೆ	2 ಮತ್ತು 3-12-94	" ಚಳ್ಳಕೆರೆ
22	ಚಿತ್ರದುರ್ಗ	4 ಮತ್ತು 5-12-94	" ಚಿತ್ರದುರ್ಗ
23	ರಾಣೇಬೆನ್ನೂರು	6 ಮತ್ತು 7-12-94	" ರಾಣೇಬೆನ್ನೂರು
24	ಗದಗ	8 ಮತ್ತು 9-12-94	" ಗದಗ

25	ಬೈಲಹೊಂಗಲ	10-12-94	ರಾ.ಬ.ದಳ, ಬೈಲಹೊಂಗಲ
26	ಬೆಳಗಾಂವ	11 ಮತ್ತು 12-12-94	" ಬೆಳಗಾಂವ
27	ಸಂಕೇಶ್ವರ	13-12-94	ರಾ. ಬ. ದಳ, ಸಂಕೇಶ್ವರ
28	ಗಡಹಿಂಗ್ಲಾಜ್(ಮಹಾರಾಷ್ಟ್ರ)	14ಮತ್ತು15-12-94	" ಗಡಹಿಂಗ್ಲಾಜ್
29	ನಿಪ್ಪಾಣಿ "	16-12-94	" ನಿಪ್ಪಾಣಿ
30	ಮೀರಜ "	17-12-94	" ಮೀರಜ
31	ಈ ಚಲಕರಂಜಿ "	18 ಮತ್ತು 19-12-94	" ಈಚಲಕರಂಜಿ
32	ಶಿರಡೋಣ "	20-12-94	" ಶಿರಡೋಣ
33	ಮಹಾಲಿಂಗಪುರ	21-12-94	" ಮಹಾಲಿಂಗಪುರ
34	ಜಮಖಂಡಿ	22 ಮತ್ತು 23-12-94	" ಜಮಖಂಡಿ
35	ಮುಧೋಳ	24-12-94	" ಮುಧೋಳ
36	ನದಿ ಇಂಗಳಗಾಂವ	25-12-94	" ನದಿ ಇಂಗಳಗಾಂವ
37	ಬಿಜಾಪುರ	26 ಮತ್ತು 27-12-94	" ಬಿಜಾಪುರ
38	ಸೊಲ್ಲಾಪುರ	28 ಮತ್ತು 29-12-94	" ಸೊಲ್ಲಾಪುರ
39	ಮಂಗಳವಾಡ	30-12-94	" ಮಂಗಳವಾಡ
40	ಧವಳಗಿ	31-12-94	" ಧವಳಗಿ
41	ದೇವದುರ್ಗ	1 ಮತ್ತು 2-1-95	" ದೇವದುರ್ಗ
42	ಗಣಜಲಿ	3 ಮತ್ತು 4-1-95	" ಗಣಜಲಿ
43	ರಾಯಚೂರು	5 ಮತ್ತು 6-1-95	" ರಾಯಚೂರು
44	ಶಿರಗುಪ್ಪಾ [ಬಳ್ಳಾರಿ]	7 ಮತ್ತು 8-1-95	" ಶಿರಗುಪ್ಪಾ
45	ಗಂಗಾವತಿ	9-1-95	" ಗಂಗಾವತಿ

ದಿ. 10-1-95 ರಂದು ಕೂಡಲ ಸಂಗಮಕ್ಕೆ ಪ್ರಯಾಣ

1. ಕಲ್ಯಾಣ ಕಿರಣದಲ್ಲಿ ಈ ಪಟ್ಟಿಯನ್ನು ಓದುತ್ತಲೇ ರಾಷ್ಟ್ರೀಯ ಬಸವ ದಳಗಳವರು ತಮ್ಮ ಅಭಿಪ್ರಾಯ ಬರೆದು ತಿಳಿಸಬೇಕು.
2. ಯಾರಿಗಾದರೂ ಆ ದಿನಾಂಕಗಳಲ್ಲಿ ಅನಾನುಕೂಲತೆಯಿದ್ದರೆ, ಕಾರ್ಯಕ್ರಮ ಏರ್ಪಡಿಸಲು ಸಾಧ್ಯತೆ ಇಲ್ಲದೆ ಇದ್ದರೆ ಬೇಗನೆ ತಿಳಿಸಬೇಕು. ಏಕೆಂದರೆ ಅಮೂಲ್ಯವಾದ ಒಂದು ದಿನದ ಸಮಯವನ್ನು ಆಸಕ್ತಿ ಇರುವ ಬೇರೆ ಒಂದು ಊರಿಗಾದರೂ ಕೊಡಲು ಸಾಧ್ಯವಾಗುತ್ತದೆ.

3. ಈ ಪಟ್ಟಿಯಲ್ಲಿ ಕಾಣಿಸದೆ ಇರುವ ಬೇರೆ ಇನ್ನಾವುದಾದರೂ ಊರಿನವರಿಗೆ ಕಾರ್ಯಕ್ರಮ ಬೇಕಾಗಿದ್ದಲ್ಲಿ ಅವರು ತಮ್ಮ ಊರಿನ ಹೆಸರು ತಿಳಿಸಿ ಪತ್ರ ಬರೆಯಬೇಕು. ಕಾಯ್ದಿರಿಸಿದ ಪಟ್ಟಿಯಲ್ಲಿ ಬರೆದಿಟ್ಟು, ಸಂಚರಿಸುವ ಮಾರ್ಗ ತೀರಾ ದೂರವಿಲ್ಲದೆ ಇದ್ದರೆ ಯಾವುದಾದರೂ ರದ್ದಾದ ಕಾರ್ಯಕ್ರಮಗಳ ದಿನಗಳು ಸಿಕ್ಕರೆ ತಿಳಿಸಲಾಗುವುದು.

ಪ್ರವಾಸದ ಪಟ್ಟಿ ನೋಡಿದರೆ ಎಷ್ಟು ಶ್ರಮದಾಯಕವಿದು ಎಂದು ಯಾರಿಗಾದರೂ ಅನ್ನಿಸುವುದು. **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು**, ಬಸವ ಧರ್ಮ ಪೀಠದ ಮ್ಯಾನೇಜರ್ ಸೋದರಿ ನಾಗರತ್ನಾದೇವಿಯವರು, ಪ್ರಧಾನ ಸಂಚಾಲಕರಾದ ಶರಣ ನಿಜಗುಣಾನಂದ ಸ್ವಾಮಿಯವರು ಈ ಕಾರ್ಯಕ್ರಮದ ಹೊಣೆಗಾರಿಕೆ ಹೊತ್ತಿದ್ದಾರೆ. ಆದ್ದರಿಂದ ತಾವುಗಳು ಅವರ ಸಮಯ-ಶ್ರಮ ವ್ಯರ್ಥವಾಗದಂತೆ ಕಾರ್ಯಕ್ರಮ ಏರ್ಪಡಿಸಬೇಕು. ಅವರುಗಳ ಬರವನ್ನು ರಾಷ್ಟ್ರೀಯ ಬಸವ ದಳದ ಸಂಘಟನೆ, ಸ್ಫೂರ್ತಿ ಪತನವಾಗಿದ್ದಲ್ಲಿ ಪುನಶ್ಚೇತನಗೊಳಿಸಲು, ಸಂಘಟನೆ, ಸ್ಫೂರ್ತಿ ಪತನವಾಗಿದ್ದಲ್ಲಿ ಪುನಶ್ಚೇತನಗೊಳಿಸಲು, ದೀಕ್ಷೆ ಮುಂತಾದ ಕಾರ್ಯಕ್ರಮ ಮಾಡಲು ಸದುಪಯೋಗ ಪಡಿಸಿಕೊಳ್ಳಬೇಕು. ಅವರು ಬಂದ ಮರುದಿನ ಬೆಳಿಗ್ಗೆ ದೀಕ್ಷಾ ಕಾರ್ಯಕ್ರಮ ಇಟ್ಟುಕೊಂಡು ಪ್ರಚಾರ ಮಾಡಿರಬೇಕು.

ಶುಭ ಹಾರೈಕೆಗಳೊಡನೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ

ಪೂಜ್ಯ ಶ್ರೀ ಸದ್ಗುರು ಬಸವಾನಂದ ಸ್ವಾಮಿಗಳವರ ಪ್ರವಾಸ

ಶರಣ ಬಂಧುಗಳೇ,

ಬಸವ ಧರ್ಮ ಪೀಠ ಟ್ರಸ್ಟಿನ ಮತ್ತೊಬ್ಬ ಧರ್ಮ ಪ್ರಚಾರಕ ಚರಜಂಗಮರಾದ ಪೂಜ್ಯ ಶ್ರೀ ಸದ್ಗುರು ಬಸವಾನಂದ ಸ್ವಾಮೀಜಿಯವರನ್ನು ಶರಣ ಮೇಳ ಪ್ರಚಾರಕ್ಕಾಗಿ ವಾಹನ ವ್ಯವಸ್ಥೆ, ಸಿಬ್ಬಂದಿಯೊಡನೆ ಕಳಿಸಿಕೊಡಲಾಗುವುದು.

ಅವರ ಪ್ರವಾಸವನ್ನು ಸಹ ಅಕ್ಟೋಬರ್ 26 ರಿಂದ ಹಮ್ಮಿಕೊಳ್ಳಲಾಗುವುದು. ಬೆಂಗಳೂರು ಜಿಲ್ಲೆಯಿಂದ ಆರಂಭಿಸಿ ಮೈಸೂರು, ಚಿತ್ರದುರ್ಗಜಿಲ್ಲೆ, ಧಾರವಾಡ ಜಿಲ್ಲೆಗಳನ್ನು ಸೇರಿಸಿಕೊಂಡು ಅವರ ಕಾರ್ಯಕ್ರಮ ರೂಪಿಸಲಾಗುವುದು. ಆದ್ದರಿಂದ ಅವರ ಸಮಯವು ಸಾರ್ಥಕವಾಗುವಂತೆ ರಾಷ್ಟ್ರೀಯ ಬಸವ ದಳ, ಚಿತ್ರದುರ್ಗ ಮತ್ತು ಧಾರವಾಡಗಳವರು ಪ್ರವಾಸ ಕಾರ್ಯಕ್ರಮ ರೂಪಿಸಬೇಕು, ನೀವುಗಳು ವ್ಯವಸ್ಥೆ

ಮಾಡುವ ಊರುಗಳ ಪಟ್ಟಿಯನ್ನು ಸಿದ್ಧಪಡಿಸಿ ಕಳಿಸಿದರೆ ಪರಿಶೀಲಿಸಲಾಗುವುದು. ಆದ್ದರಿಂದ ಕಲ್ಯಾಣ ಕಿರಣ ಕೈಸೇರುತ್ತಲೇ ಕಾರ್ಯಕ್ರಮವನ್ನು ಈ ರಾಷ್ಟ್ರೀಯ ಬಸವ ದಳಗಳವರು ಹೇಗೆ ರೂಪಿಸುವಿರೆಂಬುದನ್ನು ಆಲೋಚಿಸಿ ಪತ್ರ ಬರೆಯಿರಿ. ಅಕ್ಟೋಬರ್ 21-22 ರಂದು ಪ್ರವಾಸದ ಪಟ್ಟಿಯನ್ನು ಖಚಿತಗೊಳಿಸಲಾಗುವುದು. ಈ ನಾಲ್ಕು ಜಿಲ್ಲೆಗಳೇ (ಬೆಂಗಳೂರು-ಮೈಸೂರು-ಚಿತ್ರದುರ್ಗ-ಧಾರವಾಡ) ಅಲ್ಲದೆ ಇನ್ನಿತರ ಊರುಗಳವರೂ ಕೇಳಿ ಪತ್ರ ಬರೆಯಬಹುದು. ಮಾರ್ಗವನ್ನು ಹೊಂದಿಸಿ ಕಾರ್ಯಕ್ರಮ ರೂಪಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ.
ಬಸವ ಮಂಟಪ, 2035, 20 ನೇ ಮೇಯಿನ್
2 ನೇ ಬ್ಲಾಕು, ರಾಜಾಜಿನಗರ
ಬೆಂಗಳೂರು-560010

ಬಸವ ತತ್ವ ತರಬೇತಿ ಶಿಬಿರ

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ 1994 ರ ಅಕ್ಟೋಬರ 16 ರಿಂದ 23 ರ ವರೆಗೆ ಬಸವ ತತ್ವ ತರಬೇತಿ ಕಮ್ಮಟವು ನಡೆಯುತ್ತಲಿದೆಯಷ್ಟೆ. ಪ್ರಸ್ತುತ ಶಿಬಿರವು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ** ದಿವ್ಯ ಸನ್ನಿಧಿಯಲ್ಲಿ, ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮಿಗಳ ಮಾರ್ಗದರ್ಶನದಲ್ಲಿ ನಡೆಯಲಿದೆ. ಶರಣ, ಬಸವಕುಮಾರ್ ಪಾಟೀಲ್, ಶರಣ. ಡಿ. ಎಸ್. ವಿಜಯಕುಮಾರ್, ಶರಣ. ಹೆಚ್. ಎಸ್. ಬಸವರಾಜ್, ಶರಣ, ಸಿದ್ದೇಶ್ವರ ಸ್ವಾಮಿ, ಶರಣೆ, ಅನ್ನಪೂರ್ಣ ಹಂಗರಗಿ ಮುಂತಾದವರು ಕಳೆದ ಸಲದ ಶಿಬಿರದಂತೆ ಯೋಗ-ಪ್ರಾಣಾಯಾಮ, ವಿವಿಧ ಆಟ, ಮನರಂಜನೆ ಮುಂತಾದ್ದು ನಡೆಸಿಕೊಡುವರು. ಬೀದರ್ ರಾಷ್ಟ್ರೀಯ ಬಸವ ದಳದವರು ನಡೆಸಿಕೊಟ್ಟ ವಿವಿಧ ಆಟಗಳು ಎಲ್ಲರನ್ನೂ ಹರ್ಷಗೊಳಿಸಿದವು.

ವಿವಿಧ ರಾಷ್ಟ್ರೀಯ ಬಸವ ದಳಗಳವರ ಹಾಡು, ಪುಟ್ಟಪುಟ್ಟ ನಾಟಕ, ಆಶುಭಾಷಣ, ಏಕಪಾತ್ರಾಭಿನಯ ಮುಂತಾದ್ದು ಪ್ರದರ್ಶಿಸಲು ಅವಕಾಶವಿದೆ. ದಿನನಿತ್ಯ ಇದಕ್ಕಾಗಿ ಸಮಯವು ಮೀಸಲಾಗಿರುತ್ತದೆ ಮತ್ತು ಶರಣ ಶರಣೆಯರು ಬೆಳಗಿನ ಮತ್ತು ಮಧ್ಯಾಹ್ನದ ಅಧಿವೇಶನಗಳಲ್ಲಿ ಬೇರೆ ಬೇರೆ ವಿಷಯ ಆಯ್ದುಕೊಂಡು ಉಪನ್ಯಾಸ-

ಪ್ರವಚನ ಮಾಡಲು ಅವಕಾಶವಿರುತ್ತದೆ. ಆಸಕ್ತಿ ಇರುವ ಶರಣ ಬಂಧುಗಳು ತಾವು ಮಾತನಾಡಲಿರುವ ವಿಷಯ ಕುರಿತು ಶರಣ. ವಿಜಯಕುಮಾರರಿಗೆ ಪತ್ರ ಬರೆದು ಪಟ್ಟಿಯನ್ನು ತಿಳಿಸಬೇಕು.

ಎಲ್ಲಾ ರಾಷ್ಟ್ರೀಯ ಬಸವ ದಳಗಳ ವತಿಯಿಂದ ಪ್ರತಿನಿಧಿಗಳು ಬಂದು ತರಬೇತಿ ಹೊಂದಬೇಕು. ಕನಿಷ್ಠ ಪಕ್ಷ ಕಡೆಯ ಮೂರು ದಿವಸ ಕಾಲವಾದರೂ ರಾ. ಬ. ದಳಗಳ ಮುಖ್ಯ ಪದಾಧಿಕಾರಿಗಳು ಬಂದು [ಪೂರ್ಣಾವಧಿ ಸಮಯ ಇರಲು ಆಗದವರಿಗೆ ಈ ಸೂತ್ರ] ರಾಜ್ಯ, ಜಿಲ್ಲಾ, ತಾಲ್ಲೂಕ್ ಮಟ್ಟದ ಸಮಿತಿಗಳ ರಚನೆಗೆ ನೆರವಾಗಬೇಕು, ಜನರು ನೇರವಾಗಿ ನಮ್ಮನ್ನು ಸಂಪರ್ಕಿಸಿ ರಾಷ್ಟ್ರೀಯ ಬಸವ ದಳಗಳನ್ನು ತೆರೆಯುತ್ತಿರುವರು. ನಂತರವಾದರೂ ಒಂದು ವ್ಯವಸ್ಥಿತವಾಗಿ ರಾಜ್ಯ, ಜಿಲ್ಲೆ, ತಾಲ್ಲೂಕು ಹೀಗೆ ಸಮಿತಿ ಮಾಡಿ ಆಗಾಗ ಸ್ಥಳೀಯವಾಗಿ ಮೀಟಿಂಗ್ ನಡೆಸಬೇಕು ಎಂದು ಹೈದರಾಬಾದಿನಲ್ಲಿ ನಡೆದ ಒಂದು ಖಾಸಗಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಜಿಲ್ಲಾ ಮಟ್ಟದ ಕಮಿಟಿಗಳವರು ತಮ್ಮ ತಮ್ಮ ಪ್ರದೇಶಗಳಲ್ಲಿ ರಾ. ಬ. ದಳಗಳ ಶಾಖೆಯನ್ನು ತೆರೆಯಬೇಕು, ನಿಯಂತ್ರಿಸಬೇಕು ಎಂಬ ಅಭಿಪ್ರಾಯ ಹೊಂದಲಾಗಿದೆ. ಈ ಬಗ್ಗೆ ಎಲ್ಲ ಶಾಖೆಗಳವರ ಅಭಿಪ್ರಾಯ ಸಂಗ್ರಹಿಸಿ ನಿರ್ಣಯ ತೆಗೆದುಕೊಳ್ಳಲಾಗುವುದು.

ಇನ್ನು ಏನಾದರೂ ಚರ್ಚಿಸಬೇಕಾದ ಅಗತ್ಯ ವಿಷಯಗಳಿದ್ದರೆ ಸದಸ್ಯರು ಸೂಚಿಸಿ ಪತ್ರ ಬರೆಯಬಹುದು. ಪ್ರತಿನಿಧಿ ಶುಲ್ಕ ಮುಂತಾದುವನ್ನು ಈ ಕೆಳಗಿನ ವಿಳಾಸಕ್ಕೆ ಮೊದಲೇ ಕಳಿಸಿಕೊಡಬೇಕೆಂದು ಕೋರಿಕೆ.

ಸೋದರಿ ಕಸ್ತೂರಿ, ವ್ಯವಸ್ಥಾಪಕರು
ಬಸವ ತತ್ತ್ವ ತರಬೇತಿ ಕಮ್ಮಟ
ಬಸವ ಗಂಗೋತ್ರಿ, ಕುಂಬಳಗೋಡು–560074
ಬೆಂಗಳೂರು ದಕ್ಷಿಣ ತಾಲ್ಲೂಕು.
ದೂರವಾಣಿ : 8437234

ಇಷ್ಟಲಿಂಗ ಕಂತೆ ಲಭ್ಯವಿದೆ

ಬಸವ ಧರ್ಮಪೀಠದ ಶರಣ. ಶಿವಲಿಂಗಪ್ಪನವರು ಕಂತೆಯ ಕಾಯಕದಲ್ಲಿ ಬಲ್ಲಿದರಾಗಿದ್ದು ಬಸವ ತತ್ತ್ವ ತರಬೇತಿ ಶಿಬಿರದ ಅವಧಿಯಲ್ಲಿ ಅವರು ಕಂತೆಯನ್ನು ಇಟ್ಟು ಕೊಡುವರು. ಆದ್ದರಿಂದ ಆಸಕ್ತ ಶರಣ ಬಂಧುಗಳು ಅತ್ಯುತ್ತಮ ಕಂತೆಯನ್ನು ಇಷ್ಟಲಿಂಗಕ್ಕೆ ಇಡಿಸಿಕೊಳ್ಳಬಹುದಾಗಿದೆ. ಬೆಂಗಳೂರು ಬಳಿಯ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಅಕ್ಟೋಬರ್ 16 ರಿಂದ 23 ರ ವರೆಗೆ ಈ ಸೌಲಭ್ಯಕ್ಕೆ ಅವಕಾಶವಿರುತ್ತದೆ.

[8 ನೇ ಪುಟದಿಂದ ಮುಂದುವರಿದಿದೆ]

ಹಿಂದೂ ಪರಂಪರೆಯ (Hindu heritage) ಹೆಸರಲ್ಲಿ ಒಂದಾಗೋಣ. ಗಣಪತಿ, ರಾಮ, ಕೃಷ್ಣ, ಹನುಮಂತರನ್ನು ಹಿಂದೂ ಏಕೀಕರಣದ ಸೂತ್ರವನ್ನಾಗಿ ಇಟ್ಟುಕೊಂಡರೆ ಪ್ರಗತಿಪರ ಹಿಂದುಗಳಾದ ಲಿಂಗವಂತರು ಸಿಖ್ಖರು, ಜೈನ-ಬೌದ್ಧರು ಎಂದೂ ಸೇರಲು ಇಷ್ಟಪಡರು. ಇವರು ತಂತಮ್ಮ ಧರ್ಮಗುರುಗಳ ಆದೇಶ ಮೀರಿ ಶ್ರೀ ಪೇಜಾವರ ಶ್ರೀಗಳ ಬಹುದೇವತೋಪಾಸಕ ವಿಚಾರಧಾರೆಗೆ ಬರಲು ಸಾಧ್ಯವೆ? ತಮ್ಮ ಧರ್ಮದ ತತ್ತ್ವಜ್ಞಾನ ತಿಳಿಯದ ಮೂಢ ಲಿಂಗವಂತರು–ಸಿಖ್ಖರು, ಜೈನ–ಬೌದ್ಧರು ಪಾಲ್ಗೊಳ್ಳಬಹುದು ಅಷ್ಟೆ. ಅವರೂ ಜಾಗೃತರಾದಾಗ ಖಂಡಿತಾ ಮೂಢನಂಬಿಕೆ ಬಿಡುವರು. ಆದ್ದರಿಂದ ಓಂಕಾರ, ರಾಷ್ಟ್ರದ ಅಖಂಡತೆ ಮುಂತಾದ ಸೂತ್ರ ಇರಿಸಿಕೊಂಡು ಹಿಂದುವಾದಿಗಳು ಬಹುದೇವತೋಪಾಸನೆ ಬೆಳೆಸುವ ಮೂಢ ಆಲೋಚನೆ ಕೈ ಬಿಡಬೇಕು ಎಂದು ನಮ್ಮ ಕಳಕಳಿಯ ಸೂಚನೆ.

ಏಕದೇವೋಪಾಸನೆ–ಸಮಷ್ಟಿಪ್ರಜ್ಞೆ

ಏಕದೇವವಾದ ಸಮಷ್ಟಿ ಪ್ರಜ್ಞೆಯನ್ನು ಬೆಳೆಸುತ್ತದೆ; ಬಹುದೇವತೋಪಾಸನೆ ಅನೈಕ್ಯತೆ ಮತ್ತು ಸ್ವಾರ್ಥಕ್ಕೆ ಕಾರಣವಾಗುತ್ತದೆ. ಇಸ್ಲಾಂ–ಕ್ರೈಸ್ತಗಳೆರಡೂ ಏಕೇಶ್ವರವಾದದ ಪ್ರತಿಪಾದಕ ಧರ್ಮಗಳಾಗಿವೆ. ಅವು ಹೆಚ್ಚಾಗಿ ಇರುವ ದೇಶಗಳಲ್ಲಿ ಬಹಳಷ್ಟು ಸ್ಥಾನಿಕ ಪಂಥಗಳು (Loco Cults) ವ್ಯಕ್ತಿಪಂಥಗಳು (Personal Cults) ಇರುವುದಿಲ್ಲ ಮತ್ತು ರಾಜಕೀಯ ಪಕ್ಷಗಳೂ ತತ್ತ್ವ–ಸಿದ್ಧಾಂತ ರಹಿತವಾಗಿ ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುವುದಿಲ್ಲ. ಒಂದು ಪಕ್ಷ ಹುಟ್ಟಬೇಕಾದರೆ ಅದರ ಹಿನ್ನೆಲೆಯಲ್ಲಿ ಒಂದು ಯಾವುದಾದರೂ ಸಿದ್ಧಾಂತ–ತತ್ತ್ವ ಇರಬೇಕು ತಾನೆ ? ನಮ್ಮ ದೇಶದಲ್ಲಿ ಹಾಗಲ್ಲ; ಒಬ್ಬ ಸ್ವಪ್ರತಿಷ್ಠೆಯ ವ್ಯಕ್ತಿ ಒಂದು ಪಕ್ಷವನ್ನು ಹುಟ್ಟು ಹಾಕುತ್ತಾನೆ. ಅದರ ಹಿನ್ನೆಲೆಯಲ್ಲಿ ಯಾವ ಸೈದ್ಧಾಂತಿಕ ಚಿಂತನೆಯೂ ಇಲ್ಲ. ಭ್ರಷ್ಟಾಚಾರವೇ ಶಿಷ್ಟಾಚಾರವಾಗಿರುವ ಈ ದೇಶದಲ್ಲಿ ಸಮಷ್ಟಿ ಪ್ರಜ್ಞೆ, ಸಮಷ್ಟಿ ಹಿತಕ್ಕಾಗಿ ವ್ಯಕ್ತಿಯ ತ್ಯಾಗ ಎಂಬ ಭೃತ್ಯಾಚಾರ ತತ್ತ್ವವೇ ಸತ್ತುಹೋಗಿದೆ. ಒಂದು ಆಟದ ತಂಡವನ್ನು ಆಯ್ಕೆ ಮಾಡುವಾಗ ಸಹ ರಾಷ್ಟ್ರೀಯ ಪ್ರಜ್ಞೆ, ಸಮಷ್ಟಿ ಪ್ರಜ್ಞೆ ಇರದು; "ನನ್ನ ದೇಶಕ್ಕೆ ಹೆಸರು ಬರಬೇಕು; ಅಂಥ ವ್ಯಕ್ತಿ ನನಗೆ ಶತ್ರುವಿದ್ದರೂ ಪರವಾಗಿಲ್ಲ; ಅವನನ್ನು ಆಯ್ಕೆ ಮಾಡೋಣ" ಎಂಬ ಪ್ರಜ್ಞೆಯಿಲ್ಲ, ತನ್ನ ಪರಿಚಿತ, ಲಂಚಕೊಡಬಲ್ಲವನಿಗೆ, ತನ್ನ ಬಂಧುವಿಗೆ ತಂಡಗಳಲ್ಲಿ ಸ್ಥಾನ ನೀಡಲಾಗುವುದು. ಪಾಕಿಸ್ಥಾನ ತಂಡದ ನಾಯಕ ಸಲೀಂ ಮಲಿಕ್ 'ದ ವೀಕ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳಿದ್ದಾರೆ."ಭಾರತದ ಕ್ರಿಕೆಟ್ ಆಟಗಾರರು ಸ್ವ–ಹಿತಕ್ಕಾಗಿ ಆಡಿದರೆ ಪಾಕಿಸ್ಥಾನಿಗಳು

ತಂಡಕ್ಕಾಗಿ ಆಡುತ್ತಾರೆ. ಪ್ರತಿ ಭಾರತೀಯ ಆಟಗಾರನಿಗೂ ಮುಂದಿನ ಪಂದ್ಯಕ್ಕೆ ಆಯ್ಕೆಯಾಗುವ ಬಗ್ಗೆ ಚಿಂತೆ ಕಾಡುತ್ತದೆಂದು ಕಾಣುತ್ತದೆ. ಆದುದರಿಂದಲೇ ಅವನು ತನ್ನ ಬಗ್ಗೆ ಮಾತ್ರ ಯೋಚಿಸುತ್ತಾನೆಯೇ ಹೊರತು ತಂಡದ ಬಗ್ಗೆ ಅಲ್ಲ. ಆದುದ-ರಿಂದಲೇ ತಂಡ ಹಾನಿ ಅನುಭವಿಸುತ್ತಿದೆ."

ಕ್ರಿಕೆಟ್ ತಂಡವೊಂದೇ ಅಲ್ಲ ಎಲ್ಲ ರಂಗಗಳಲ್ಲೂ ಇದು ತುಂಬಿದೆ. ಒಟ್ಟಾರೆ ಹಿಂದುಗಳನ್ನೇ ಆಗಲಿ, ಒಟ್ಟಾರೆ ಲಿಂಗಾಯತರನ್ನೇ ಆಗಲಿ ನೋಡಿದರೆ ಇವರಿಗೆ ಇಡೀ ಸಮುದಾಯದ ಹಿತಚಿಂತನೆ ಮಾಡುವ ಪರಿಜ್ಞಾನವೇ ಇಲ್ಲ. ತಮ್ಮ ತಮ್ಮ ಜಾತಿಗುಂಪುಗಳ ಬಗ್ಗೆ ಮೊದಲು ವಿಚಾರ ಮಾಡುತ್ತಾರೆ ; ನಂತರ ತಮ್ಮ ಜಾತಿಯ ವಲಯದಲ್ಲೇ ಬಂದಾಗ ತಮ್ಮ ಬಗ್ಗೆ ಚಿಂತನೆ ಮಾಡುತ್ತಾರೆ. ಲಿಂಗಾಯತ ಧರ್ಮ ಜಾತ್ಯತೀತ ಧರ್ಮ ; ಧಾರ್ಮಿಕ ಭ್ರಾತೃತ್ವವನ್ನು ಘೋಷಿಸುವ ಧರ್ಮ. ಮಠಾಧಿಪತಿಗಳು, ರಾಜಕೀಯ ಮುಂದಾಳುಗಳು ಕೂಡಿ ಪ್ರತ್ಯೇಕ ಗುಂಪು ಕಟ್ಟುತ್ತ ಮುಗ್ಧ ಜಾತಿಬಾಂಧವರನ್ನು ಪ್ರಚೋದಿಸುವುದನ್ನು ದಿನ ನಿತ್ಯ ಕಾಣುತ್ತೇವೆ. ಇನ್ನು ಮಠಾಧಿಪತಿಗಳನ್ನೇ ತೆಗೆದುಕೊಂಡರೆ, ವೇದಿಕೆ ಮೇಲೆ ಕುಳಿತು ಸಮನ್ವಯದ ಮಾತನಾಡಿದರೂ ಒಳಗೊಳಗೇ ತಮ್ಮ ಮಠ ಮುಂದಾಗಬೇಕು ; ತಮಗೆ ಹೆಚ್ಚು ಕೀರ್ತಿ ಬರಬೇಕು ಎಂದೇ ಚಿಂತಿಸುವರು. ಕಳೆದ ತಿಂಗಳು ಒಬ್ಬ ಪ್ರಚಾರಕರು ಭೇಟಿಯಾಗಿದ್ದರು. "ನೀವು ಏಕೋ ಕಳೆದ ಸಾರಿ ನನ್ನ ಜೊತೆ ಸರಿಯಾಗಿ ಮಾತಾಡಲಿಲ್ಲ. ಮನ-ಸ್ಸಿಗೆ ಕಳವಳವಾಯಿತು" ಎಂದರು, "ಅಹುದಪ್ಪ, ನನಗೆ ಬೇಜಾರಾಗಿಯೇ ಮಾತಾಡಲಿಲ್ಲ".

ಒಂದು ಚರ್ಚ್ ಆದರೆ ಒಬ್ಬವ್ಯಕ್ತಿ ಪಾದ್ರಿಯಾದರೆ ಕ್ರೈಸ್ತ ಧರ್ಮದ ಶಕ್ತಿ ಮತ್ತಷ್ಟು ಹೆಚ್ಚುವುದು. ಒಂದು ಮಸೀದಿ ಆದರೆ, ಒಬ್ಬ ವ್ಯಕ್ತಿ ಮುಲ್ಲಾ ಆದರೆ ಇಸ್ಲಾಂ ಧರ್ಮ-ಸಮಾಜಗಳ ಶಕ್ತಿ ಮತ್ತಷ್ಟು ಹೆಚ್ಚುವುದು. ಇಲ್ಲಿ, ಒಂದು ಮಠ ಆದರೆ ಒಬ್ಬ ಸ್ವಾಮಿ ಆದರೆ ಲಿಂಗಾಯತ ಸಮಾಜ-ಧರ್ಮಗಳ ಶಕ್ತಿ ಕುಂದುವುದು. ಏಕೆಂದರೆ ಆ ಸಂಸ್ಥೆ-ಧಾರ್ಮಿಕ ನೇತಾರ ವ್ಯಕ್ತಿ ಪ್ರತಿಷ್ಠೆ ಬೆಳೆಸಿಕೊಳ್ಳದೆ ಧರ್ಮದ-ಧರ್ಮಗುರುವಿನ ಮಹಿಮೆ ಎತ್ತಿಹಿಡಿಯುವನು. ಇಲ್ಲಿ ಇವೆರಡೂ ಮಾಡದೆ ತನ್ನ ಪ್ರಚಾರ-ಕೀರ್ತಿಯತ್ತ ಗಮನ ಹರಿಸುವನು. ಇಡೀ ಸಮಾಜ ಎತ್ತ ಸಾಗಿದೆ ಎಂಬ ಬಗ್ಗೆ ಚಿಂತನ ಮಾಡದೆ, ಪರಿಹಾರ ಹುಡುಕದೆ ಬರಿ ತಮ್ಮ ಮಠದ ಚಿಂತನೆ ಮಾಡುವವರೇ ಹೆಚ್ಚಾಗಿದ್ದಾರೆ, ಇದು ಹೋಗಬೇಕು. "ಸಮಷ್ಟಿಗಾಗಿ ವ್ಯಕ್ತಿಯು ಸ್ವಪ್ರತಿಷ್ಠೆ ತ್ಯಾಗ ಮಾಡಲು ಕಲಿಯಬೇಕು." ಎಂದು ಹೇಳಿದೆ.

ಈ ಪ್ರವೃತ್ತಿಯ ಮೂಲ ಬೇರುಗಳನ್ನು ಬಹುದೇವತೋಪಾಸನೆಯಲ್ಲಿ ನಾನು ಗುರುತಿಸುತ್ತೇನೆ. ಧರ್ಮದ ಇತಿಹಾಸದಲ್ಲಿ ಏಕೇಶ್ವರ ವಾದವನ್ನು ಎತ್ತಿಹಿಡಿಯ-ಲಿಕ್ಕಾಗಿ ಆಯಾ ದೇಶಗಳಲ್ಲಿ ಜನರು ಬಹುದೇವತೋಪಾಸನೆಯನ್ನು ತೊರೆದರು.

ಪರಿಣಾಮವಾಗಿ ಕಳೆಯುಳಿದು ಬೆಳೆಬಂದಿತು. ಈ ನಮ್ಮ ದೇಶದಲ್ಲಿ ಕಳೆಯೂ ಬೆಳೆಯೊಡನೆ ಬೆಳೆದು ಕಡೆಗೆ ಇಂದು ಕಳೆಯೇ ಅಂದರೆ ಬಹುದೇವತೋಪಾಸನೆ ಅದನ್ನು ಬೆನ್ನಟ್ಟಿ ಬರುವ ಮೂಢನಂಬಿಕೆ, ಜಾಸ್ತಿಯಾಗಿ ಬೆಳೆಯು (ಅಂದರೆ ಸೃಷ್ಟಿಕರ್ತನ ನಂಬಿಕೆ-ಅರಿವು) ನಾಶವಾಗಿಯೇ ಹೋಗಿದೆ ಎನ್ನಬಹುದು.

ಜಗತ್ತಿನಲ್ಲಿ ಒಂದು ಕಾಲದಲ್ಲಿ ತತ್ತ್ವಜ್ಞಾನ ಮೊಳೆಯುದಾಗ, ಅಧ್ಯಾತ್ಮ ಬಲಿಯದಾಗ, ವಿಶ್ವಧರ್ಮಗಳು ಹುಟ್ಟಿದಾಗ ಎಲ್ಲೆಡೆಯಲ್ಲೂ ಬಹುದೇವತೋಪಾಸನೆ-ಅಂಧಃಶ್ರದ್ಧೆ ತುಂಬಿ ತುಳುಕುತ್ತಿತ್ತು. ಆದರಲ್ಲೂ ಹಿಂದೂ ದೇಶ, ಗ್ರೀಕ್ ದೇಶ ಮತ್ತು ಆಫ್ರಿಕಾಗಳು ದೀರ್ಘಕಾಲ ದೇವತೆಗಳ ಕಲ್ಪನೆ ಉಳಿಸಿಕೊಂಡು ಬಂದವು. ಕಾಲಾ-ನಂತರದಲ್ಲಿ ಅಲ್ಲಿ ಇನ್ನಷ್ಟು ಕಡಿಮೆಯಾಯಿತು. ಆಫ್ರಿಕಾ ಗುಡ್ಡಗಾಡುಗಳಲ್ಲಿ ಆಷ್ಟಿಷ್ಟು ಕ್ಷುದ್ರದೇವತಾರಾಧನೆ, ಬಹುದೇವತೋಪಾಸನೆ ಉಳಿದಿವೆಯಾದರೂ ಹಿಂದು ಸಂಸ್ಕೃತಿಯೊಡನೆ ಇವು ಜೀವಂತವಾಗಿಯೇ ಸಾಗುತ್ತಿರುವುದು ವಿಷಾದನೀಯ. ಬಹುದೇವತೋಪಾಸನೆ ಜೊತೆಗೆ ಅಂಧಶ್ರದ್ಧೆ ಜೊತೆಗೂಡಿಯೇ ಸಾಗುವುದರಿಂದ ಪರಿಣಾಮವಾಗಿ ಅಜ್ಞಾನ-ಬಡತನ ನೆರಳಿನಂತೆ ಹಿಂಬಾಲಿಸುವವು. ಇವೆರಡರ ಜೊತೆಗೆ ಅನೈಕ್ಯತೆ ಸಹ ಕಟ್ಟಿಟ್ಟ ಬುತ್ತಿ.

ಆದಕ್ಕಾಗಿಯೇ ವಿಶ್ವಗುರು ಬಸವಣ್ಣನವರು ಈ ನಾಡಿನ ಜನರ ಎಲ್ಲ ಸಮಸ್ಯೆಗಳಿಗೂ ಬಹುದೇವತೋಪಾಸನೆಯೇ ಕಾರಣವೆಂದು ಮೊಟ್ಟ ಮೊದಲ ಪರಿಹಾರ ಸೂತ್ರವಾಗಿ ಕೊಟ್ಟದ್ದು ಏಕೇಶ್ವರವಾದ – ಲಿಂಗಾಚಾರವನ್ನು. ಪಂಚಆಚಾರಗಳ ಮರ್ಮ ಹೀಗಿದೆ.

1. ದೇವನು ಒಬ್ಬನೇ ಎಂದು ಒಪ್ಪಿ, ಅವನನ್ನು ಒಂದೇ ಆಕಾರದಲ್ಲಿ ಪೂಜಿಸು-ವುದು-ಲಿಂಗಾಚಾರ.
2. ಆ ದೇವನು ಮೆಚ್ಚಬೇಕಾದರೆ ಸತ್ಯಶುದ್ಧ ಕಾಯಕ ಮಾಡಿ-ತನ್ನ ಗಳಿಕೆಯ ಒಂದು ಪಾಲನ್ನು ದಾಸೋಹದ ಮೂಲಕ ಸಮಷ್ಟಿಗಾಗಿ ವಿನಿಯೋಗಿಸಬೇಕು-ಸದಾಚಾರ.
3. ದೇವರು ಎಲ್ಲರ ತಂದೆ, ಮಾನವರು ಆ ದೇವನ ಮಕ್ಕಳು-ಶಿವಾಚಾರ.
4. ದೇವ ತತ್ತ್ವಕ್ಕೆ ವಿರುದ್ಧವಾದ ಅನಿಷ್ಟ ಶಕ್ತಿಗಳನ್ನು ಎದುರಿಸುವ ಆತ್ಮಬಲ ಬೆಳೆಸಿಕೊಳ್ಳುವುದೇ-ಗಣಾಚಾರ.
5. ವ್ಯಕ್ತಿಗಿಂತ ಸಮಾಜ ದೊಡ್ಡದು ಎಂದು ಸಮಷ್ಟಿ ಹಿತಕ್ಕಾಗಿ ವ್ಯಕ್ತಿಯು ಕಿಂಕರನಾಗಿ ದುಡಿಯುವುದೇ-ಭೃತ್ಯಾಚಾರ.

★ ★

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಗಂಗೋತ್ರಿ

ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ.

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೆರಿಯ ಆರೋವಿಲ್ಲೆ ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12 ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ. ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ, ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆನತದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.
   ವರ್ಗ 'ಎ'–40'×60'–ವಿಸ್ತೀರ್ಣ 2400 ಚ. ಅಡಿಗಳು.
   ವರ್ಗ 'ಬಿ'–30'×40'–ವಿಸ್ತೀರ್ಣ 1200 ಚ. ಅಡಿಗಳು.
   ನಿವೇಶನಗಳಲ್ಲಿ ಬೆಳೆದ ತೆಂಗಿನಮರಗಳು ಬರುವಂತೆ ಯೋಜಿಸಲಾಗುವುದರಿಂದ ಅಳತೆಯು ಹೆಚ್ಚಿಗೆಯೂ ಆಗಬಹುದು.

ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ಅಭಿವೃದ್ಧಿಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.
3. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ 1000–00 (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
4. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100–00 (ಒಂದು ನೂರು) ರೂಗಳನ್ನು ಎಂ. ಓ. ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :
ಸೋದರಿ ಕಸ್ತೂರಿ, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಕುಂಬಳಗೋಡು–560074
ಬೆಂಗಳೂರು ದಕ್ಷಿಣ ತಾಲ್ಲೋಕು, ಬೆಂಗಳೂರು ಜಿಲ್ಲೆ.

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 21 ಕಿ. ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು 231, 227, 228, 229, 226*B*. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡಾಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿ ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಚರ್ಚಿಸುವ ವಿಷಯು

ಬಸವ ತತ್ತ್ವ ತರಬೇತಿ ಶಿಬಿರದ ಅವಧಿಯಲ್ಲಿ ಕೆಲವೊಂದು ವಿಷಯುಗಳನ್ನು ಚರ್ಚಿಸಲಾಗುವುದಿದೆ. ಆ ಬಗ್ಗೆ ಶರಣ ಬಂಧುಗಳು ಆಲೋಚನೆ ಮಾಡಿಕೊಂಡು ಬರಬೇಕು.

1. ಬಸವ ಧರ್ಮದ ಹಬ್ಬ–ಹುಣ್ಣಿಮೆ–ಉತ್ಸವ.
(ಈಗಾಗಲೇ ಪ್ರಕಟವಾಗಿರುವ ಪುಸ್ತಕ ಓದಿಕೊಂಡು ಬರಬೇಕು)
2. ಶರಣ ವ್ರತ : ಶರಣ ಮೇಳಕ್ಕೆ ಬರುವ ಮುನ್ನ ಒಂದು ವ್ರತವನ್ನು ಐಚ್ಛಿಕವಾಗಿ ಸ್ವೀಕರಿಸಬೇಕು. ಅದು ಯಾವಯಾವ ಅಂಶಗಳು, ಅಂಗಗಳಿಂದ ಕೂಡಿರಬೇಕು ಎಂದು ವಿಜಾಪುರದ ಶರಣ, ಬಿ, ಬಿ. ನಾಡಗೌಡರು ಕೇಳಿದ್ದಾರೆ. ಶರಣ ಧರ್ಮದ ವಿಶೇಷ ವ್ರತಧಾರಿಗಳು ವ್ರತದ ಅವಧಿಯಲ್ಲಿ ಚಪ್ಪಲಿ ಹಾಕಬೇಕೇ, ಹಾಕಬಾರದೆ ? ಗಡ್ಡ–ತಲೆಗೂದಲು ಬಿಡಬೇಕೇ, ಬಾರದೆ ?
3. ಏಕದೇವೋಪಾಸನೆ-ಏಕಗುರೂಪಾಸನೆ. ಇನ್ನಿತರ ಮನೆ-ದೇವರು, ಕುಲದೇವರು ಶರಣರುಗಳನ್ನು ಪೂಜಿಸಬೇಕೆ–ಬೇಡವೆ ?
4. ಮಡಿ, ಉಪವಾಸ, ವ್ರತ ಇವುಗಳ ಸ್ವರೂಪ ಹೇಗಿರಬೇಕು ?
5. ಬಸವ ಧರ್ಮದಲ್ಲಿ ಪ್ರಾಯಶ್ಚಿತ್ತ–ತಪ್ಪೊಪ್ಪಿಗೆ–ಕ್ಷಮೆ, ಇವು ಸಾರ್ವಜನಿಕ ಸ್ವರೂಪದಲ್ಲಿ ಇರಬೇಕೇ.

6. ಧರ್ಮಗ್ರಂಥ ಕುರಿತು

ಧರ್ಮಗ್ರಂಥವೊಂದನ್ನು ರಚಿಸಬೇಕೆಂಬ ಹಂಬಲದಿಂದ ಕಾರ್ಯೋನ್ಮುಖರಾಗಿದ್ದೇವಷ್ಟೆ, ಈ ದಿಶೆಯಲ್ಲಿ ಶರಣ ಬಂಧುಗಳ ಕರ್ತವ್ಯ ಹೀಗಿದೆ. ನಿಮ್ಮ ಮನಸ್ಸಿನಲ್ಲಿ ಅನೇಕ ಆಲೋಚನೆ ಇರುತ್ತವೆ ; ಧರ್ಮಗ್ರಂಥ ಕುರಿತು ಅನೇಕ ಕನಸು ಕಟ್ಟಿರುತ್ತೀರ. ಈ ಬಗ್ಗೆ ಒಂದು ದಿವಸ ಗೋಷ್ಠಿ ನಡೆಸಲಾಗುತ್ತದೆ. ನಿಮ್ಮ ಆಲೋಚನೆ ಮಂಡಿಸಲು ಅವಕಾಶವಿರುತ್ತದೆ. ಆದರೂ ಅಂದುಕೊಂಡದ್ದನೆಲ್ಲ ಪ್ರತಿಪಾದಿಸಲು ನಿಮಗೆ ಆಗಲಿಕ್ಕಿಲ್ಲ, ಸಮಯ ಸಿಗಲಿಕ್ಕಿಲ್ಲ. ಆದ್ದರಿಂದ ನೀವು ಮನೆಯಲ್ಲೇ ಕುಳಿತು ಕಾಗದದ ಮೇಲೆ ನಿಮ್ಮ ಅನಿಸಿಕೆ, ಆಲೋಚನೆ ಎಲ್ಲ ಬರೆದು ಪೂರ್ಣ ಹೆಸರು, ವಿಳಾಸ ಸಹಿತವಾಗಿ ಆ ಬರಹವನ್ನು ನಮಗೆ ಕೊಡಿರಿ.

1. ಧರ್ಮಗ್ರಂಥದ ಹೆಸರು ಏನಿರಬೇಕು ?
2. ಎಷ್ಟು ಗಾತ್ರದ್ದು ಇರಬೇಕು ?
3. ಅದರೊಳಗೆ ಏನೇನು ಇರಬೇಕೆಂದು ನಿಮ್ಮ ಅಪೇಕ್ಷೆ ?
4. ಧರ್ಮಗ್ರಂಥ ಕುರಿತು ನಿಮ್ಮ ಕಲ್ಪನೆ ಏನಿದೆ ?

ಪ್ರಸ್ತುತ ಶಿಬಿರದ ವಿಶೇಷ ಚರ್ಚಾವಿಷಯು.

೧. ಕೆಲವು ಪರಿಣಿತ ವೈದ್ಯರಿಂದ, "ಕುಟುಂಬ ನಿಯಂತ್ರಣ ಮತ್ತು ಧಾರ್ಮಿಕ ಆದೇಶ" "ಆಧುನಿಕ ವಿಜ್ಞಾನದ ನೆರವಿನಿಂದ ಕೃತಕವಾಗಿ ಮಕ್ಕಳನ್ನು ಹೊಂದುವ ಕ್ರಿಯೆಯು ಸಿಂಧುತ್ವ," ಮುಂತಾದ ವಿಷಯ ಕುರಿತು ಉಪನ್ಯಾಸವಿರುವುದು.
೨. ಕೆಲವು ವಕೀಲರಿಂದ, ವಿವಾಹ ವಿಚ್ಛೇದನ ಕುಟುಂಬ ಸಾಮರಸ್ಯ ಹೆಣ್ಣುಮಕ್ಕಳ ಆಸ್ತಿಯ ಹಕ್ಕು, ಹಿಂದೂ ಲಾ ಮತ್ತು ಮುಸ್ಲಿಂ ಲಾ ಗಳ ಪರಿಚಯ ಕುರಿತು ಉಪನ್ಯಾಸ ಇರುವುದು.
೩. ನಿಸರ್ಗ ಚಿಕಿತ್ಸೆ, ಪರಿಸರ ಸಂರಕ್ಷಣೆ, ಮಾದಕ ವಸ್ತು ಸೇವನೆಯ ದುಷ್ಪರಿಣಾಮ ಇತ್ಯಾದಿ ಕುರಿತು ಉಪನ್ಯಾಸವಿರುವುದು.
೪. ಸಾರ್ವಜನಿಕ ಹಿತಾಸಕ್ತಿಯ ಕಾನೂನು ಕ್ರಮ ಕೈಗೊಳ್ಳಲು ರಾಷ್ಟ್ರೀಯ ಬಸವ ದಳಕ್ಕೆ ಒಂದು ಕಾನೂನು ಸಲಹೆಗಾರರ ಮಂಡಳಿಯನ್ನು ಮಾಡಲಾಗುವುದು.

ರಾಷ್ಟ್ರೀಯ ಬಸವ ದಳ

೧. ರಾಷ್ಟ್ರೀಯ ಬಸವ ದಳ ಸಂಘಟನೆ ಕುರಿತು ಒಂದು ವಿಶೇಷ ಚರ್ಚೆ ಇದೆ. ರಾಜ್ಯ ಸಮಿತಿ, ಜಿಲ್ಲಾ ಸಮಿತಿ, ತಾಲ್ಲೋಕು ಸಮಿತಿ, ಗ್ರಾಮಸಮಿತಿಗಳ ಸಂಬಂಧ ಕುರಿತು ಚರ್ಚಿಸಲಾಗುವುದು ಮತ್ತು ಸಮಿತಿಗಳನ್ನೂ ರಚಿಸಲಾಗುವುದು.
೨. ಆಸ್ತಿ–ಪಾಸ್ತಿ ಖರೀದಿ ವಿಷಯದಲ್ಲಿ ಸ್ಥಳೀಯ ನಿಯಂತ್ರಣ ಒಳ್ಳೆಯದೋ ಕೇಂದ್ರದ ನಿಯಂತ್ರಣ ಒಳ್ಳೆಯದೋ ಎಂಬ ಬಗ್ಗೆ ಮುಕ್ತ ಚರ್ಚೆ ನಡೆಸಲಾಗುವುದು. ನಿಯಮಾವಳಿ ರೂಪಿಸಲಾಗುವುದು.
೩. ರಾಷ್ಟ್ರೀಯ ಬಸವ ದಳ ಹಮ್ಮಿಕೊಳ್ಳುವ ಧಾರ್ಮಿಕ ಕಾರ್ಯಕ್ರಮ, ಇತರೆ ಆಂದೋಲನ, ಸಾಮಾಜಿಕ ಚಳುವಳಿ–ಈ ಬಗ್ಗೆ ಚರ್ಚಿಸಲಾಗುವುದು.
೪. ಕೇಂದ್ರದಿಂದ ರಾಷ್ಟ್ರೀಯ ಬಸವ ದಳಗಳ ಶಾಖೆಗಳನ್ನು ಸಂದರ್ಶಿಸಿ, ಸ್ಥಳೀಯ ಸಾಧನೆ, ಕುಂದು–ಕೊರತೆ ನಿವಾರಣೆ ಮುಂತಾದುವುಗಳ ಬಗ್ಗೆ ಒಂದು ಯೋಜನೆ ಬಗ್ಗೆ ಚಿಂತನೆ ಮಾಡಲಾಗುವುದು.

ಶರಣ ಮೇಳ

ಶರಣ ಮೇಳದ ಪ್ರಚಾರ, ವ್ಯವಸ್ಥೆಯ ಸುಧಾರಣೆ, ಕಾರ್ಯಕರ್ತರ ತರಬೇತಿ, ಸ್ವಯಂ ಸೇವಕರ ಸಂಖ್ಯೆಯಲ್ಲಿ ವೃದ್ಧಿ ಮುಂತಾದುವುಗಳ ಸವಿವರ ಚರ್ಚೆ ನಡೆಯುವುದು. ಭಕ್ತಿ ಪಕ್ಷ ಸಮ್ಮೇಳನದ ಎರಡು ದಿವಸ ದಿ. 21–10–94 ಮತ್ತು 22–10–94 ರಂದು ಈ ಚರ್ಚೆಗಳು ನಡೆಯುವವು.

ಪ್ರತಿ ದಿನವೂ ಸಂಜೆ 7 ರಿಂದ ಧ್ಯಾನ ತರಗತಿ ಮತ್ತು ಪ್ರಾರ್ಥನೆ–ಧ್ಯಾನ ಪ್ರಾತ್ಯಕ್ಷಿಕೆ ನಡೆಯುವುದು. ಇಷ್ಟಲಿಂಗಾರ್ಚನೆ, ಬಸವೇಶ್ವರ ಪೂಜಾವ್ರತಗಳ ತರಬೇತಿ ಕೊಡಲಾಗುವುದು.

ಶಿಬಿರಾರ್ಥಿಗಳಿಗೆ ವಿಶೇಷ ಸೂಚನೆ : ದಾನಿಗಳು ಕೊಟ್ಟ ತಟ್ಟೆ–ಲೋಟ ಲಭ್ಯವಿವೆ, ಆದರೆ ಹಾಸಲು–ಹೊದೆಯಲು, ಸೊಳ್ಳೆಯಾಪರದೆ, ಪೂಜೆ ಸಾಮಗ್ರಿಗಳನ್ನು ಮರೆಯದೆ ತನ್ನಿರಿ.

ಶಿಬಿರದಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡುವವರು

ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ** ದಿವ್ಯ **ಅನುಮತಿಯೊಡನೆ ;**

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
೨. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ.
೩. ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮೀಜಿ.
೪. ಪೂಜ್ಯ ಶ್ರೀ ಸದ್ಗುರು ಬಸವಾನಂದ ಸ್ವಾಮೀಜಿ.
೫. ಶರಣ. ಎನ್. ಪುಟ್ಟರುದ್ರಪ್ಪ
೬. ಶರಣ. ಶ್ರೀ ಸಿದ್ಧೇಶ್ವರಾನಂದರು,
೭. ಶರಣ, ಬಸವ ಕುಮಾರ್ ಪಾಟೀಲರು.
೮. ಶರಣ. ಡಿ, ಎಸ್. ವಿಜಯಕುಮಾರ್
೯. ಶರಣ. ಬಾಣೂರು ಚನ್ನಪ್ಪ
೧೦. ಸೋದರಿ ಅನ್ನಪೂರ್ಣಾ ಹಂಗರಗಿ
೧೧. ಸೋದರಿ ಜಯಮ್ಮ ಚಂದ್ರಪ್ಪ
೧೨. ಸೋದರಿ ಸರೋಜಾ ನಾಗರಾಜು
೧೩. ಸೋದರಿ ಶಾರದಾತಾಯಿ ಭೀಮಲಿಂಗನಗೌಡ
೧೪. ಸೋದರಿ ಗಂಗಾಂಬಿಕಾ ಪಾಟೀಲ

ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರನ್ನು ಆಹ್ವಾನಿಸಲಾಗಿದೆ, ಅವರ ಉತ್ತರದ ನಿರೀಕ್ಷೆಯಲ್ಲಿದ್ದೇವೆ.

ಸ್ವಯಂ ಸೇವಾ ವಿಭಾಗ

೧. ಶರಣ. ಬಸವರಾಜಪ್ಪ ದೊಡ್ಡಬಳ್ಳಾಪುರ
೨. ಶರಣ. ಹೆಚ್. ಎಸ್, ಬಸವರಾಜು, ಭದ್ರಾವತಿ
೩. ಶರಣ. ದಾಸಪ್ಪ, ತಿಪಟೂರು

ಪ್ರತ್ಯೇಕವಾದ ವಿವರಗಳುಳ್ಳ ಆಮಂತ್ರಣ ಪತ್ರಿಕೆ ಮುದ್ರಣವಾಗುವುದು. ಕೆಲವು ವಿಶೇಷ ವಿವರವುಳ್ಳ ಕಾರ್ಡ್ ಸ್ಥಳೀಯ ಉಪಯೋಗಕ್ಕೆ ಮುದ್ರಣಗೊಳ್ಳುವವು.

ದಿ. 23–10-1994 ರಂದು ಸಮಾರೋಪ ಸಮಾರಂಭ ಮತ್ತು ಮಧ್ಯಾಹ್ನ 1–30 ಗಂಟೆಗೆ ವಿಶೇಷ ಗಣಪರ್ವ, ಮಹಾಪ್ರಸಾದ. ಆದ್ದರಿಂದ ದಾನಿಗಳು ಉದಾರವಾಗಿ ಧನಸಹಾಯವನ್ನು ಮಾಡಬೇಕೆಂದು ಕೋರುತ್ತೇವೆ, ಶಿಬಿರ ನಿರ್ವಹಣೆಗಾಗಿ ಪ್ರತ್ಯೇಕವಾಗಿ ದೇಣಿಗೆ ಸಂಗ್ರಹ ಮಾಡುತ್ತಿಲ್ಲವಾಗಿ ದಾನಿಗಳಿಂದ ಸ್ವಯಂ ಪ್ರೇರಣೆಯ ದೇಣಿಗೆ ನಿರೀಕ್ಷಿಸುತ್ತೇವೆ.

— ಸರ್ವರಿಗೂ ಆದರದ ಸುಸ್ವಾಗತ —

★ **ಶರಣರ ಬರವೆಮಗೆ ಪ್ರಾಣ ಜೀವಾಳ** ★

ಸೋದರಿ ಕಸ್ತೂರಿ, ಬಸವ ಗಂಗೋತ್ರಿ,
ಕುಂಬಳಗೋಡು–560074, ಬೆಂಗಳೂರು ದಕ್ಷಿಣ ತಾಲ್ಲೂಕು.
ಬೆಂಗಳೂರು–ಜಿಲ್ಲೆ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ
ಬಸವ ತತ್ತ್ವ ತರಬೇತಿ ಶಿಬಿರ
ಭಕ್ತಿಪಕ್ಷ ಸಮ್ಮೇಳನ
1994, ಅಕ್ಟೋಬರ ***16*** ರಿಂದ ***23*** ರ ವರೆಗೆ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಮತ್ತು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಒಂದು ವಾರದ ಬಸವ ತತ್ತ್ವ ತರಬೇತಿ ಶಿಬಿರವನ್ನು ದಿ. 16–10–1994 ರಿಂದ 23–10–1994 ರವರೆಗೆ ಏರ್ಪಡಿಸಲಾಗಿದೆ. ಬಹುಜನ ಶರಣ ಬಂಧುಗಳ ಕೋರಿಕೆಯ ಮೇರೆಗೆ ಬೆಂಗಳೂರು ಬಳಿ ಇರುವ ಬಸವ ಗಂಗೋತ್ರಿ

ಯಲ್ಲಿ ತರಬೇತಿ ಶಿಬಿರ ಇಡಲಾಗಿದೆ, ಪ್ರವಚನ. ಯೋಗಾಸನ, ಪ್ರಾಣಾಯಾಮ, ಧ್ಯಾನ, ಚರ್ಚಾ ಗೋಷ್ಠಿ ಮುಂತಾದ ಅಧ್ಯಾತ್ಮಿಕ ಚಟುವಟಿಕೆಗಳಿಂದ ಕೂಡಿದ ಶಿಬಿರವು ದಿ. 16–10–1994 ರಂದು ಬೆಳಿಗ್ಗೆ 10 ಗಂಟೆಗೆ ಆರಂಭವಾಗಿ, ದಿ. 23 ರಂದು ಮ. 3 ಗಂಟೆಗೆ ಮಂಗಲಗೊಳ್ಳುವುದು. ಶಿಬಿರ ಶುಲ್ಕ ಒಬ್ಬರಿಗೆ 150–00 ರೂ.ಗಳು

ಅಕ್ಟೋಬರ್ 21, 22, 23 ರಂದು "ಭಕ್ತಿಪಕ್ಷ ಸಮ್ಮೇಳನ"ವು ನಡೆಯಲಿದೆ, ದಿ. 21 ರಂದು ಬೆಳಿಗ್ಗೆ 10 ಗಂಟೆಗೆ ಭಕ್ತಿಪಕ್ಷ ಸಮ್ಮೇಳನದ ಪ್ರಾರಂಭೋತ್ಸವ, ದಿ. 23 ರಂದು ಬೆಳಿಗ್ಗೆ 10 ಗಂಟೆಗೆ ಸಮಾರೋಪ ಸಮಾರಂಭ. ಸಮ್ಮೇಳನ ಶುಲ್ಕ 60 ರೂಗಳು. ಸಮ್ಮೇಳನದ 3 ದಿವಸಗಳ ಕಾಲ ಮುಂದಿನ ಶರಣ ಮೇಳ, ರಾಷ್ಟ್ರೀಯ ಬಸವ ದಳ ಸಂಘಟನೆ, ಇನ್ನೂ ಮುಂತಾಗಿ ಮಹತ್ವಪೂರ್ಣ ಚರ್ಚೆಗಳನ್ನು ಮಾಡ–ಲಾಗುವುದು.

ಶರಣ ಮೇಳದ ಸಮಯದಲ್ಲಿ ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು ಸೇವಾನಿರತರಾಗುವುದರಿಂದಲೂ, ಮತ್ತು ಕಾರ್ಯಕ್ರಮಗಳ ಒತ್ತಡ ಬಹಳವಿರು–ವುದರಿಂದಲೂ ಸಂಘಟನೆ–ಸುಧಾರಣೆ ಕುರಿತು ಚರ್ಚಿಸಲು ಸಮಯವೇ ಸಾಕಾಗದು. ಆದ್ದರಿಂದ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳು ಶಿಬಿರದ ಪ್ರಶಾಂತ ಸಮಯವನ್ನು ಸದುಪಯೋಗ ಮಾಡಿಕೊಳ್ಳಬೇಕು. ಈಗ ಆಗಿರುವ ಎಲ್ಲ ರಾಷ್ಟ್ರೀಯ ಬಸವ ದಳಗಳಿಂದಲೂ ಪ್ರತಿನಿಧಿಗಳು ಆಗಮಿಸಿದರೆ ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಮುಂತಾಗಿ ಮಾಡುವ ಉದ್ದೇಶವಿದೆ. ಒಂದು ವಾರ ಕಾಲ ಬರಲು ಆಗದಂತಹ ಕಾರ್ಯಭಾರ ಉಳ್ಳವರು, ಕಡೆಯ 3 ದಿವಸಗಳ ಮಟ್ಟಿಗಾದರೂ ಬರಬೇಕು. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಗಳಿಗೆ ರಾಜ್ಯ ಸಮಿತಿ ಮತ್ತು ಜಿಲ್ಲಾ ಸಮಿತಿಗಳನ್ನು ಮಾಡ–ಲಾಗುವುದು.

ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು. ವಿವರಗಳಿಗಾಗಿ ಪತ್ರ ಬರೆಯುವವರು **ಸೋದರಿ ಕಸ್ತೂರಿ,** ವ್ಯವಸ್ಥಾಪಕರು, ಬಸವ ಗಂಗೋತ್ರಿ, ಕುಂಬಳಗೋಡು–560074. ತಾ–ಬೆಂಗಳೂರು ದಕ್ಷಿಣ, ಇಲ್ಲಿಗೆ ಬರೆಯಬೇಕು.

ವಿ. ಸೂ: 1995ರ ಜನವರಿ 12 ರಿಂದ 15 ರ ವರೆಗೆ ನಡೆಯುವ ಎಂಟನೆಯ **ಶರಣ ಮೇಳದ** ಪ್ರಚಾರ ಸಾಮಗ್ರಿಗಳಾದ ಕರಪತ್ರ, ಭಿತ್ತಿಪತ್ರ, ಸಿನಿಮಾ ಸ್ಲೈಡ್, ರಸೀತಿ ಪುಸ್ತಕ ಮುಂತಾದುವನ್ನು ಮುಕ್ತಾಯ ದಿನದಂದು ವಿತರಿಸಲಾಗುವುದು.

ದಿ. 15–9–1994

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲ ಸಂಗಮ–587115

ಶಿಸ್ತು-ಸಮುದಾಯ ಜೀವನಕ್ಕೆ ಕರೆ

ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಒಂದು ಶಿಸ್ತಿನ ಚೌಕಟ್ಟಿಗೆ ಸ್ವಯಂ ಪ್ರೇರಣೆಯಿಂದ ಒಳಪಡಬೇಕು. ಅದೇ ಸಮುದಾಯ ಜೀವನ. ಕೇಂದ್ರವು ಬಸವ ಧರ್ಮ ಸಂಸತ್ ಸಭೆ, ಶರಣರ ಮಹಾಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಪಾಲಿಸಬೇಕು.

ಕೆಲವೊಮ್ಮೆ ಅನಿವಾರ್ಯವಾಗಿ ತುರ್ತು ನಿರ್ಣಯ ತಗೊಂಡು ಆಚರಣೆಗೆ ಸ್ಥಳೀಯವಾಗಿ ತಂದರೂ ಅದನ್ನು ಮುಂದಿನ ಗಣಸಭೆಯಲ್ಲಿಟ್ಟು ಚರ್ಚಿಸಿ ಅನುಮೋದನೆ ಪಡೆಯಬೇಕು. ಒಂದು ವೇಳೆ ಯಾವುದೋ ಒಂದು ರಾಷ್ಟ್ರೀಯ ಬಸವ ದಳ ಕೈಗೊಂಡ ಕೆಲಸ ಬಸವ ಧರ್ಮದ ಚೌಕಟ್ಟಿಗೆ ಒಳಪಡದು ಎಂದು ಶರಣ ಬಂಧುಗಳ ಸಭೆ ನಿರ್ಣಯಿಸಿದಲ್ಲಿ ಆ ಆಚರಣೆಯನ್ನು ನಿಸ್ಸಂಕೋಚವಾಗಿ ತೊರೆಯಬೇಕು. ಅತ್ಯಂತ ಅಶಿಸ್ತಿನ ಸಮಾಜವಾಗಿರುವ ಲಿಂಗವಂತರಲ್ಲಿ ಮತ್ತು ಇತರ ಹಿಂದುಗಳಲ್ಲಿ ಶಿಸ್ತು–ಏಕರೂಪತೆ ಬರಲು ಇದು ಅತ್ಯಗತ್ಯ. ಉದಾಹರಣೆಗೆ, ಓರ್ವ ಧರ್ಮಾಭಿಮಾನಿ ನಿಷ್ಠಾವಂತ ಶರಣರು ಬಂದು, "ನಮ್ಮಲ್ಲಿ ಒಂದು ಮಠವಿದೆ, ಅಲ್ಲಿ ಬಸವ ಮಂಟಪ ಮಾಡಿದ್ದೇವೆ. ಅಲ್ಲಿ ಒಂದು ನಂದಾದೀಪ ಹೊತ್ತಿಸಬೇಕಾಗಿದೆ. ತಾವು ಬಂದು ಉದ್ದೀಪಿಸಿರಿ. ಅದಿನ್ನು ನಿರಂತರವಾಗಿ ಉರಿಯುತ್ತದೆ" ಎಂದರು. ನನಗೆ ಸೋಜಿಗವಾಯಿತು. ಇದೇಕೆ ನಿಮ್ಮಲ್ಲಿ ಇಂಥ ಯೋಜನೆ ಹಾಕಿದಿರಿ, ಧರ್ಮಪಿತರು ಏನು ಹೇಳಿದ್ದಾರೆ?

"ಹತ್ತುಮತ್ತರ ಭೂಮಿ ಬತ್ತುವ ಹಯನು
ನಂದಾದೀವಿಗೆಯನಿಡಿಸಿಹೆವೆಂಬವರ
ಮುಖವ ನೋಡಲಾಗದು, ಅವರ ನುಡಿಯ ಕೇಳಲಾಗದು."

ಎಂದು ಪ್ರಶ್ನಿಸಿದೆ.

"ಇದರಿಂದ ಜನರು ಆಕರ್ಷಿತರಾಗುವರು. ಬಸವ ಮಂಟಪಕ್ಕೆ ಜನರು ಹೆಚ್ಚಾಗಿ ಬರುವರು........"ಅವರು ವಿವರಿಸಿದರು.

"ಬೇಡ ; ಇಂಥ ಪ್ರವೃತ್ತಿ ಬೆಳೆಸುವುದು ಬೇಡ. ತತ್ವವನ್ನು ತಿಳಿದೇ ಬರಲಿ, ತಿಳಿಯಲೆಂದೇ ಬರಲಿ. ಜನಾಕರ್ಷಣೆಗೆ ನಾವು ಸ್ವಲ್ಪ ಅಡ್ಡದಾರಿ ಹಿಡಿದರೆ ಅದನ್ನೇ ಕಾಯುವ ಮೂಢರು ಇನ್ನಷ್ಟು ಒಳದಾರಿಗಳನ್ನು ಹುಡುಕುವರು. ತಾತ್ವಿಕ ಚ್ಯುತಿ ಬರದ ಬೇರೆ ಯೋಜನೆ ಹಾಕೋಣ" ಎಂದೆ. ಒಪ್ಪಿದರು.

ಬಸವ ಕಿರಣ ಪತ್ರಿಕೆ 28–8–94 ರ ಸಂಚಿಕೆಯಲ್ಲಿ ಪುಟ. 3 ರಲ್ಲಿ ಶರಣ. ಡಿ. ಎಸ್. ವಿಜಯಕುಮಾರ್ ಅವರು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಣೆ ಕುರಿತು ಕೆಲವು ಸೂಚನೆ ನೀಡಿದ್ದಾರೆ. ಸಮಯಾಭಾವದಿಂದ ಅವರು ನಮ್ಮ ಒಡನೆ ಚರ್ಚಿಸಿಲ್ಲ. ಆದ್ದರಿಂದ ಇಂಥ ಕೆಲವು ಸಂಗತಿ ಕುರಿತು ವೈಯಕ್ತಿಕವಾಗಿ ಅಭಿಪ್ರಾಯ ನೀಡಿದರೂ ನಂತರ ಶರಣರ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯಬೇಕೆಂದು ಮಾದರಿಯಾಗಿ ಎರಡು ಉದಾಹರಣೆ ನೀಡಿ ಸೂಚಿಸಿದ್ದೇವೆ. —**ಮಾತಾಜಿ**

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

ಎಂಟನೆಯ ಶರಣ ಮೇಳ

1995 ನೆಯ ಜನವರಿ 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988 ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ (ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಎಂಟನೆಯ ಶರಣ ಮೇಳವು 1995ನೇ ಇಸವಿಯ ಜನವರಿ 12, 13, 14 ಮತ್ತು 15ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ :	**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,**
ಬಸವ ಮಂಟಪ, 2035,	ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
2ನೇ ಬ್ಲಾಕ್, ಕಾರ್ಡ್ ರಸ್ತೆ,	ಕೂಡಲಸಂಗಮ–587115.
ರಾಜಾಜಿನಗರ, ಬೆಂಗಳೂರು–560010	ತಾ–ಹುನಗುಂದ, ಜಿಲ್ಲೆ–ಬಿಜಾಪುರ
ದೂರವಾಣಿ : 3325335	ದೂರವಾಣಿ : S.T.D. 08351–74/838

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂ ಪ್ರೇರಣೆಯಿಂದ ಕೊಡುಗೆ ನೀಡಿರಿ.

1. ಮಹಾಪೋಷಕರು 5000 ರೂ ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

ಪ್ರತಿ ವರ್ಷವೂ ತಮ್ಮ ದೇಣಿಗೆಯು ಶರಣ ಮೇಳದಲ್ಲಿ ಸಲ್ಲಬೇಕು ಎನ್ನುವವರು 5000 ರೂಗಳ ನಿಧಿಯನ್ನಿಟ್ಟು, ಆ ಮುದ್ದುವಟ್ಟಿನ ಬಡ್ಡಿ ನಿರಂತರವಾಗಿ ಬರುವಂತೆ ವ್ಯವಸ್ಥೆ ಮಾಡಲು ಯೋಜನೆಯಿದೆ. ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ. *State Bank of India, Koodala Sangama* ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಅಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೆ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ ಮತ್ತು ವಿಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

ವಿ.ಸೂ : ಶರಣ ಮೇಳದಲ್ಲಿ ಭಾಗಿಗಳಾಗುವ ಎಲ್ಲ ಶರಣ ಬಂಧುಗಳು ಪವಿತ್ರ ಮೇಲ್ವಸ್ತ್ರ (ಬೆಲೆ–16ರೂ)–ಸ್ಕಾರ್ಫ್ ಕಡ್ಡಾಯವಾಗಿ ಧರಿಸಬೇಕು. ಗಂಡುಮಕ್ಕಳು ಪಟ್ಟೋಕ್ಕನದ ಟೋಪಿ (ಬೆಲೆ 13 ರೂ) ಧರಿಸಬೇಕು.

ಗುರು ಚರಣಕ್ಕೆ ನುಡಿ ನೈವೇದ್ಯ

ಸುಜ್ಞಾನವ ಕೊಟ್ಟ ಗುರುವೇ ನಿಮ್ಮ
ಮಹಿಮೆ ನಾನೆಂತು ಬಣ್ಣಿಸಲಿ ? ||ಪ||

ಅಜಗಣ್ಣ ಮುಕ್ತಾಯಕ್ಕಳಿಗೆ ಗುರುವಾದಂತೆ
ಸದ್ಗುರು ಲಿಂಗಾನಂದರು ಎನಗಾದರು ಗುರು
ತಂದೆ ತಾಯಿ ಬಂಧು ಬಳಗ ಎಲ್ಲವೂ ಆಗಿ
ದೀಕ್ಷಾ, ಶಿಕ್ಷಾ ಗುರು ಎನಗಾದರು ||೧||

ತಾನು ತನ್ನದು ತನ್ನವರೆನ್ನದೆ
ಮೋಹ ರಹಿತ ಸರ್ವತ್ಯಾಗಿಯಾಗಿ
ರಾಗ ದ್ವೇಷಗಳ ಮನದಿಂದ ಕಿತ್ತೆಸೆದು
ನಿರಾಭಾರ ಚರಜಂಗಮ ಮೂರ್ತಿಯಾದಿರಿ ||೨||

ವಿಶ್ವಗುರು ಬಸವಣ್ಣ ತನ್ನ ಮಹಿಮೆಪೂರೈಸಲು
ನಿಮ್ಮನ್ನೆ ಆರಿಸಿದಾ, ತಂದೆಯ ಆದೇಶದಂತೆ
ವಚನ ಸಾಹಿತ್ಯ ಹೆತ್ತತಾಯಿಯೆಂದು
ತಲೆಯ ಮೇಲೆ ಹೊತ್ತು ಸಾಗಿದಿರಿ ||೩||

ನಾಡಿನಲ್ಲೆಲ್ಲ ಸಂಚರಿಸಿ ಕ್ರಾಂತಿಕಹಳೆಯೂದಿ
ಜನಜಾಗೃತಿಯ ಮಾಡಿ ಬಸವ ತತ್ವದ ಬೀಜ ಬಿತ್ತಿದಿರಿ
ಎಲ್ಲರ ಹೃದಯದಲಿ ಜ್ಞಾನದೀಪವ ಹಚ್ಚಿ
ಅರಿಯುವಂತೆ ಮಾಡಿದಿರಿ ವಿಶ್ವಗುರು ಬಸವಣ್ಣನ ||೪||

ಅಂದು ಅಕ್ಕಮಹಾದೇವಿ ಅನುಭವ ಮಂಟಪಕೆ
ಬಂದಂತೆ ಇಂದು ಮಾತೆಮಹಾದೇವಿ ತಾ ಬಂದು
ಕಟ್ಟಿದಿರಿ ಮಹಿಳಾ ಜಗದ್ಗುರು ಪೀಠವನು
ಕೊಟ್ಟಿರೀ ಜಗನ್ಮಾತೆಯು ಪೀಠವನ್ನಲಂಕರಿಸಲು ||೫||

ನಿಮ್ಮತಲೆಗೆ ಹೂತಹೆನಲ್ಲದೆ ಹುಲ್ಲುತಾರೆ
ಎಂಬ ಅಕ್ಕನ ಆದೇಶದಂತೆ ಗುರುವಿಗೆ
ಹೆಗಲಿಗೆ ಹೆಗಲು ಕೊಟ್ಟು ನಿಂತರು ಮಾತಾಜಿಯಾಗಿ
ಬಸವ ಧರ್ಮದ ಪರಿಮಳ ಬೀರುತಲಿ ||೬||

ಜ್ಞಾನ ದೇಗುಲವೆ ತಾವಾಗಿ ತನುಮನವ
ತೇಯ್ದರು ಶ್ರೀ ಗಂಧದಂತೆ, ಜ್ಞಾನ ಸರಸ್ವತಿಯೇ
ಮಾತೆಯಾಗಿ, ಗ್ರಂಥಭಂಡಾರವೇ ತಾವಾಗಿ
ಸಾಹಿತ್ಯದ ಹೊನಲನ್ನೆ ಹರಿಸಿದರು ||೭||

ಕೂಡಲ ಸಂಗಮದಲಿ "ಬಸವ ಧರ್ಮಪೀಠ" ಸ್ಥಾಪಿಸಿ
ಶರಣರೆಲ್ಲರೂಸೇರಿ ಪೀಠಾಧಿಪತಿಯನ್ನಾಗಿ ಮಾಡಿ
ನಿಮ್ಮಲ್ಲೆ ಬಸವಣ್ಣನ ಕಂಡು ಪ್ರವಚನ ಪಿತಾಮಹ
ಲಿಂಗಾನಂದಗೆ ಜಯವಾಗಲೆಂದು ಸಂತಸಪಡುತಿಹರು ||೮||

ನಿಮ್ಮ ಬೆನ್ನ ಬಳಿಯುವಳಾಗಿ ನಿಮಗೆ
ನಾನೇನು ಸಮರ್ಪಿಸಲಿ ? ಆ ನಿಮ್ಮ ಆಶೀರ್ವಾದ
ವೊಂದೇ ಸಾಕು ಬಾಳುಜೇನಾಗಲು ಈ ನುಡಿನೈವೇದ್ಯ
ವನ್ನರ್ಪಿಸಿ ಕೃತಾರ್ಥಳಾಗುವೆ ನಿಮ್ಮ ಪದತಳದಲ್ಲಿ ||೯||

ನೂರಾರು ವರುಷ ಬಾಳಿರಿ
ನೂರಾರು ದೀಪ ಬೆಳಗಿರಿ
ನೂರಾರು ದೀಪ ಬೆಳಗುವಂಥ
ಬಸವ ಜ್ಯೋತಿ ನೀವೇ ಆಗಿರಿ ||೧೦||

—ಶರಣೆ. ಎಂ. ರತ್ನ ನಾಗನಗೌಡ, ಬಳ್ಳಾರಿ.

ಬಸವ (ಲಿಂಗಾಯತ) ಧರ್ಮದ ಷಟ್‌ಸೂತ್ರಗಳು

1. ಧರ್ಮಗುರು – ವಿಶ್ವಗುರು ಬಸವಣ್ಣನವರು.
2. ಧರ್ಮ ಸಂಹಿತೆ – ಸಮಾನತೆ ಸಾರುವ ವಚನ ಸಾಹಿತ್ಯ.
3. ಧರ್ಮ ಲಾಂಛನ – ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.
4. ಧರ್ಮ ಕ್ಷೇತ್ರ – ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ.
5. ಧರ್ಮ ಧ್ವಜ –ಷಟ್ಕೋನ ಸಹಿತ ಬಸವ ಧ್ವಜ.
6. ಧರ್ಮದ ಧ್ಯೇಯ –ಜಾತಿ ವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

'ಲಿಂಗಯ್ಯಗೆ ಮಂಗಳಾರತಿ'

ಆರತಿ ಬೆಳಗುವೆ ಲಿಂಗಯ್ಯಗೆ
ಅಂಗಯ್ಯಲಿರುವ ಇಷ್ಟಲಿಂಗಗೆ ॥ಪ॥

ವಿಶ್ವದ ರೂಪವೆ ತಾನದವಗೆ
ಬಸವಣ್ಣನಿಂದಲಿ ಬಂದವಗೆ ॥೧॥

ಆಕಾಶಕಿಂತಗಲ ಹರಡಿದಗೆ
ಪಾತಾಳದಿಂ ಕೆಳಗೆ ಪಾದುಳ್ಳಗೆ ॥೨॥

ಬ್ರಹ್ಮಾಂಡದಿಂದಾಚೆ ಮುಕುಟುಳ್ಳಗೆ
ಚುಳುಕಾಗಿ ಅಂಗೈಲಿ ಕುಳಿತವಗೆ ॥೩॥

ಬಸವ ಚನ್ನಬಸವ ಸಿದ್ಧರಾಮಲ್ಲಮರು
ಧರಿಸಿ ಪೂಜಿಸಿದಂಥ ಚಿನ್ಮಯಗೆ ॥೪॥

ಅಕ್ಕ, ನಾಗಮ್ಮ, ನೀಲಮ್ಮ, ಲಿಂಗಮ್ಮ
ಲಕ್ಕಮ್ಮ ಶರಣೆರು ಸುತಿಸಿದಗೆ ॥೫॥

ಕಾಯಕ ಹಿರಿದೆಂದು ಧರೆಯಲ್ಲಿ ಸಾರಿದ
ನುಲಿಯ ಚಂದಯ್ಯಗೆ ಒಲಿದವಗೆ ॥೬॥

ಮೇದಾರ ಕ್ಯಾತಯ್ಯ ಅಂಬಿಗರ ಚೌಡಯ್ಯ
ಮೋದದಿಂ ಭಜಿಸಿದ ಮಹಲಿಂಗಗೆ ॥೭॥

ಸಮಗಾರ ಹರಳಯ್ಯ ಮಡಿವಾಳ ಮಾಚಯ್ಯ
ಸಮತೆಯಿಂ ಪೂಜಿಸಿದ ಗುರುಲಿಂಗಗೆ ॥೮॥

ಸಕಲ ಶರಣ ಶರಣೆಯರೆಲ್ಲ ಭಜಿಸುವ
ಸಕಲಿಷ್ಟ ಕೊಡುವ ಇಷ್ಟಲಿಂಗಗೆ ॥೯॥

—ಎಂ. ವೀರಭದ್ರಸ್ವಾಮಿ, ಚಳ್ಳಕೆರೆ.

ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹಕಾರಣಿಕ ಪರಶಿವನ ಘನ ತೇಜ
ಜಯತು ಕರುಣಾಸಿಂಧು ಭಕ್ತಜನ ಬಂಧು
ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವಾ ॥

ಸ್ವಾತಂತ್ರ್ಯದ ಕನಸುಗಳು ಇಲ್ಲಿ ನನಸಾಗುತ್ತಿವೆ

ಬಿಡುಗಡೆಯಾದ ನಾಡಿನಲ್ಲಿ ಎಲ್ಲರೂ ಸಮಾನರು, ಸಮಾನ ಹಕ್ಕು ಹೊಂದಿರುವರು, ಸರ್ವರಿಗೂ ಸಮಬಾಳು ಇದು ಕವಿವರ್ಯರ ಆಶಯ. ಈ ಆಶಯವನ್ನು ಸಾಕಾರಗೊಳಿಸಿ ಸಮಾಜ ಮತ್ತು ಸಮುದಾಯವನ್ನು ಸಮೃದ್ಧಗೊಳಿಸುವುದೇ ನಮ್ಮ ಸರ್ಕಾರದ ಪರಮಧ್ಯೇಯ. ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಸಮುದಾಯದ ಆರೋಗ್ಯ, ಶಿಕ್ಷಣ ಸಾಕ್ಷರತೆ, ಬಡತನದ ನಿರ್ಮೂಲನೆ ವಸತಿ ಸೌಲಭ್ಯ ಕಲ್ಪನೆಗೆ ಆದ್ಯತೆ.

ಜವಾಬ್ದಾರಿಯುತ, ಕ್ರಿಯಾಶೀಲ, ಸ್ವಚ್ಛ ಮತ್ತು ಪಾರದರ್ಶಕ ಆಡಳಿತದ ಮೂಲಕ ಜನಸಮುದಾಯಕ್ಕೆ ಸ್ಪಂದಿಸುತ್ತಿರುವ ನಮ್ಮ ಸರ್ಕಾರ, ವಿವಾದಗಳಿಂದ ಗಾವುದ ದೂರ. ಜನಮನಕ್ಕೆ ಬಲು ಹತ್ತಿರ. ಮಾನ್ಯ ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪ ಮೊಯಿಲಿ ಅವರ ನೇತೃತ್ವದ ಸಾಧಿಸಿರುವ ಮೈಲಿಗಲ್ಲುಗಳು ಹಲವು. ಶೋಷಣಾರಹಿತ ದಕ್ಷ ವ್ಯವಸ್ಥೆ ನಿರ್ಮಿಸಲು ಸಾಮಾಜಿಕ, ಆರ್ಥಿಕ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಜಾರಿ ಮಾಡಿರುವ ನಿರ್ಣಯಗಳು ಜನಮನ್ನಣೆಗೆ ಪಾತ್ರ. ಕೋಮು ಸೌಹಾರ್ದವನ್ನು ಕಾಪಾಡಿಕೊಂಡು ಪ್ರಗತಿಗೆ ಪೂರಕ ವಾತಾವರಣ ಸೃಷ್ಟಿ. ಹಿಂದುಳಿದವರ, ಅಲ್ಪಸಂಖ್ಯಾತರ, ಪರಿಶಿಷ್ಟಜಾತಿ, ವರ್ಗಗಳ ಮತ್ತು ಸಮಾಜದ ಎಲ್ಲಾ ಸ್ತರಗಳ ದುರ್ಬಲ ಹಾಗೂ ಬಡಜನರ ಏಳಿಗೆಯನ್ನೇ ಏಕೈಕ ಉದ್ದೇಶವಾಗಿಟ್ಟುಕೊಂಡು ಶ್ರಮಿಸುತ್ತಿರುವ ಸರ್ಕಾರ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಂದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದೆ.

ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಸರ್ಕಾರ ಘೋಷಿಸಿರುವ ನೂತನ ಕಾರ್ಯಕ್ರಮ :

2 ಲಕ್ಷ ಗೃಹ ನಿವೇಶನ ಹಾಗೂ 1 ಲಕ್ಷ ಮನೆಗಳನ್ನು ಹಂಚಿಕೆ ಪ್ರಸಕ್ತ ಸಾಲಿನಲ್ಲಿ ಆಶ್ರಯ ಮನೆಗಳನ್ನು ಹಂಚಲು 1 ಲಕ್ಷ ಫಲಾನುಭವಿಗಳನ್ನು ಗುರುತಿಸುವುದು, ವೃತ್ತಿ ಶಿಕ್ಷಣ ಹಾಗೂ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿಗಳಿಗೆ ಮಾಹೆಯಾನ ಭೋಜನ ವೆಚ್ಚ ರೂ.400 ಗಳಿಗೆ ಏರಿಕೆ. ಪ್ರತಿ ಜಿಲ್ಲೆಗೊಂದರಂತೆ 30 ಲಕ್ಷ ರೂ. ವೆಚ್ಚದಲ್ಲಿ ಪಿ.ಯು.ಸಿ. ಕಾಲೇಜು ವಿದ್ಯಾರ್ಥಿಗಳಿಗಾಗಿ 20 ಹೊಸ ವಿದ್ಯಾರ್ಥಿ ನಿಲಯಗಳ ಸಾಧನೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ಎಂ. ಫಿಲ್ ಮತ್ತು ಪಿ.ಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಕ್ರಮವಾಗಿ ರೂ. 8 ಸಾವಿರ ಹಾಗೂ 10 ಸಾವಿರರಂತೆ ನಗದು ಪುರಸ್ಕಾರ ಯೋಜನೆ. ಈ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಭೋಜನ ಮತ್ತು ವಸತಿ ವೆಚ್ಚಗಳನ್ನು ಪಡೆಯಲು ಆದಾಯ ಮಿತಿ ತೆಗೆದುಹಾಕುವ ನಿರ್ಧಾರ. ಇದಕ್ಕಾಗಿ 18 ಕೋಟಿ ರೂ. ಹೆಚ್ಚುವರಿ ಹಣ. ಮೊದಲ ಬಾರಿಗೆ ಡಾ॥ ಅಂಬೇಡ್ಕರ್ ವಸತಿ ಯೋಜನೆಯಡಿ 1 ಲಕ್ಷ ಮನೆಗಳ ನಿರ್ಮಾಣ. ವಿಶೇಷ ಕಾರ್ಯಕ್ರಮವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1 ಸಾವಿರ ಮನೆಗಳಂತೆ ಆಗಸ್ಟ್ 30 ರೊಳಗೆ 2. 12 ಲಕ್ಷ ಮನೆಗಳ ಪೂರ್ಣಗೊಳಿಸುವಿಕೆ. ಭಾಗ್ಯಜ್ಯೋತಿ ಕಾರ್ಯಕ್ರಮದಡಿ 3 ಲಕ್ಷ ಹೊಸ ವಿದ್ಯುತ್ ಸಂಪರ್ಕ.

ಶ್ರೀ ಮೊಯಿಲಿಯವರು ನೇತೃತ್ವದ ಸರ್ಕಾರದ ಸಾಧನೆ ಕಿರುನೋಟ

ಕೈಗಾರಿಕೆ :– ಧೀರ್ಘಕಾಲದಿಂದ ನೆನಗುದಿಗೆ ಬಿದ್ದಿದ್ದ ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಗೆ ಚಾಲನೆ. ಮಂಗಳೂರಿನಲ್ಲಿ 9ದಶ ಲಕ್ಷ ಟನ್ ಸಾಮರ್ಥ್ಯದ ಪೆಟ್ರೋಲಿಯಂ ಶುದ್ಧೀಕರಣ ಘಟಕ ಪೂರ್ಣಗೊಳ್ಳುವಿಕೆ. **ನೀರಾವರಿ :**– ನೀರಾವರಿ ಕ್ಷೇತ್ರಕ್ಕೆ 700 ಕೋಟಿ ರೂ. ವೆಚ್ಚದಲ್ಲಿ 85000–ಹೆಕ್ಟೇರ್ ಹೆಚ್ಚುವರಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ. ಕೃಷಿ ಕ್ಷೇತ್ರಕ್ಕೆ 93–94 ಕ್ಕೆ 23 ಕೋಟಿ ರೂ. ವಿನಿಯೋಗ. ವಿದ್ಯುತ್ ಉತ್ಪಾದನೆಯನ್ನು 7000 ಕೋಟಿ ಮೆಗಾವಾಟ್ಸ್‌ಗೆ ಹೆಚ್ಚಿಸಲು ಕಾರ್ಯಕ್ರಮ. 2 ಲಕ್ಷ ಗೃಹ ನಿವೇಶನಗಳ ಹಂಚಿಕೆ, 150 ಕೋಟಿ ರೂ. ವೆಚ್ಚದಲ್ಲಿ 1 ಲಕ್ಷ ಮನೆಗಳ ನಿರ್ಮಾಣ.

ಸ್ವಾತಂತ್ರ್ಯೋತ್ಸವದ 'ಆಚರಣೆಯ' ಸವಿ ನೆನಪಿನಲ್ಲಿ ಸಮಗ್ರ ಸಮುದಾಯದ ಸೇವೆಗೆ ಹೆಚ್ಚಿನ ಹುರುಪಿನಿಂದ ಸನ್ನದ್ಧವಾಗಿರಲು ಸರ್ಕಾರ ಕಟಿಬದ್ಧವಾಗಿದೆ.

—ಕರ್ನಾಟಕ ವಾರ್ತೆ.



ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಸ್ವಾಮೀಜಿಯವರ **64** ನೆಯ ಹುಟ್ಟುಹಬ್ಬಕ್ಕೆ
ಕಲ್ಯಾಣ ಕಿರಣದ ಶುಭಾಶಯಗಳು.